# ಚಿಂತನ ಬಯಲು

ತ್ರೈಮಾಸಿಕ

ISSN 2278-2192

ಸಂಪುಟ 3 ಸಂಚಿಕೆ 3 ಜನವರಿ-ಮಾರ್ಚ್ 2015



Volume 3, Issue 3, January-March 2015

# ಚಿಂತನ ಬಯಲು

ಸಂಪಾದಕಿ
**ರೇಶ್ಮಾ ಜಿ. ಭಟ್**

ಸಂಪಾದಕೀಯ ಸಲಹೆ
**ಡಾ. ಅಜಕ್ಕಳ ಗಿರೀಶ ಭಟ್**
**ಡಾ. ಶ್ರೀಧರ್ ಎಚ್.ಜಿ.**
**ಡಾ. ವರದರಾಜ ಚಂದ್ರಗಿರಿ**
**ಡಾ. ಜಿ.ಬಿ. ಹರೀಶ್**
**ಶ್ರೀ ಎಂ.ಎ. ಸುಬ್ರಹ್ಮಣ್ಯ**

**ಚಿಂತನ ಬಯಲು**
ನಂ. 15–109, ಮೊಡಂಕಾಪು ಅಂಚೆ
ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ – 574 219

**CHINTHANA BAYALU**
Kannada Quarterly; A Peer Reviewed Journal
Volume 3, Issue 3, Jan-March 2015

Edited, Published, Printed & Owned by
**Reshma G. Bhat**
Door No. 15-109, Modankapu Post
Bantwal Taluk, Dakshina Kannada - 574 219
Karnataka
Phone : 9449772651
Email : chinthanabayalu@gmail.com

© : Reserved

Price : Rs. 50

Pages : 64

ಮುಖಪುಟ : ಬಿರುಬೇಸಿಗೆಯಲ್ಲಿ ಪಶ್ಚಿಮ ಘಟ್ಟದಲ್ಲೊಂದು ಪುಟ್ಟ ಜಲಪಾತ – ದಿಡುಪೆ
Cover Photo by : **Atheetha Brahma**

Cover Design : **Kallur Nagesh**

Designed & Printed at :
**Aakrithi Prints**
Maximus Complex
Light House Hill Road
Mangaluru - 575 001
Tel. : 0824 2443002

---

**ಸೂಚನೆ :** ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಹಕ್ಕು ಆಯಾ ಲೇಖಕರದ್ದಾಗಿರುತ್ತದೆ. ಇಲ್ಲಿಯ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತವೆ. ಅವುಗಳು ಪತ್ರಿಕೆಯ ಅಭಿಪ್ರಾಯಗಳಾಗಿರಬೇಕೆಂದೇನಿಲ್ಲ.

# ಪುಟನೋಟ

**ಸೀತಾಪುರದ ಮುಖಾಂತರ ಭಾರತ**

❖ ಬಿ. ಜನಾರ್ದನ ಭಟ್ / 5

**ನೇಷನ್ ಸ್ಟೇಟ್: ಜಾಗತೀಕರಣಗೊಂಡಿರುವ ಕಲ್ಪನೆ**

❖ ಡಾ. ಎ.ಷಣ್ಮುಖ / 12

**ಕನ್ನಡ–ಮಲಯಾಳಂ ನುಡಿಸಂಬಂಧ**

❖ ಡಾ. ಎ. ಮೋಹನ ಕುಂಟಾರ್ / 19

**'ಮನಸ್ಮೃತಿ'ಯಲ್ಲಿನ ಶೈಕ್ಷಣಿಕ ಪರಿಕಲ್ಪನೆಗಳು**

❖ ದಿಲೀಪಕುಮಾರ್ ಪಾಂಡೆ / 28

**ಪರಿಸಂಖ್ಯಾ ಪರಿಚಯ**

❖ ಯಲ್ಲಾಪುರ ಕೃಷ್ಣ ಶರ್ಮಾ / 39

**ಆಧುನಿಕ ಕನ್ನಡ ಕವಿತೆ**

❖ ಪೇಜಾವರ ಸದಾಶಿವ ರಾವ್ / 44

**ವಿಜಯನಗರದ ಆಡಳಿತ ವ್ಯವಸ್ಥೆಯಲ್ಲಿ ನಾಯಂಕರ ಪದ್ಧತಿ**

❖ ಎಸ್.ಕೆ. ವಾಸುದೇವ, ಧಾರವಾಡ / 55

# ಸಂಪಾದಕೀಯ

ಚಿಂತನ ಬಯಲು ತ್ರೈಮಾಸಿಕ ಪತ್ರಿಕೆ ಆರಂಭವಾಗಿ ಈಗಾಗಲೇ ಮೂರು ವರ್ಷಗಳು ಸಂದು ಹೋದವು. ಪ್ರತಿಕೆಯೊಂದರ ಆಯುಷ್ಯದಲ್ಲಿ ಮೂರು ವರ್ಷಗಳೆಂದರೆ ದೊಡ್ಡ ಅವಧಿಯಲ್ಲ. ಆದರೆ, ವಿಮರ್ಶೆ ಹಾಗೂ ಸಂಶೋಧನ ಲೇಖನಗಳಿಗೆ ಮೀಸಲಾದ ಪತ್ರಿಕೆ ಎಂಬುದನ್ನು ಗಮನದಲ್ಲಿಟ್ಟುಕೊಂಡರೆ ಇದೊಂದು ನಿರ್ಣಾಯಕ ಅವಧಿಯೇ ಹೌದು. ಕಳೆದ ಮೂರು ವರ್ಷಗಳಲ್ಲಿ, ತಕ್ಷಣದ ರಾಜಕೀಯ ಸರಿತನದ ದೃಷ್ಟಿಯನ್ನು ಇಟ್ಟುಕೊಳ್ಳದ, ಆದರೆ ಸತ್ಯವನ್ನು ಬಿಟ್ಟುಕೊಡದ ಮತ್ತು ದತ್ತಾಂಶ ಮತ್ತು ಸಂಶೋಧನೆಯನ್ನಾಧರಿಸಿದ ಸ್ಪಷ್ಟ ಅಭಿಪ್ರಾಯಗಳುಳ್ಳ ಹಲವಾರು ಲೇಖನಗಳು ಚಿಂತನ ಬಯಲು ಸಂಚಿಕೆಗಳಲ್ಲಿ ಪ್ರಕಟವಾಗಿವೆ. ಆದರೆ, ಕನ್ನಡದ ವಿದ್ವತ್ವಲಯದಲ್ಲಿ, ಅಂದರೆ ಮುಖ್ಯವಾಗಿ ವಿಶ್ವವಿದ್ಯಾನಿಲಯ ಮತ್ತು ಕಾಲೇಜು ಬೋಧಕರ ವಲಯದಲ್ಲಿ ಬೌದ್ಧಿಕ ಚರ್ಚೆಯ ಆಸಕ್ತಿ ದಿನೇ ದಿನೇ ಕುಸಿಯುತ್ತಿರುವುದು ಬೇಸರದ ಸಂಗತಿ. ಹೊಸ ಒಳನೋಟಗಳುಳ್ಳ ವಿಮರ್ಶೆ ಹಾಗೂ ಸಂಶೋಧನ ಲೇಖನಗಳು ಮತ್ತು ಅವುಗಳ ಮೂಲಕ ಹೊಸ ಚರ್ಚೆಗಳು ಕನ್ನಡದಲ್ಲಿ ಹೆಚ್ಚು ಹೆಚ್ಚು ಬರಬೇಕು ಎಂಬುದು ಪತ್ರಿಕೆಯ ಅಪೇಕ್ಷೆ.

**– ಸಂಪಾದಕಿ**

# ಸೀತಾಪುರದ ಮುಖಾಂತರ ಭಾರತ

## ಮುಖಾಂತರ

ಕಾದಂಬರಿ: ಡಾ. ನಾ. ಮೊಗಸಾಲೆ, ಪ್ರ.: ಮನೋಹರ ಗ್ರಂಥಮಾಲೆ, ಧಾರವಾಡ.
ಮೊದಲನೆಯ ಮುದ್ರಣ: 2014, ಬೆಲೆ: ರೂ. 550

**ಬಿ. ಜನಾರ್ದನ ಭಟ್**
ಬೆಳ್ಮಣ್ಣು, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ

'ಉಲ್ಲಂಘನೆ' ಎಂಬ ಬೃಹತ್ ಕಾದಂಬರಿಯನ್ನು ಬರೆದ ಡಾ. ನಾ. ಮೊಗಸಾಲೆಯವರು ಈಗ 'ಮುಖಾಂತರ' ಎಂಬ ಮತ್ತೊಂದು ಬೃಹತ್ ಕಾದಂಬರಿಯನ್ನು ಕನ್ನಡಕ್ಕೆ ನೀಡಿದ್ದಾರೆ. 'ಉಲ್ಲಂಘನೆ'ಯಲ್ಲಿ ದಕ್ಷಿಣ ಕನ್ನಡದ ಪ್ರಭಾವಶಾಲಿ ಬಂಟ ಸಮಾಜದ ಚಿತ್ರಣವಿದ್ದರೆ 'ಮುಖಾಂತರ' ದಲ್ಲಿ ಇಲ್ಲಿನ ಬ್ರಾಹ್ಮಣ ಸಮುದಾಯಗಳ ಕಥಾನಕದ ಮೂಲಕ ದಕ್ಷಿಣ ಕನ್ನಡದ ದಕ್ಷಿಣ ಭಾಗದ ಒಂದು ಶತಮಾನ ಕಾಲದ ಸಾಮಾಜಿಕ ಪರಿವರ್ತನೆಯನ್ನು ಗ್ರಹಿಸುತ್ತ ಇತಿಹಾಸದ ಹೆಜ್ಜೆಗುರುತುಗಳನ್ನು ದಾಖಲಿಸುವ ಪ್ರಯತ್ನ ಮಾಡಿದ್ದಾರೆ. ಜತೆಗೆ 'ಉಲ್ಲಂಘನೆ'ಯಂತೆ ಸಮುದಾಯದ ಚಿತ್ರಣವನ್ನು ಸಮಗ್ರ ಸಮಾಜದ ಅವಲೋಕನಕ್ಕೆ ಕಿಟಕಿಯಂತೆ ಬಳಸಿಕೊಂಡಿದ್ದಾರೆ.

'ಮುಖಾಂತರ'ದ ಕತೆ 1880ರ ದಶಕದಲ್ಲಿ ಬ್ರಿಟಿಷರ ಆಳ್ವಿಕೆಯ ಕಾಲಘಟ್ಟದಿಂದ ಇಪ್ಪತ್ತೊಂದನೆಯ ಶತಮಾನಕ್ಕೆ ಅಂದರೆ ವರ್ತಮಾನಕಾಲದವರೆಗೂ ವಿಸ್ತರಿಸಿದೆ. ಕಾಸರಗೋಡಿನ ಮಂಜೇಶ್ವರ ಸೀಮೆಯ ಬ್ರಾಹ್ಮಣರಲ್ಲಿ ಬಹುಸಂಖ್ಯಾಕರಾಗಿರುವ ಹವ್ಯಕ ಬ್ರಾಹ್ಮಣ ಕುಟುಂಬವೊಂದರ ಎರಡು ಕವಲುಗಳು ಕಥಾನಕದ ಕೇಂದ್ರದಲ್ಲಿವೆ. ಶಿವಳ್ಳಿ ಬ್ರಾಹ್ಮಣರು, ಸ್ಮಾರ್ತರು, ಭಾಗವತ ಸಂಪ್ರದಾಯದವರು, ಕೊಂಕಣಸ್ಥರು, ಕೋಟದವರು ಮುಂತಾಗಿ ಇತರ ಬ್ರಾಹ್ಮಣ ಪಂಗಡಗಳ ಪಾತ್ರಗಳೂ ಇಲ್ಲಿ ಬಂದುಹೋಗುತ್ತವೆ.

ಈಶ್ವರಿಮೂಲೆಯ ಬಂಗಾರು ಭಟ್ಟರು ಕಾದಂಬರಿಯ ಗ್ರಹಿಕೆಯ ಕೇಂದ್ರವಾಗಿದ್ದಾರೆ. ಇವರ ತಂದೆ ಸ್ವಾತಂತ್ರ್ಯ ಹೋರಾಟಗಾರ ಶಂಕರ ಭಟ್ಟರು ಸ್ಥಾಪಿಸಿದ ರಾಷ್ಟ್ರೀಯ ಶಾಲೆಯನ್ನು ಇವರು ಸಿರಿಗನ್ನಡ ಕನ್ನಡ ಪ್ರೌಢಶಾಲೆಯಾಗಿ ಬೆಳೆಸಿದ್ದಾರೆ. ಸ್ವತಃ ಅಲ್ಲಿ ಅಧ್ಯಾಪಕರಾಗಿ ದುಡಿದು ಈಗ ನಿವೃತ್ತರು. ಇತರ ಹವ್ಯಕರಂತೆ ಸಾಕಷ್ಟು ಕೃಷಿ ಅವರಿಗಿದೆ. ಸದ್ಯ ಅಡಿಕೆ ತೋಟಗಳಲ್ಲಿ ದುಡಿಯಲು ಕೂಲಿಯಾಳುಗಳಿಲ್ಲದೆ ಕಷ್ಟ ಪಡುತ್ತಿದ್ದಾರೆ. ಅತ್ತ ಕನ್ನಡ ಶಾಲೆಯೂ ಮುಚ್ಚುವ ಪರಿಸ್ಥಿತಿಯಲ್ಲಿದೆ. ಆಂಗ್ಲಮಾಧ್ಯಮ ಶಾಲೆಯ ಸ್ಥಾಪನೆಗೆ ಅವರ ದಾಯಾದಿ ಪುತ್ತು ಭಟ್ಟರೇ ತೆರೆಮರೆಯಲ್ಲಿ ಪ್ರಯತ್ನಿಸುತ್ತಾ ಇದ್ದಾರೆ. ಜತೆಗೆ ಪುತ್ತು ಭಟ್ಟರು ಬಂಗಾರು ಭಟ್ಟರ ಕುಟುಂಬದ ಇನ್ನೊಂದು ಕವಲಿನವರನ್ನು ಹುಡುಕಿ ಇವರ ಆಸ್ತಿಗೆ ಹಕ್ಕುದಾರರಾಗಿ ಪ್ರಸ್ತುತಪಡಿಸುವ ರಹಸ್ಯ ಪ್ರಯತ್ನದಲ್ಲಿಯೂ ತೊಡಗಿದ್ದಾರೆ.

ಬಂಗಾರು ಭಟ್ಟರ ಗೆಳೆಯ ಗೋವಿಂದಾಚಾರ್ಯರು ಶಿವಳ್ಳಿ ಬ್ರಾಹ್ಮಣ ಪುರೋಹಿತ. ಅವರು ಮತ್ತು ಅವರ ತಂದೆ ಹಯಗ್ರೀವ ಆಚಾರ್ಯರ ಮೂಲಕ ಶಿವಳ್ಳಿ ಬ್ರಾಹ್ಮಣ ವೈದಿಕರ ಜೀವನಕ್ರಮ ದಾಖಲಾಗಿದೆ.

ಕಾದಂಬರಿಯ ತೋರಿಕೆಯ ಸಮಸ್ಯೆ ಬಂಗಾರಣ್ಣನ ವಂಶವೃಕ್ಷದ ಎರಡು ಕವಲುಗಳ ದಾಯಾದಿ ಮತ್ಸರದಲ್ಲಿದೆ. (ಕಾದಂಬರಿಕಾರರಿಗೆ ಈ ಸಮಸ್ಯೆ ಗೌಣ. ಅವರಿಗೆ ಸಾಮಾಜಿಕ ಸ್ಥಿತ್ಯಂತರ ಮತ್ತು ಮೌಲ್ಯಗಳ ಪಲ್ಲಟವೇ ಪರಿಶೀಲನೆಗೊಳ್ಳಬೇಕಾದ ಸಮಸ್ಯೆ). ಈಗ ಆಸ್ತಿವಂತರಾಗಿರುವ ಈ ವಂಶದ ಮೂಲಪುರುಷ ತಿರುಮಲೇಶ್ವರ ಭಟ್ಟರು ತೀರಾ ಬಡವರಾಗಿದ್ದು ಗುತ್ತಿನ ಪಟೇಲರ ಮೂಲಗೇಣಿ ಒಕ್ಕಲಾಗಿದ್ದರು. ಒಮ್ಮೆ ಬ್ರಿಟಿಷ್ ಸರಕಾರದ ಪ್ರತಿನಿಧಿ ಬ್ರಾಹ್ಮಣ ಶಿರಸ್ತೇದಾರರು ಊರಿಗೆ ಭೇಟಿ ನೀಡಿದಾಗ ಇವರ ಮನೆಯಲ್ಲಿ ಅವರ ಊಟಕ್ಕೆ ಏರ್ಪಾಡು ಮಾಡಿದ್ದರು ಪಟೇಲರು. ಊಟದ ನಡುವೆ ಶಿರಸ್ತೇದಾರರು ದೊಡ್ಡದಾಗಿ ಅಪಾನವಾಯು ಹೊರಡಿಸಿದಾಗ ತಿರುಮಲೇಶ್ವರ ಭಟ್ಟರು ತಾನೇ ಅಪಾನವಾಯು ಹೊರಡಿಸಿದೆನೆಂದು ನಟನೆ ಮಾಡಿ ಕ್ಷಮೆ ಯಾಚಿಸಿ ಶಿರಸ್ತೇದಾರರ ಮಾನ ಉಳಿಸಿದ್ದರು. ಅದಕ್ಕೆ ಪ್ರತಿಫಲವಾಗಿ ಶಿರಸ್ತೇದಾರರು ಭಟ್ಟರ ಮೂಲಗೇಣಿ ಆಸ್ತಿಯನ್ನು ಪಟೇಲರಿಂದ ಅವರಿಗೇ ವಿಕ್ರಯಿಸಿದ್ದಲ್ಲದೆ, ದೊಡ್ಡ ದರ್ಖಾಸ್ತೊಂದನ್ನು ಬಳುವಳಿಯಾಗಿ ನೀಡಿದ್ದರು. ಜತೆಗೆ ತಾನು ಇಟ್ಟುಕೊಂಡಿದ್ದ ರತ್ನಮ್ಮ ಎಂಬ ಹೆಂಗಸಿನಲ್ಲಿ ಹುಟ್ಟಿದ ಮಗ ವೆಂಕಪ್ಪಯ್ಯನನ್ನು ಮಕ್ಕಳಿಲ್ಲದ ಭಟ್ಟರು ದತ್ತು ಸ್ವೀಕರಿಸುವಂತೆ ಮಾಡುತ್ತಾರೆ. ರತ್ನಮ್ಮನನ್ನೂ ಉಪಾಯವಾಗಿ ಭಟ್ಟರ ಮನೆಗೆ ಸಾಗಹಾಕುತ್ತಾರೆ. ಭಟ್ಟರಿಗೆ ಆಕಸ್ಮಿಕವಾಗಿ ರತ್ನಮ್ಮನಲ್ಲಿ ಕೃಷ್ಣಯ್ಯ ಎಂಬ ಮತ್ತೊಬ್ಬ ಮಗ ಹುಟ್ಟುತ್ತಾನೆ.

ಹವ್ಯಕೇತರ ಸಮುದಾಯದ, ಯಾರಿಗೋ ಹುಟ್ಟಿದ ವೆಂಕಪ್ಪಯ್ಯ ಕಾನೂನು ಮತ್ತು ಶಾಸ್ತ್ರಗಳ ಪ್ರಕಾರ ಈಗ ಭಟ್ಟರ ಅಧಿಕೃತ ಪುತ್ರನಾದರೂ ಅವನು ಅವರಿಗೆ ನಿಜವಾಗಿ ಉತ್ತರಾಧಿಕಾರಿಯಾಗದೆ ವ್ಯಭಿಚಾರಿಯೂ, ಕುಡುಕನೂ, ಸ್ವಾರ್ಥಿಯೂ, ಕ್ರೂರಿಯೂ ಆಗಿ ತನ್ನ ಹಿಸೆ ತೆಗೆದುಕೊಂಡು ಪ್ರತ್ಯೇಕವಾಗುತ್ತಾನೆ. ಅವನ ಹೆಂಡತಿ ಮಗನನ್ನು ಕರೆದುಕೊಂಡು ತವರು ಸೇರಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಅವಳ ಅಪ್ಪ ವೆಂಕಪ್ಪಯ್ಯನ ಬಿಡಿಗಾಸು ಕೂಡ ತನ್ನ ಮೊಮ್ಮಗನಿಗೆ ಬೇಡವೆಂದು ದೂರವಿರುತ್ತಾರೆ. ಹಾಗಾಗಿ ಆಸ್ತಿಯೆಲ್ಲವೂ ಇನ್ನೊಂದು ಕವಲಿನ ಬಳಿ ಉಳಿಯುತ್ತದೆ. ಆ ಕವಲು ಕೃಷ್ಣಯ್ಯನದು. ಕೃಷ್ಣಯ್ಯ ತಿರುಮಲೇಶ್ವರ ಭಟ್ಟರ ಸ್ವಂತ ಪುತ್ರನಾದರೂ ಕಾನೂನು ಮತ್ತು ಶಾಸ್ತ್ರಗಳು ಹಾಗೆಂದು ಒಪ್ಪಿಕೊಳ್ಳುವುದಿಲ್ಲ. ಆದರೆ ಈ ಕವಲೇ ಕಾದಂಬರಿಯಲ್ಲಿ ಕೇಂದ್ರವಾಗಿರುವ ಕುಟುಂಬ. ಈ ಕುಟುಂಬದ ಶಂಕರ ಸ್ವಾತಂತ್ರ್ಯ ಹೋರಾಟಗಾರನೂ, ಸುಧಾರಣಾವಾದಿಯೂ, ಊರಿನ ಏಳಿಗೆಗಾಗಿ ದುಡಿಯುವವನೂ ಆಗಿದ್ದವನು. ಅವನ ಮಗ ಬಂಗಾರಣ್ಣನೂ ಹಾಗೆಯೇ. ಆದರೆ ಇನ್ನೊಂದು ಕವಲಿನ ಉತ್ತರಾಧಿಕಾರಿಗಳು ಅನಿರೀಕ್ಷಿತವಾಗಿ ಬಂಗಾರಣ್ಣನ ಬದುಕಿನಲ್ಲಿ ಪ್ರತ್ಯಕ್ಷರಾಗುತ್ತಾರೆ. ದಾಯಾದಿ ಪುತ್ತುಭಟ್ಟರು ಈ ಅವಕಾಶವನ್ನು ಬಳಸಿಕೊಂಡು ಬಂಗಾರಣ್ಣ ಅನುಭವಿಸುತ್ತಿರುವ ಆಸ್ತಿ ನಿಜವಾಗಿ ಅವನ ಕೈಯಲ್ಲಿ ಅಕ್ರಮವಾಗಿ ಇದೆ ಎಂದು ಸಾಧಿಸಲು ದಾಖಲೆಗಳ ಹುಡುಕಾಟದಲ್ಲಿ ತೊಡಗುತ್ತಾರೆ.

ಆಗ ಬಂಗಾರು ಭಟ್ಟರ ಗೆಳೆಯ ಗೋವಿಂದಾಚಾರ್ಯರು ಒಂದು ದಾಖಲೆಯನ್ನು

ಹುಡುಕಿ ತೆಗೆಯುತ್ತಾರೆ. ಕುಟುಂಬದ ಮೂಲ ಪುರುಷ ತಿರುಮಲೇಶ್ವರ ಭಟ್ಟರು ಕೃಷ್ಣಯ್ಯನ ಕವಲಿಗೆ ಆಸ್ತಿಯನ್ನು ಬರೆದುಕೊಟ್ಟ ದಾಖಲೆ ಅದು. ಇದು ಸಿಗುವಾಗ ಬಂಗಾರಣ್ಣನಿಗೆ ಜೀವನದಲ್ಲಿ ವಿಷಾದ ಯೋಗ ಪ್ರಾಪ್ತಿಯಾಗಿರುತ್ತದೆ. ತನ್ನ ವಿಜಯವನ್ನು ವಿಜಯ ಎಂದು ಕೂಡಾ ಪರಿಗಣಿಸದೆ ಸುಮ್ಮನೆ ಕುಳಿತಲ್ಲಿಗೆ ಕಾದಂಬರಿ ಮುಗಿಯುತ್ತದೆ.

626 ಪುಟಗಳ ಈ ಕಾದಂಬರಿಯಲ್ಲಿ ಎರಡು ಭಾಗಗಳಿವೆ. 434 ನೆಯ ಪುಟದವರೆಗಿನ ಮೊದಲನೆಯ ಭಾಗದಲ್ಲಿ ಪೂರ್ವ ಚರಿತ್ರೆಗಳು ಹಿನ್ನೋಟದಲ್ಲಿ ದಾಖಲಾದರೆ ಎರಡನೆಯ ಭಾಗ ಪ್ರಾರಂಭದ ಒಂದು ಎಳೆಯನ್ನು ಎತ್ತಿಕೊಂಡು ವರ್ತಮಾನವನ್ನು ಪರಿಶೀಲಿಸುತ್ತದೆ. ಈ ಕಾದಂಬರಿಯ ಕಥೆಯನ್ನು ಸಂಕ್ಷಿಪ್ತವಾಗಿ ಹೇಳಿದರೂ ಅದೊಂದು ನೀಳ್ಗತೆಯಾಗುತ್ತದೆ! ಅಷ್ಟು ವಿಸ್ತರಿಸಿರುವ ಈ ಕಾದಂಬರಿ ವಿವರಗಳಲ್ಲಿ, ವಿರಾಮದ ಸಂಭಾಷಣೆಗಳಲ್ಲಿ ಮತ್ತಷ್ಟು ವಿಸ್ತರಿಸಿದೆ. ಈ ಶೈಲಿಯನ್ನು ನ್ಯಾಚುರಲಿಸಮ್ ಎಂದು ಗುರುತಿಸಬಹುದು. ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಇದನ್ನು 'ನಿಧಾನಶ್ರುತಿ' ಯ ಕಥನ ಎಂದು ಕರೆದಿದ್ದಾರೆ. ಈ ಮೂಲಕ ಸಮುದಾಯಗಳ ಊಟತಿಂಡಿಗಳ, ಕೆಲಸ ವಿಶ್ರಾಂತಿಗಳ, ಪೂಜೆ ಪುನಸ್ಕಾರಗಳ, ಶುಭಾಶುಭ ಕಾರ್ಯಕ್ರಮಗಳ ದಾಖಲೀಕರಣ ಇಲ್ಲಿ ನಡೆದಿದೆ. ಕಾದಂಬರಿ ಪ್ರಕಾರ ಇಂತಹ ಆಚರಣಾ ಸಂಸ್ಕೃತಿಯ ದಾಖಲೀಕರಣಕ್ಕಾಗಿಯೂ ಮಾನವ ಜನಾಂಗದ ಪ್ರಮುಖ ಸಾಧನವಾಗಿದೆ ಎನ್ನುವುದಕ್ಕೆ ಮೊಗಸಾಲೆಯವರ ಎರಡು ಬೃಹತ್ ಕಾದಂಬರಿಗಳು ಉದಾಹರಣೆಗಳಾಗಿವೆ ಎನ್ನುವುದನ್ನು ಇಲ್ಲಿ ಸಾಂದರ್ಭಿಕವಾಗಿ ಗಮನಿಸಬಹುದು.

ಈ ಕಾದಂಬರಿಯನ್ನು ಗ್ರಹಿಸಲು ಹಲವಾರು ಬಗೆಯ ಓದುಗಳು ಬೇಕಾಗಬಹುದು. ಬೆನ್ನುಡಿ ಬರೆದಿರುವ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಹೀಗೆ ಹೇಳುತ್ತಾರೆ: "ಸಂಬಂಧಗಳ ಜಟಿಲತೆ, ಸ್ತ್ರೀ ಜಗತ್ತಿನ ತಲ್ಲಣಗಳು, ಆಸ್ತಿ ಅಧಿಕಾರದ ದರ್ಪ, ಅಂತಃಕರಣ ಜಗತ್ತಿನ ಆರ್ದ್ರತೆ, ಜಾಗತೀಕರಣದ ಕಬಂಧ ಬಾಹು, ಆಕಸ್ಮಿಕಗಳು ಬದುಕನ್ನು ರೂಪಿಸುವ ವಿಸ್ಮಯ, ವರ್ಗಸಂಘರ್ಷ, ಅನಿಯಂತ್ರಿತ ಆಕರ್ಷಣೆಯ ಸ್ವರೂಪ, ಈ ಎಲ್ಲವನ್ನೂ ಮೀರಿದ ನಿರ್ಲಿಪ್ತತೆ ಹೀಗೆ ಹಲವು ನೆಲೆಗಳನ್ನು ಒಳಗೊಂಡಿರುವ 'ಮುಖಾಂತರ' ನಿಸ್ಸಂದೇಹವಾಗಿ ಕನ್ನಡದ ಮುಖ್ಯ ಕಾದಂಬರಿಗಳ ಸಾಲಿಗೆ ಸೇರುತ್ತದೆ."

ಇಲ್ಲಿ ನರಹಳ್ಳಿಯವರು ಕಾದಂಬರಿಯ ಹಲವಾರು ಆಯಾಮಗಳನ್ನು ಗುರುತಿಸಿದ್ದಾರೆ. ಯಾವುದಾದರೊಂದು ನೆಲೆಯಿಂದ ಕಾದಂಬರಿಯನ್ನು ಸಮಗ್ರವಾಗಿ ಗ್ರಹಿಸಲು ಕಷ್ಟಸಾಧ್ಯವಾದರೂ ಇಲ್ಲಿ ಕಾದಂಬರಿಯು ಚಿತ್ರಿಸಿರುವ ಸಾಮಾಜಿಕ ಪರಿವರ್ತನೆಯ ಹಂತಗಳನ್ನು ಗುರುತಿಸುವ ಮೂಲಕ ಒಂದು ಬಗೆಯ ಸಮೀಕ್ಷೆಗೆ ಪ್ರಯತ್ನಿಸಲಾಗಿದೆ:

ಪ್ರಾರಂಭದ ಘಟ್ಟದಲ್ಲಿ ಬ್ರಿಟಿಷರ ಕಾಲದಲ್ಲಿ ನಮ್ಮ ಜನ ಅವರಿಗೆ ತಗ್ಗಿ ಬಗ್ಗಿ ಅವರು ನೀಡಿದ್ದನ್ನು ಪ್ರಸಾದ ಎಂದು ಸ್ವೀಕರಿಸಿ ಬದುಕು ಕಟ್ಟಿಕೊಂಡದ್ದನ್ನು ಚಿತ್ರಿಸಲಾಗಿದೆ. ಆ ವಿನಯಕ್ಕೆ ತಕ್ಕ ಉಡುಗೊರೆಯನ್ನು ಬ್ರಿಟಿಷರು ನೀಡುತ್ತಿದ್ದರು; ಆದರೆ ಬ್ರಿಟಿಷರು ಒಬ್ಬರ ಆಸ್ತಿಯನ್ನು ಬಲಾತ್ಕಾರವಾಗಿ ಇನ್ನೊಬ್ಬರಿಗೆ ಕೊಡಿಸಿದ್ದು ಮತ್ತು ನಮ್ಮ ಭೂಪ್ರದೇಶವನ್ನು ನಮಗೇ ಹಂಚಿಕೊಟ್ಟದ್ದನ್ನು ಶಿರಸ್ತೇದಾರರ ಅಪಾನವಾಯು ಪ್ರಸಂಗ ಸಾಂಕೇತಿಕವಾಗಿ ಹೇಳುತ್ತದೆ.

ಎರಡನೆಯ ಘಟ್ಟದಲ್ಲಿ ಮೊದಲ ಘಟ್ಟದ ಜನರ ಎರಡು ಬಗೆಯ ಉತ್ತರಾಧಿಕಾರಿಗಳಿಗೆ

ಪ್ರತಿನಿಧಿಗಳಾಗಿ ವೆಂಕಪ್ಪಯ್ಯ ಮತ್ತು ಕೃಷ್ಣಯ್ಯ ಇದ್ದಾರೆ. ಇಂಗ್ಲಿಷರ ಪ್ರತಿನಿಧಿಯಾದ ಶಿರಸ್ತೇದಾರನಿಗೆ ಹುಟ್ಟಿದ ವೆಂಕಪ್ಪಯ್ಯ ಭಾರತೀಯ ನಾರಿಯ ಜತೆಗೆ ಸಂಸಾರ ಸಾಗಿಸಲಾರದೆ ಪಾಶ್ಚಾತ್ಯ ಸಂಸ್ಕೃತಿಯ ಪ್ರತಿನಿಧಿಯೆನ್ನಬಹುದಾದ ಕ್ರಿಸ್ತಿನಾ ಜತೆ ಸಂಬಂಧ ಬೆಳೆಸುತ್ತಾನೆ. ರೋಗಪೀಡಿತನಾಗಿ ಹಾಸಿಗೆ ಹಿಡಿದಾಗ ಅವಳ ಅಪ್ಪನ ಮದ್ದು ವೆಂಕಪ್ಪಯ್ಯನನ್ನು ಬದುಕಿಸುವುದಿಲ್ಲ. ಶುದ್ಧ ಭಾರತೀಯ ಬದುಕು ಹಾಗೂ ಚಿಂತನೆಗಳಿಗೆ ಪ್ರತಿನಿಧಿಯಾದ ಕೃಷ್ಣಯ್ಯ ತನ್ನ ಪಾಡಿಗೆ ಯಶಸ್ವಿಯಾಗುತ್ತಾನೆ. ಆದರೆ ಅವನು ವೆಂಕಪ್ಪಯ್ಯನ ಸಾಲಗಳಿಗೆ ಜವಾಬುದಾರನಾಗಬೇಕಾಗುತ್ತದೆ. ಜನರ ಬದುಕು ಈ ಎರಡೂ ಘಟ್ಟಗಳಲ್ಲಿ ಸಮಾಜಮುಖಿ ಯಾಗದೆ ಕೌಟುಂಬಿಕ ವೃತ್ತಗಳ ಒಳಗೆ ಕುರುಕ್ಷೇತ್ರಗಳನ್ನು ಸೃಷ್ಟಿಸಿಕೊಳ್ಳುತ್ತಿದೆ.

ಮೂರನೆಯ ಘಟ್ಟದಲ್ಲಿ ಗಾಂಧೀಜಿಯವರಿಂದ ಉದ್ದೀಪಿಸಲ್ಪಟ್ಟ ಆತ್ಮಾಭಿಮಾನ ಮತ್ತು ಸ್ವಾತಂತ್ರ್ಯದ ಹಂಬಲ ಈ ಕಾದಂಬರಿಯ ಸ್ವಾತಂತ್ರ್ಯ ಹೋರಾಟಗಾರ ಟೊಪ್ಪಿ ಶಂಭಟ್ಟ, ಈಶ್ವರಿಮೂಲೆ ಶಂಕರ, ಗುತ್ತಿನ ಮಂಜುನಾಥ ಶೆಟ್ಟಿ ಮುಂತಾದವರ ಮೂಲಕ ವ್ಯಕ್ತವಾಗಿದೆ. ಟೊಪ್ಪಿ ಶಂಭಟ್ಟರ ಪಾತ್ರ ಈಶ್ವರಿಮೂಲೆ ತಿರುಮಲೇಶ್ವರ ಭಟ್ಟರ ವಿನಯ, ಅಧಿಕಾರಭಯಗಳಿಗೆ ತದ್ವಿರುದ್ಧವಾದ ಮೌಲ್ಯವೊಂದನ್ನು ಸಾಕಾರಗೊಳಿಸಿದೆ. ತಾನು ಬ್ರಿಟಿಷ್ ಸರಕಾರದ ಪ್ರತಿನಿಧಿ, ತಾನು ಶಂಭಟ್ಟರನ್ನು ನಿಗ್ರಹಿಸಬಲ್ಲೆ ಎಂಬ ಅಹಂಕಾರದ ಮಾತನ್ನು ಪಟೇಲರು ಆಡಿದಾಗ ಶಂಭಟ್ಟರು ಯಾವ ಭಯವೂ ಇಲ್ಲದೆ, ಉದ್ವೇಗವೂ ಇಲ್ಲದೆ ಶಾಂತಸ್ವರದಲ್ಲಿ ಪಟೇಲರಿಗೆ ಪಂಥಾಹ್ವಾನ ಒಡ್ಡಿದ್ದು ಬಹಳ ಸಾಂಕೇತಿಕ ಮಹತ್ವವುಳ್ಳ ಘಟನೆಯಾಗಿದೆ. ಮುಂದೆ ಪಟೇಲರೂ ಉಗ್ರಾಣಿಯೂ ಗಾಂಧೀಚಳುವಳಿಗೆ ಸೇರುವ ಮೂಲಕ ಸ್ವಾತಂತ್ರ್ಯದ ಅಭಿಲಾಷೆ ಸಾರ್ವತ್ರಿಕವಾದುದನ್ನು ಕಾದಂಬರಿ ಚಿತ್ರಿಸಿದೆ. ಬದುಕು ಇಲ್ಲಿ ಸಮಾಜಮುಖಿಯಾಗಿ ಹರಿಯಲಾರಂಭಿಸಿದೆ.

ಈ ಭಾಗದಲ್ಲಿ ಕಾದಂಬರಿ ದಕ್ಷಿಣ ಕನ್ನಡದ ಸ್ವತಂತ್ರ್ಯ ಹೋರಾಟದ ಕಾಲದ ಒಂದು ಪ್ರಾತಿನಿಧಿಕ ಚಿತ್ರಣವನ್ನು ನೀಡುತ್ತದೆ. ಇದರಲ್ಲಿ ಕಾರ್ನಾಡ್ ಸದಾಶಿವರಾಯರು, ಕುದ್ಮುಲ್ ರಂಗರಾಯರು, ಸಾಂತ್ಯಾರು ಅನಂತಪದ್ಮನಾಭ ಭಟ್ಟರು, ಕಡೆಂಗೋಡ್ಲು ಶಂಕರ ಭಟ್ಟರು, ಶ್ರೀನಿವಾಸ ಉಪಾಧ್ಯಾಯ ಪಣಿಯಾಡಿಯವರು, ಕೆ.ಕೆ. ಶೆಟ್ಟರು, ಹೊನ್ನಯ್ಯ ಶೆಟ್ಟರು, ಎನ್.ಎಸ್. ಕಿಲ್ಲೆಯವರು ಮುಂತಾಗಿ ಆಗಿನ ಧುರೀಣರೆಲ್ಲ ಪಾತ್ರಗಳಾಗಿ ಬರುತ್ತಾರೆ. ಪಿಕೆಟಿಂಗ್, ರಾಷ್ಟ್ರೀಯ ಶಾಲೆ, ಖಾದಿ, ಉಪ್ಪಿನ ಸತ್ಯಾಗ್ರಹ ಇವೆಲ್ಲವೂ ಜೀವಂತಿಕೆಯಿಂದ ದಾಖಲಾಗಿವೆ. ಕಾರ್ನಾಡ್ ಮತ್ತು ಕುದ್ಮುಲ್ಲರ ಐತಿಹಾಸಿಕ ಮಹತ್ವದ ಅಸ್ಪೃಶ್ಯತಾ ನಿವಾರಣೆಯ ಚಟುವಟಿಕೆಗಳು ಇಲ್ಲಿ ದಾಖಲಾಗಿವೆ. ರಾಜಾಜಿಯವರು ಮಂಗಳೂರಿಗೆ ಆಗಮಿಸಿ ನೆಹರೂ ಮೈದಾನದಲ್ಲಿ (ಆಗ ಅದಕ್ಕೆ ನೆಹರೂ ಮೈದಾನ ಎಂಬ ಹೆಸರಿರಲಿಲ್ಲ) ಭಾಷಣ ಮಾಡಿದಾಗ ಆದ ಗೋಲೀಬಾರು ಇತ್ಯಾದಿ ಯಥಾವತ್ತಾಗಿ ಚಿತ್ರಣಗೊಂಡಿವೆ. ಈ ಭಾಗದ ಕಥನ ಈ ಕಾದಂಬರಿಯ ಮಹತ್ವವನ್ನು ಹೆಚ್ಚಿಸಿದೆ. ಕಾದಂಬರಿ ದಕ್ಷಿಣ ಕನ್ನಡದ ಒಂದು ಪ್ರಾತಿನಿಧಿಕ ಕಾದಂಬರಿ ಎನಿಸಿಕೊಳ್ಳುವ ಯೋಗ್ಯತೆ ಪಡೆಯುವುದು ಇಂತಹ ವ್ಯಾಪ್ತಿಯ ಕಾರಣದಿಂದಾಗಿ.

ನಾಲ್ಕನೆಯ ಹಾಗೂ ಕೊನೆಯ ಹಂತದಲ್ಲಿ ಸ್ವತಂತ್ರ ಭಾರತದ ಆರ್ಥಿಕ ಹೊಟ್ಟೆಬಾಕತನ, ಸ್ವಾರ್ಥ ರಾಜಕೀಯ, ಅರ್ಥಹೀನ ದೊಡ್ಡಸ್ತಿಕೆಗಳು, ಗೊಂದಲ ಎಲ್ಲದಕ್ಕೂ ಸಂಕೇತವಾಗು ವಂತೆ ಇಲ್ಲಿನ ಪಾತ್ರಗಳು ವರ್ತಿಸುತ್ತವೆ. ಕನ್ನಡ ಮಾಧ್ಯಮದ ಶಾಲೆ ಮುಚ್ಚುತ್ತಿದೆ. ಅದನ್ನು

ಉಳಿಸಿಕೊಳ್ಳಬೇಕೇ, ಹೌದಾದರೆ ಯಾಕೆ, ಹೇಗೆ ಇತ್ಯಾದಿ ಪ್ರಶ್ನೆಗಳಿಗೆ ಯಾರಲ್ಲೂ ಉತ್ತರವಿಲ್ಲ. ಸೆಝ್ ಎಂಬ ಆರ್ಥಿಕ ವಲಯಕ್ಕಾಗಿ ಕೃಷಿ ನಾಶವಾಗುತ್ತಿದೆ. ಬಡವರು ಎನ್ನುವವರು ಯಾರೂ ಇಲ್ಲದೆ ದುಡಿಯುವವರು ಇಲ್ಲದಂತಾಗಿದೆ. ಮೊದಲು ಬಾಕಿಮಾರು ನಿರ್ಮಿಸಿ ಕೆಲಸಗಾರರಿಗೆ ಮಳೆಗಾಲದಲ್ಲಿಯೂ ಉದ್ಯೋಗ ಒದಗಿಸಿಕೊಟ್ಟದ್ದು ಒಂದು ಐತಿಹಾಸಿಕ ಉಪಕ್ರಮವಾಗಿತ್ತು. ಕೃಷಿ ಈಗಲೂ ಉದ್ಯೋಗ ಕೊಡಬಲ್ಲುದಾದರೂ ಜನರಿಗೆ ಅದು ಬೇಡ. ಕೃಷಿ ಮಾಡಿಸುವವರೂ ಊರಿನಲ್ಲಿ ಉಳಿಯದೆ ದೂರ ನಿಂತು ಈ ಭೂಮಿಯ ಮಾರಾಟಕ್ಕೆ ತೊಡಗುತ್ತಾರೆ. ಅವರಿಗೆ ಆಸ್ತಿಯಲ್ಲಿ ಪಾಲು ಬೇಕು, ಯಾಕೆಂದರೆ ಅದನ್ನು ಮಾರಿ ಹಣ ಮಾಡಿಕೊಳ್ಳಬೇಕಾಗಿದೆ. ಒಂದು ಕಾಲದಲ್ಲಿ ಸಾಲ ಮಾಡಿಯಾದರೂ ಕೃಷಿ ಭೂಮಿಗಳನ್ನು ಹೊಂದುವುದು ಹಾಗೂ ಅಭಿವೃದ್ಧಿಪಡಿಸುವುದು ಪುರುಷಾರ್ಥವಾಗಿತ್ತು ಅನ್ನುವುದನ್ನು ಕಾದಂಬರಿ ಮನೋಜ್ಞವಾಗಿ ಚಿತ್ರಿಸಿದೆ. ಈಗ ಕೃಷಿ ಭೂಮಿಯನ್ನು ಉಳಿಸಿಕೊಳ್ಳುವ ಚಿಂತೆ ಹಿಂದಿನ ತಲೆಮಾರಿನ ಪ್ರತಿನಿಧಿಗಳಲ್ಲಿದೆ. ಇಂತಹ ತಾಕಲಾಟಗಳಲ್ಲಿ ವರ್ತಮಾನದ ಸ್ಥಿತಿಯಿದೆ. ಒಟ್ಟಿನಲ್ಲಿ ನಮಗೆ ಏನು ಬೇಕೆನ್ನುವುದು ನಮಗೆ ಗೊತ್ತಿಲ್ಲದ ಸ್ಥಿತಿ ಕಾದಂಬರಿಯ ಕಥನ ಶರೀರದಲ್ಲಿಯೂ ಕಾಣುತ್ತದೆ. ಉದಾಹರಣೆಗೆ ಅಥವಾ ಸಾಂಕೇತಿಕವಾಗಿ ಇಲ್ಲಿ ಬರುವ ಶ್ರೀಧರಾನಂದ ಸ್ವಾಮಿಯನ್ನು ತೆಗೆದುಕೊಳ್ಳಬಹುದು. ಅವನು ಯಾವಾಗ ಬರುತ್ತಾನೆ, ಯಾವಾಗ ಹೋಗುತ್ತಾನೆ, ಅವನ ಆಗಮನದಿಂದ ಕಾದಂಬರಿಗೆ ಆದ ಲಾಭವೇನು ಎನ್ನುವುದು ಗೊತ್ತಾಗುವುದಿಲ್ಲ. ನಮ್ಮ ಆಧ್ಯಾತ್ಮ ಪರಂಪರೆ ಹೀಗೆ ಯಾವ ಉದ್ದೇಶವನ್ನೂ ಸಾಧಿಸದೆ ಎಡೆಬಿಡಂಗಿಯಾಗಿದೆ ಎನ್ನುವುದನ್ನು ಇದು ಸೂಚಿಸುತ್ತಿದೆಯೆ?

ಈ ಶ್ರೀಧರಾನಂದ ಸ್ವಾಮಿ ಈ ಕಾದಂಬರಿಯಲ್ಲಿ ಬರುವುದಕ್ಕೆ ಒಂದು ಕಾರಣವುಂಟು. ತಿರುಮಲೇಶ್ವರ ಭಟ್ಟರ ಪುತ್ರ ವೆಂಕಪ್ಪಯ್ಯನ ಕವಲಿನಲ್ಲಿ ಈ ತಲೆಮಾರಿನ ಶ್ರೀನಿವಾಸನ ಅಣ್ಣನೇ ಈ ಶ್ರೀಧರಾನಂದ. ಶ್ರೀನಿವಾಸ ಮತ್ತು ನಾರಾಯಣ ಗೆಳೆಯರು. ಇಬ್ಬರೂ ಸೇರಿ ಊರಿನಲ್ಲಿ ಜಮೀನು ಖರೀದಿಸಿ ಅಗಾಧ ಪ್ರಮಾಣದ ಲಾಭ ಮಾಡಿಕೊಳ್ಳಲು ಸೆಝ್ ಯೋಜನೆಯ ಬರುವಿಗಾಗಿ ಕಾದಿದ್ದಾರೆ.

ಕಾದಂಬರಿ ಎಲ್ಲ ಸಾಧ್ಯತೆಗಳನ್ನೂ ಮುಕ್ತವಾಗಿಟ್ಟು ಮುಗಿಯುತ್ತದೆ. ಕೊನೆಯಲ್ಲಿ ಕಾದಂಬರಿಯ ಮುಖ್ಯ ಪಾತ್ರವಾದ ಬಂಗಾರಣ್ಣ ಶ್ರೀಕೃಷ್ಣನಂತೆ ವಿಷಾದಯೋಗದಲ್ಲಿ ಕುಳಿತಿರುತ್ತಾರೆ. ತಮ್ಮ ಭೂಮಿ ತಮ್ಮದೇ ಎನ್ನುವುದಕ್ಕೆ ಕಾನೂನಿನ ಮುದ್ರೆ ಬಿದ್ದರೂ ಅದನ್ನು ಸದ್ಯ ಹೇಗೆ ಅರ್ಥಪೂರ್ಣವಾಗಿ ಬಳಸುವುದು ಮತ್ತು ಮುಂದೆ ಅದರ ಯಜಮಾನನಾಗುವ ನಾರಾಯಣ ಅದನ್ನು ಏನು ಮಾಡಿಯಾನು ಎನ್ನುವ ಪ್ರಶ್ನೆಗಳಿಗೆ ಅವರಲ್ಲಿ ಉತ್ತರವಿಲ್ಲ.

ಈ ಪರಿಸ್ಥಿತಿ ಕೌಟುಂಬಿಕ ಸಂಬಂಧಗಳ ಮೂಲಕ ಸಾಂಕೇತಿಕವಾಗಿ ವ್ಯಕ್ತವಾಗಿದೆ. ಅವರ ವಿಧವೆ ಸೊಸೆ ಒಪ್ಪಕ್ಕ ವಿಚ್ಛೇದಿತನಾಗಿರುವ ಶ್ರೀನಿವಾಸನನ್ನು ವರಿಸಿ ದೂರ ಹೋಗುವುದು ಖಚಿತವಾಗಿದೆ. ಇದರಿಂದಾಗಿ ಬಂಗಾರಣ್ಣನ ಮುದ್ದಿನ ಮೊಮ್ಮಗ ಆ ಮನೆಯಿಂದ, ಆ ಮಣ್ಣಿನಿಂದ ಕಾನೂನಾತ್ಮಕವಾಗಿ ದೂರವಾಗುವ ಸಾಧ್ಯತೆ ದಟ್ಟವಾಗಿದೆ. ಹಿಂದೆ ಯಾವುದೋ ಸಮುದಾಯದ, ಯಾವುದೋ ಪ್ರದೇಶದ, ಯಾವುದೋ ಬೀಜದ ವೆಂಕಪ್ಪಯ್ಯ ಇಂತಹದೇ ಒಂದು ತಾಂತ್ರಿಕ ಕಾರಣಕ್ಕೆ ಈ ನೆಲದಲ್ಲಿ ನೆಲೆಯೂರಿದ. ಈಗ

ಅದಕ್ಕೆ ತದ್ವಿರುದ್ಧವಾದುದು ಸಂಭವಿಸಲಿದೆ. ಬಂಗಾರಣ್ಣನ ಮೊಮ್ಮಗ ಸೇರಲಿರುವುದು ಇದೇ ವೆಂಕಪ್ಪಯ್ಯನ ಕವಲಿಗೆ ಅನ್ನುವುದು ಅರ್ಥಪೂರ್ಣ. ಆದರೆ ಆ ಕವಲಿನ ತಲೆಯಾದ ಶ್ರೀನಿವಾಸ ಈಗ ಭೂಮಿಯ ಒಡೆತನವನ್ನು ಹೊಂದಿಲ್ಲ. ಹೀಗೆ ಸಂಬಂಧಗಳ ಗೋಜಲು, ಉತ್ತರಾಧಿಕಾರ ಪ್ರಶ್ನೆಗಳ ಅಸಂಗತತೆ ಇಲ್ಲಿ ಸಂಕೀರ್ಣವಾಗಿ ದಾಖಲಾಗಿದೆ.

ಈ ಕಾದಂಬರಿಯ ಒಂದು ವೈಶಿಷ್ಟ್ಯ ಎಂದರೆ ಈಶ್ವರಿಮೂಲೆ ಕುಟುಂಬದ ಜೋಡಿ ಗಂಡುಮಕ್ಕಳು ಮತ್ತು ಪ್ರತಿ ಜೋಡಿಗೂ ಇರುವ ದಾಯಾದಿ ಮತ್ಸರ. ಪ್ರಾರಂಭದ ವೆಂಕಪ್ಪಯ್ಯ– ಕೃಷ್ಣಯ್ಯ ಜೋಡಿಯ ನಂತರ ಕೃಷ್ಣಯ್ಯನ ಮಕ್ಕಳಾದ ಮಾಪಣ್ಣ ಮತ್ತು ಕೇಚಣ್ಣ ಹೀಗೆಯೇ ದಾಯಾದಿಗಳಂತೆ ಬದುಕುತ್ತಾರೆ. ನಂತರದ ಮೂರನೆಯ ತಲೆಮಾರು, ಅಂದರೆ ಬಂಗಾರಣ್ಣನ ಮಕ್ಕಳಾದ ನಾರಾಯಣ ಮತ್ತು ಲಕ್ಷ್ಮೀನಾರಾಯಣ ಕೂಡ ಹೀಗೆಯೇ. ನಿಜವಾದ ದಾಯಾದಿಗಳಾದ ಪುತ್ತು ಭಟ್ಟರು ಮತ್ತು ಬಂಗಾರಣ್ಣ ಹೇಗೂ ಈ ಕಾದಂಬರಿಯ ಕೇಂದ್ರದಲ್ಲಿಯೇ ಇದ್ದಾರೆ. ಹಾಗಾದರೆ ನಾರಾಯಣ ಮತ್ತು ಶ್ರೀನಿವಾಸ ಮಿತ್ರರಾದುದು ಕೇವಲ ಆಕಸ್ಮಿಕವಿರಬಹುದೆ? ಇರಲಾರದು. ಮೇಲಿನೆಲ್ಲ ದಾಯಾದಿ ಜೋಡಿಗಳು ಭೂಮಿಯ ಮೇಲಿನ ವ್ಯಾಮೋಹದಿಂದ ದಾಯಾದಿಗಳಾದುದು; ಆದರೆ ಈ ಮಿತ್ರರು ಭೂಮಿಯನ್ನು ಮಾರಲು ಹೊರಟವರು. ಪರಸ್ಪರ ಜಿದ್ದಿನಿಂದ ದಾಯಾದಿ ಮಾತ್ಸರ್ಯವನ್ನು ತೋರಿಸುವವರು ಆಸ್ತಿಯನ್ನು ಒಟ್ಟಾಗಿ ಹಿಡಿದಿಟ್ಟುಕೊಂಡು–ಹಿಡುವಳಿಯಾಗಿಸಿ– ಅದನ್ನು ಊರ್ಜಿತಗೊಳಿಸುವಲ್ಲಿ ತೋರುವ ಛಲವು ಅವರ ಜೀವನಪ್ರೀತಿಗೂ ಸಾಕ್ಷಿಯಾಗುತ್ತದೆ ಅನ್ನುವುದೇ ಇಲ್ಲಿನ ವೈಶಿಷ್ಟ್ಯ. ತೀವ್ರವಾಗಿ ಬದುಕಿದ ಆ ಜನಾಂಗದ ನೋಯುವ ಶಕ್ತಿ ಇದ್ದದ್ದೇ ಭೂಮಿಯ ಜತೆಗೆ ಅವರು ಹೊಂದಿದ್ದ ಕರುಳುಬಳ್ಳಿ ಸಂಬಂಧದಲ್ಲಿ. ಈ ತಲೆಮಾರಿನ ನಾರಾಯಣ ಮತ್ತು ಶ್ರೀನಿವಾಸರಿಗೆ ಆ ತೀವ್ರತೆ ಇಲ್ಲ ಎನ್ನುವುದೇ ತಾತ್ಪರ್ಯ. ಬದುಕಿನಲ್ಲೂ ಈ ತೀವ್ರತೆ ಅವರಲ್ಲಿ ಇಲ್ಲವೆನ್ನುವುದು ಧ್ವನಿತಾರ್ಥ. ಆಧುನಿಕತೆ ಬದುಕಿನಲ್ಲಿ ಅರ್ಥ ಶೂನ್ಯತೆಯನ್ನು ಕೂಡಾ ತಂದೊಡ್ಡುತ್ತದೆಯೇ ಎನ್ನುವ ಚಿಂತನೆಯನ್ನು ಕೂಡಾ ಈ ನಿಟ್ಟಿನ ವಿಶ್ಲೇಷಣೆ ಹುಟ್ಟುಹಾಕುತ್ತದೆ.

ಮೊಗಸಾಲೆಯವರು ಈ ಕಾದಂಬರಿಯ ಮೂಲಕ ಇಲ್ಲಿ ಸೀತಾಪುರ ಎಂದು ನಾಮಾಂಕಿತವಾಗಿರುವ ತಮ್ಮ ಹುಟ್ಟೂರಿನ ಕಥೆಗಳ ಮುಖಾಂತರ ಭಾರತವನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿ ಸಫಲರಾಗಿದ್ದಾರೆ. ಇದು ಕನ್ನಡದ ಮಹತ್ವದ ಕಾದಂಬರಿಗಳಲ್ಲಿ ಒಂದು. ಮೊಗಸಾಲೆಯವರ 'ಉಲ್ಲಂಘನೆ' ಕಾದಂಬರಿಯಲ್ಲಿಯೂ, ಈ ಕಾದಂಬರಿ ಯಲ್ಲಿಯೂ ಒಂದು ಸಮಾನ ಅಂಶವಿದೆ. ಅದೇನೆಂದರೆ ವ್ಯವಹಾರ ಅಥವಾ ಉದ್ಯೋಗ ನಿಮಿತ್ತ ಬೃಹತ್ ನಗರಗಳಿಗೆ ವಲಸೆಹೋಗುವ ಹೊಸತಲೆಮಾರಿನ ಪ್ರತಿನಿಧಿಗಳು ತಮ್ಮ ಹುಟ್ಟೂರಿನ ನೆಲವನ್ನು ವಾಣಿಜ್ಯ ಸರಕು ಎಂಬ ದೃಷ್ಟಿಯಿಂದ ನೋಡುತ್ತಾರೆ. ಆದರೆ ಇಲ್ಲಿ ಉಳಿದಿರುವ ಹಳೆಯ ತಲೆಮಾರಿನ ಕೊನೆಯ ಕೊಂಡಿಗಳಿಗೆ ಇಲ್ಲಿನ ನೆಲ ಇಲ್ಲಿನ ಸಮೃದ್ಧ ಸಂಸ್ಕೃತಿಯನ್ನು ಧಾರಣೆಮಾಡುವ ಧಾರಿಣಿ. ಅವರು ಹೊಸ ತಲೆಮಾರಿನ ಪರವೂರಿಗೆ ಹೋಗಿರುವ ಯುವಕರನ್ನು ಸಂಶಯ ಮತ್ತು ಆತಂಕದಿಂದ ನೋಡುತ್ತಾರೆ. ಈ ಬಗೆಯ ಕೊನೆ ಮೊಗಸಾಲೆಯವರ ಎರಡೂ ಕಾದಂಬರಿಗಳಲ್ಲಿದೆ.

ನಮ್ಮ ಆದರ್ಶವಾದೀ ಕಾದಂಬರಿಗಳು ಅಥವಾ ನವೋದಯದ ಹಲವು ಕನ್ನಡ

ಕಾದಂಬರಿಗಳಲ್ಲಿ ಜಮೀನುದಾರೀ ಶೋಷಣೆಗೊಳಗಾದ ಅನಕ್ಷರಸ್ಥ ಹಳ್ಳಿಗರಿರುವ, ಅಭಿವೃದ್ಧಿಯಲ್ಲಿ ಹಾಗೂ ಸಂಘಟನೆಯಲ್ಲಿ ಹಿಂದುಳಿದ ಹಳ್ಳಿಗಳಿಗೆ ಪಟ್ಟಣದಲ್ಲಿ ಕಲಿತು ಬರುವ ವಿದ್ಯಾವಂತ ಯುವ ನಾಯಕ ಬದಲಾವಣೆ ಹಾಗೂ ಸುಧಾರಣೆಯ ಅಜೆಂಡಾ ಹಿಡಿದುಕೊಂಡು ಮರಳಿಬರುವುದು ಕಂಡುಬರುತ್ತದೆ. ಈ ಕಾಲಘಟ್ಟದ ಕೆಲವು ಕಾದಂಬರಿಗಳಲ್ಲಿ, ಮುಖ್ಯವಾಗಿ ಮೊಗಸಾಲೆಯವರ ಕಾದಂಬರಿಗಳಲ್ಲಿ ಇದಕ್ಕೆ ವ್ಯತಿರಿಕ್ತವಾದ ಚಲನೆಯೊಂದು ಕಂಡುಬರುತ್ತಿರುವುದು ಅಧ್ಯಯನ ದೃಷ್ಟಿಯಿಂದ ಮುಖ್ಯವಾಗಿದೆ. ಹಳ್ಳಿಯ ಕೃಷಿವ್ಯವಸ್ಥೆ ಛಿದ್ರವಾಗುತ್ತಿದೆ ಎಂದು ಮಾತ್ರವಲ್ಲ; ಆದರ್ಶವಾದೀ ಸಂಘಸಂಸ್ಥೆಗಳು ಕೊನೆಯುಸಿರೆಳೆಯುವುದನ್ನು ಕೂಡಾ ಚಿತ್ರಿಸುವ ಕಥಾನಕಗಳಿವು ಎನ್ನುವುದು ಮುಖ್ಯವಾಗಿದೆ.

ಒಟ್ಟಿನಲ್ಲಿ ನಮ್ಮ ಕಾಲದಲ್ಲಿ ಸೃಷ್ಟಿಯಾಗಿರುವ ಮಹತ್ವದ ಕಾದಂಬರಿ 'ಮುಖಾಂತರ'. ಸಮಕಾಲೀನ ಬದುಕಿನ ಕುರಿತು ಕಾದಂಬರಿಯ ನಿಲುವುಗಳು ಒಂದು ಶತಮಾನದ ನಂತರ ಹೇಗೆ ಸ್ವೀಕಾರ್ಯವಾಗುತ್ತವೆ ಎನ್ನುವುದು ನಮಗೀಗ ಊಹೆಗೆ ಬಿಟ್ಟ ವಿಚಾರ. ಆದರೆ ಒಂದು ಶತಮಾನದ ಹಿಂದಿನ ಬದುಕನ್ನು ಮೊಗಸಾಲೆಯವರು ಗ್ರಹಿಸಿರುವ ರೀತಿ ಮಾತ್ರ ಅದ್ಭುತವಾಗಿದೆ.

ಕತ್ತಲನು ಕಿತ್ತೊಗೆವೆನೆಂಬ ಭ್ರಮೆ ಬೇಡ
ಹೊತ್ತಿಸಿಟ್ಟರೆ ಸಾಕು ಸಣ್ಣ ಬತ್ತಿ ಹಣತೆ
ಒತ್ತಿಬಹ ಕತ್ತಲನು ನುಂಗುತಲಿ ಹನಿ ಬೆಳಕು
ಸುತ್ತಲಿನ ಈ ಜಗಕು ಬರಲಿ ಅಸ್ತಿತ್ವ

# ನೇಷನ್ ಸ್ಟೇಟ್: ಜಾಗತೀಕರಣಗೊಂಡಿರುವ ಕಲ್ಪನೆ

**ಡಾ. ಎ.ಷಣ್ಮುಖ**
ಸಹ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ ಮತ್ತು
ಉಪ ನಿರ್ದೇಶಕರು, ಸ್ಥಳೀಯ ಸಂಸ್ಕೃತಿಗಳ ಅಧ್ಯಯನ ಕೇಂದ್ರ
ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ–577451

ಇಂದಿನ ಭಾರತದಂತಹ ತೃತೀಯ ಜಗತ್ತಿನ ರಾಷ್ಟ್ರ–ರಾಜ್ಯಗಳು ಹಲವು ಸಾಂಸ್ಥಿಕ ಮತ್ತು ರಾಜಕೀಯ ಸಮಸ್ಯೆಗಳಲ್ಲಿ ತೊಳಲುತ್ತಿವೆ. ಅವುಗಳಲ್ಲಿ ಬಹುಮುಖ್ಯವಾದದು ಒಂದು ಕಡೆ ಭ್ರಷ್ಟಾಚಾರವಾದರೆ ಮತ್ತೊಂದೆಡೆ ರಾಷ್ಟ್ರೀಯ ಏಕತೆಯದ್ದು. ಈ ಸಮಸ್ಯೆಗಳು ಮೇಲ್ನೋಟಕ್ಕೆ ಇಲ್ಲಿಯ ರಾಜಕಾರಣಿ ಮತ್ತು ನೌಕರಾಶಾಹಿ ವರ್ಗದ ಅಪ್ರಾಮಾಣಿಕತೆ ಮತ್ತು ಜನರ ರಾಷ್ಟ್ರ/ರಾಜಕೀಯ ಪ್ರಜ್ಞೆಗಳ ಕೊರತೆ ಕಾರಣವೆಂದು ಸಾಮಾನ್ಯವಾಗಿ ನಂಬಲಾಗಿದೆ. ಇತ್ತೀಚಿನ ಸಂಶೋಧನೆಗಳು (Balagangadhara S. N. and Esther Bloch,) ಈ ರೀತಿಯ ಸಮಸ್ಯೆಗಳನ್ನು ಹೀಗೆ ನೋಡುವುದಕ್ಕಿಂತ ಭಿನ್ನವಾಗಿ ನೋಡಿದರೆ ಸಮಸ್ಯೆಯ ಸರಿಯಾಗಿ ಗುರುತಿಸಲು ಸಾಧ್ಯವಾಗಬಹುದೇನೋ ಎಂಬ ಗ್ರಹಿಕೆಯನ್ನು ಬಲಪಡಿಸುತ್ತಿವೆ. ಅವು ತೋರಿಸಿಕೊಡುವ ಹಾಗೆ ಇಲ್ಲಿ ಭ್ರಷ್ಟಾಚಾರ ಸರ್ವವ್ಯಾಪಕವೆಂಬುದಾಗಿ ಕಾಣಲಿಕ್ಕೆ ಮತ್ತು ಇಲ್ಲಿಯ ಜನನರಿಗೆ ದೇಶದ ಬಗ್ಗೆ ಮತ್ತು ರಾಷ್ಟ್ರದ ಏಕತೆಯ ಬಗ್ಗೆ ಕಾಳಜಿ, ಅಭಿಮಾನಗಳ ಕೊರತೆ ಇರುವುದಕ್ಕೆ ಇಲ್ಲಿಯ ಜನರಾಗಲೀ ಸಂಸ್ಕೃತಿಯಾಗಲಿ ಕಾರಣವೆಂಬಂತೆ ನೋಡುವುದಕ್ಕಿಂತ ಬೇರೆಯದೇ ಕಾರಣವಿದೆ. ಅದು ಪಶ್ಚಿಮದಿಂದ ಎರವಲು ತಂದ ರಾಜಕೀಯ ಪರಿಕಲ್ಪನೆಗಳು ಮತ್ತು ಸಂಸ್ಥೆಗಳು. ಇವು ಇಲ್ಲಿಯ ಜನರ ಅನುಭವ ಪ್ರಪಂಚದ ಗ್ರಹಿಕೆಗೆ ಸಿಗುತ್ತಿಲ್ಲವಾದ್ದರಿಂದ ಇವುಗಳನ್ನಿಟ್ಟುಕೊಂಡು ಏನು ಮಾಡಬೇಕೆಂಬುದು ಎನ್ನುವದು ಗೊತ್ತಾಗದೆ ಇವುಗಳೊಂದಿಗೆ ತಮಗೆ ತೋಚಿದ ಹಾಗೆ ವ್ಯವಹರಿಸಲು ಪ್ರಾರಂಭಿಸಿದ್ದಾರೆ (ಬಾಲಗಂಗಾಧರ ಎಸ್.ಎನ್.1994). ಇಷ್ಟನ್ನು ಹೇಳಿದ ಮೇಲೂ ಸಮಸ್ಯೆ ಸ್ವರೂಪ ನಮಗೆ ಸ್ಪಷ್ಟವಾಗುವುದಿಲ್ಲ. ಬದಲಿಗೆ, ಏಕೆ ಹೀಗೆ ಎಂಬ ಗೊಂದಲವೇ ಹೆಚ್ಚಾಗುತ್ತದೆ. ಇದನ್ನು ಸಾಂಸ್ಕೃತಿಕ ಭಿನ್ನತೆಯಿಂದ ಹುಟ್ಟಿದ ಸಮಸ್ಯೆ ಎಂದರೂ ಅದು ಹೇಗೆ ಎಂಬುದನ್ನು ತೋರಿಸಬೇಕಾಗುತ್ತದೆ ಈ ಹಿನ್ನೆಲೆಯಲ್ಲಿ ಈ ಲೇಖನವು ನೇಶನ್–ಸ್ಟೇಟ್ ಪರಿಕಲ್ಪನೆಯನ್ನು ತೆಗೆದುಕೊಂಡು ಪಶ್ಚಿಮದ ಸಂಸ್ಕೃತಿಯಲ್ಲಿ ಅದು ಬೆಳೆದು ಬಂದ ಸಂಧರ್ಭವನ್ನು ವಿವರಿಸುತ್ತಾ ಅದು ಅಲ್ಲಿಯ ಸಂಸ್ಕೃತಿಯ ಭಾಗವಾಗಿ ಬೆಳವಣಿಗೆ ಹೊಂದುತ್ತಾ ಬಂದಿದ್ದರಿಂದ ಅವರ ಅನುಭವ ಪ್ರಪಂಚಕ್ಕೆ ನಿಲುಕುತ್ತದೆ. ಅದೇ ಆ ಪರಿಕಲ್ಪನೆಗಳೂ ಒಂದು ಮೌಲ್ಯವಾಗಿಯೋ ಸಾಂಸ್ಥಿಕ ಮಾದರಿಯಾಗಿಯೋ ಮತ್ತೊಂದು ಸಂಸ್ಕೃತಿ ಹಿನ್ನೆಲಯ ಪರಿಸರಕ್ಕೆ ವಸಲಸೆ ಬಂದರೂ ಅಲ್ಲಿಯ ಜನರ ಅನುಭವಕ್ಕೆ ಅದು ದೂರವಾಗಿಯೇ ಉಳಿಯುತ್ತದೆ ಎಂಬುದನ್ನು ತೋರಿಸುವ ಪ್ರಯತ್ನ ಈ ಲೇಖನದಲ್ಲಿದೆ.

**ಸ್ಟೇಟ್: ಸಾರ್ವಭೌಮ ನಿಯಂತ್ರಕ ಮತ್ತು ನಿರ್ದೇಶಕ**

ನಮಗೆ ಗೊತ್ತಿರುವ ಹಾಗೆ ಸ್ಟೇಟ್ ಎನ್ನುವುದು ಒಂದು ಸಾರ್ವಭೌಮ ಸಂಸ್ಥೆ. ಯಾರೂ ಪ್ರಶ್ನಿಸಲಾರದ ಅಧಿಕಾರ ಅದಕ್ಕಿದೆ. ಜನರ ಜೀವನವು ಈ ಸ್ಟೇಟ್‌ನ ಸಾರ್ವಭೌಮ ಕಾನೂನುಗಳ ನಿಯಂತ್ರಣ ಮತ್ತು ನಿರ್ದೇಶನಕ್ಕೆ ಒಳಪಟ್ಟು ನಡೆಯಬೇಕು. ಈ ಸ್ವರೂಪದ ಸ್ಟೇಟ್ ಎಂದೆಂದಿಗೂ ಸಾರ್ವತ್ರಿಕವಾಗಿಯೇ ಇತ್ತೇ ಎಂದರೆ ಇಲ್ಲ, ಹಾಗಿರಲಿಲ್ಲ. ಈ ರೀತಿಯ ಸ್ಟೇಟ್ ಬೆಳೆದು ಬಂದಿದ್ದು ಪಶ್ಚಿಮ/ಯೂರೋಪಿನಲ್ಲಿ ಮತ್ತು ಈ ರೀತಿಯ ಸಾರ್ವಭೌಮ ನಿಯಂತ್ರಕ ಮತ್ತು ನಿರ್ದೇಶಕನ ಸ್ವರೂಪವನ್ನು ಪಡೆದುಕೊಂಡಿದ್ದು ಹೆಚ್ಚುಕಡಿಮೆ 17–18ನೇ ಶತಮಾನದ ನಂತರ (Mukherji, Partha Nath, 2010).

ಗ್ರೀಕ್ ಮತ್ತು ರೋಮ್‌ನ ಕಾಲಘಟ್ಟದಲ್ಲೀಯೂ ಅಲ್ಲಿ ಸ್ಟೇಟ್ ಕಲ್ಪನೆ ಇದ್ದರೂ ಅದು ಸಾರ್ವಭೌಮ ಸ್ಟೇಟ್ ಆಗಿರಲಿಲ್ಲ. ಅಂದರೆ ಜನರ ಜೀವನ ಸ್ಟೇಟ್‌ನ ಏಕೀಕೃತ ಸಾರ್ವಭೌಮ ಕಾನೂನಿಗೆ ಒಳಪಟ್ಟಿರಲಿಲ್ಲ. ಸೇಟ್‌ಗೆ ಈ ಸ್ವರೂಪ ಬರುವುದಕ್ಕೂ ಕಾನೂನಿಗೆ ಸಾರ್ವಭೌಮ ಸ್ವರೂಪ ದಕ್ಕುವುದಕ್ಕೂ ಸಂಬಂದವಿದೆ. ರೋಮನ್ನರ ಕಾಲದವರೆಗೂ ಕಾನೂನುಗಳ ಎಂದರೆ ಅದು ರೂಡಿ ಸಂಪ್ರದಾಯಗಳಂತೆ ಇದ್ದವು. ರೋಮನ್ ಸಾಮ್ರಾಜ್ಯ ನೂರಾರು ಬುಡಕಟ್ಟುಗಳನ್ನು ಒಳಗೊಂಡಿದ್ದರಿಂದ ಆ ನೂರಾರು ಬುಡಕಟ್ಟುಗಳ ಜನಜೀವನವು ಅವುಗಳದ್ದೇ ಆದ ನೀತಿ–ನಿಯಮ ಪದ್ಧತಿಗಳಂತೆಯೇ ಇತ್ತು (Raymond Wacks, 2006) ರೋಮನ್ನರ ಜಸ್ಟ್ ಜಂಟಿಯಂ ಈ ಸ್ವರೂಪದ ಕಾನೂನುಗಳ ಕ್ರೂಡೀಕರಣವಾಗಿತ್ತು. ಹಾಗಾಗಿ ಒಂದು ಬುಡಕಟ್ಟಿನ ಜೀವನಕ್ಕೆ ಸಂಬಂದಿಸಿದ ರೋಮನ್ನರ ನಿಯಮಗಳಿಗೂ ಮತ್ತೊಂದು ಬುಡಕಟ್ಟಿಗೆ ಸಂಬಂದಿಸಿದ ನಿಯಮಗಳಿಗೂ ಅಜಗಜಾಂತರ ವ್ಯತ್ಯಾಸಗಳಿದ್ದವು. ಹೀಗೆ ರೂಮನ್ನರ ಕಾಲಘಟ್ಟದಲ್ಲಿ ರಾಷ್ಟ್ರದ ಏಕೀಕೃತ ಸಾರ್ವಭೌಮ ಕಾನೂಗಳು ಆ ಸಾಮ್ರಾಜ್ಯದ ಎಲ್ಲಾ ನಾಗರೀಕರನ್ನು ನಿಯಂತ್ರಿಸಿ ನಿರ್ದೇಶಿಸುತ್ತಿರಲಿಲ್ಲ. ರೂಮನ್ ಬುಡಕಟ್ಟುಗಳ ಸಂಸ್ಕೃತಿಯಲ್ಲಿದ್ದ ರಿಲಿಜಿಯೊ ಸ್ವರೂಪವೇ ಹಾಗಿತ್ತು. ಒಂದೊಂದು ಬುಡಕಟ್ಟೂ ಪೀಳಿಗೆಯಿಂದ ಪೀಳಿಗೆಗೆ ದಾಟಿಕೊಂಡು ಬಂದ ಒಂದೊಂದು ರೀತಿಯ ಸಪ್ರದಾಯದ ರೂಡಿ–ಪದ್ದತಿಗಳನ್ನು ಪಾಲಿಸಿಕೊಂಡು ಬರುತ್ತಿದ್ದವು. ಅದಕ್ಕೆ ತಕ್ಕ ಹಾಗೆ ಪ್ರತಿಯೊಂದು ಬುಡಕಟ್ಟಿನ ಕಟ್ಟುಪಾಡುಗಳೂ ನೀತಿ ನಿಯಮಗಳೂ ವಿಭಿನ್ನವಾಗಿದ್ದವು (ಬಾಲಗಂಗಾಧರ ಎಸ್.ಎನ್ 1994).

ಈ ಪರಿಸ್ಥಿತಿ ರೋಮನ್ ಸಾಮ್ರಾಜ್ಯ ಕೊನೆಯ ಘಟ್ಟದಲ್ಲಿ ಮತ್ತು ಕ್ರಿಶ್ಚಿಯನ್ ಚರ್ಚಿನ ಪ್ರಭಾವ ದಟ್ಟವಾಗಿ ಹಬ್ಬಿದ ಸಂಧರ್ಭದಲ್ಲಿ ಬದಲಾಗುತ್ತದೆ. ಅಸಂಖ್ಯಾತ ರೋಮನ್ ಬುಡಕಟ್ಟುಗಳ ಅಸಂಖ್ಯಾತ ಜೀವನ ವಿಧಾನ/ನೀತಿನಿಯಮಗಳನ್ನು ಸುಳ್ಳು ಮಾರ್ಗಗಳೆಂದು ನಿರೂಪಿಸಿದ ಕ್ರಿಶ್ಚಿಯಾನಿಟಿ ಸಾರ್ವಭೌಮ ಗಾಡ್‌ನ ಯೋಜನೆ ಮತ್ತು ಇಚ್ಚೆಯಂತೆಯೇ ಸಕಲ ಮಾನವರು ಬದುಕವುದು ಯುಕ್ತವೆಂದು ವಾದಿಸಿತು. ಸಕಲರೂ ಆ ಸಾರ್ವಭೌಮ ಗಾಡ್ ಇಚ್ಚೆ/ಯೋಜನೆಯಂತೆ ಬದುಕಬೇಕೆಂದಾಗ ಎಲ್ಲರೂ ಒಂದೇರೀತಿಯ ಸತ್ಯವಾದ ಗಾಡ್‌ನ ನಿಯಮಗಳನ್ನು ಅನುಸರಿಸಬೇಕು. ಹಾಗಾಗಿ ಒಂದೊಂದು ಬುಡಕಟ್ಟು ಸಮುದಾಯ ಗಳಿಗೆ ಒಂದೊಂದು ರೀತಿಯ ನಿಯಮಗಳಿದ್ದರೆ ಅದು ಆಯಾ ಬುಡಕಟ್ಟುಗಳು ಹಾಕಿಕೊಂಡಿರುವ ಸುಳ್ಳು ಮಾರ್ಗಗಳ ಪರಿಣಾಮ. ಗಾಡ್ ನಿಯಮದಂತೆ

ಬದುಕುವುದೊಂದೇ ಸತ್ಯವಾದ ಮಾರ್ಗ ಮತ್ತು ಅದು ಒಂದೊಂದು ಸಮುದಾಯಕ್ಕೆ ಒಂದೊಂದು ರೂಪದಲ್ಲಿರುವುದಿಲ್ಲ. ಎಲ್ಲರಿಗೂ ಒಂದೇ ಆಗಿರುತ್ತದೆ. ಹಾಗೆಯೇ ಇಂತಹ ನಿಯಮಗಳು ಗಾಡ್‌ನ ನಿಯಮಗಳಾದ್ದರಿಂದ ಅವನ್ನು ಪ್ರಶ್ನಿಸಬಾರದು, ಏಕೆಂದರೆ ಅವನ್ನು ಪ್ರಶ್ನೆಮಾಡುವುದರಿಂದ ಗಾಡ್‌ನ ಅಸ್ತಿತ್ವವನ್ನೇ ಪ್ರಶ್ನಿಸಿದಂತೆ (ಅದೇ). ಹೀಗೆ ನಿಯಮಗಳ ಸಾರ್ವಭೌಮತೆಯ ಸ್ವರೂಪವನ್ನೂ ಕ್ರಿಶ್ಚಿಯಾನಿಟಿ ಪ್ರವರ್ಧಮಾನತೆಯೊಂದಿಗೇ ಗುರುತಿಸಬಹುದು.

ಹೀಗೆ ರೋಮನ್ನರ ಆಳ್ವಿಕೆ ಕೊನೆಗೊಂಡ ನಂತರ ಅಂದರೆ ಕ್ರಿ.ಶ. ನಾಲ್ಕನೇ ಶತಮಾನದಿಂದ ಕ್ರಿ.ಶ.13–14ನೇ ಶತಮಾನದವರೆಗೂ ಅಂದರೆ ಸರಿಸುಮಾರು ಒಂದು ಸಾವಿರ ವರ್ಷಗಳ ಕಾಲ ಕ್ರಿಶ್ಚಿಯನ್ ಚರ್ಚಿನ ಆಳ್ವಿಕೆಗೆ ಒಳಪಟ್ಟು ಯೂರೋಪು ಈ ಕ್ರಿಶ್ಚಿಯಾನ್ ಥಿಯಾಲಜಿಯ ಗಾಡ್, ಅವನ ಸಾರ್ವಭೌಮತೆ, ಅಲ್ಲಿಯ ಮಾನವ ಜನಜೀವನದ ಹಲವು ವಿಚಾರಗಳಿಗೆ ಸಂಬಂದಿಸಿದಂತೆ ಎಲ್ಲರೂ ಪಾಲಿಸಬೇಕಾದ ಆ ಗಾಡ್‌ನ ಕಾನೂನುಗಳ ಪರಿಕಲ್ಪನೆ ಬೆಳೆದು ಬಂತು. 16–17 ನೇ ಶತಮಾನದ ನಂತರ ಚಿರಪರಿತ 'ಚರ್ಚ್ ಮತ್ತು ಸ್ಟೇಟ್ ನಡುವಣ ವಿವಾದ' ಅಂತ್ಯಗೊಂಡ ನಂತರ ಪ್ರವರ್ಧಮಾನಕ್ಕೆ ಬಂದ ಸ್ಟೇಟ್ ಹೆಚ್ಚು ಕಡಿಮೆ ಚರ್ಚಿನ ಪಡಿಯಚಿನಂತೆಯೇ ಇತ್ತು. ಅಂದರೆ, ಒಂದು ರೀತಿಯಲ್ಲಿ ಸೆಕ್ಯುಲರೀಕೃತಗೊಂಡ ಚರ್ಚಿನ ರೂಪದಂತೆ. ಆ ಸ್ಟೇಟ್ ಕ್ರಿಶ್ಚಿಯಾನಿಟಿ ವಾದದಿಂದ ಮೂಡಿದ ಸಾರ್ವಭೌಮ ಅಧಿಕಾರದ ಸ್ವರೂಪ ಪಡೆಯಿತು. ಈ ರೀತಿಯ ಸೆಕ್ಯೂಲರೀಕೃತಗೊಂಡ ಸ್ಟೇಟ್‌ನ ಸಾರ್ವಭೌಮ ಕಾನೂನಿನ ಪರಿಕಲ್ಪನೆಯನ್ನು ಹ್ಯೂಗೋ ಗ್ರೋಷಿಯಸ್ ಮೊಟ್ಟಮೊದಲಿಗೆ ಕಟ್ಟಿಕೊಡುತ್ತಾನೆ. ಈ ರೀತಿಯ ಸೆಕ್ಯುಲರೀಕೃತ ಸಾರ್ವಭೌಮ ಕಾನೂನಿನ ಬೆಳವಣಿಗೆಯಾದ ಕೆಲವೇ ವರ್ಷಗಳಲ್ಲಿ ಸುಪ್ರಸಿದ್ದ ವೆಸ್ಟೇಫೇಲಿಯ ಒಪ್ಪಂದ ವೇರ್ಪಡುತ್ತದೆ. ಇಂದಿನ ನೇಷನ್–ಸ್ಟೇಟ್‌ನ ಪ್ರಾರಂಬವನ್ನು ಇಲ್ಲಿಂದ ಗುರುತಿಸುತ್ತಾರೆ. ಈ ಒಪ್ಪಂದಂತೆ ಒಂದು ನೇಷನ್(ಜನಾಂಗ) ವಾಸವಿರುವ ಭೂಪ್ರದೇಶದ ಗಡಿಯನ್ನು ಗುರುತಿಸಿಕೊಂಡು ಅದಕ್ಕೇ ಒಂದು ಸಾರ್ವಭೌಮ ಸ್ಟೇಟ್ ಸ್ಟೇಟ್ ಇರಬೇಕು. ಹೀಗೆ, ಪ್ರತಿಯೊಂದು ಜನಾಂಗಕ್ಕೂ ಒಂದೊಂದು ಸ್ಟೇಟ್ ರೂಪಿಸಿಕೊಂಡು ಆಯಾ ಜನಾಂಗ ವಾಸಿಸುವ ಪ್ರದೇಶದಲ್ಲಿ/ಆ ಪ್ರದೇಶದಲ್ಲಿ ವಾಸಿಸುವ ಜನಾಂಗದ ಮೇಲೇ ಆ ಸ್ಟೇಟ್ ಸಾರ್ವಭೌಮ ಕಾನೂಣು ಚಾಲ್ತಿಯಲ್ಲಿರುತ್ತದೆ. ಇದನ್ನು ಇತರೇ ಸ್ಟೇಟ್‌ಗಳಾಗಲೀ, ಸ್ಟೇಟ್‌ನ ಒಳಗಿರುವವರಾಗಲೀ ಪ್ರಶ್ನಿಸುವಂತಿಲ್ಲ (Raymond Wacks, 2006). ಈ ರೀತಿಯ ಸಾರ್ವಭೌಮ ಪ್ರಭುತ್ವದ ಮೊಳಕೆ ಇಲ್ಲಿ ಒಡೆಯುತ್ತದೆ.

ಅಂದರೆ, ಸಾರ್ವಭೌಮ ಪ್ರಭುತ್ವ ಅಥವಾ ಸ್ಟೇಟ್ ಎನ್ನುವುದು ಕ್ರಿಶ್ಚಿಯನ್ ನಂಬಿಕೆಯ ಸೆಕ್ಯುಲರೀಕೃತ ರೂಪವೆನ್ನುವುದು ಇಲ್ಲಿ ವೇದ್ಯವಾಗುತ್ತದೆ. ಯಾರೂ ಯಾವುದೇ ರೀತಿಯಲ್ಲಾದರೂ ಬದುಕುವುದು ತರವಲ್ಲ. ಒಂದು ಪ್ರಭುತ್ವದೊಳಗಿರುವ (ಗಾಡ್ ಪ್ರಭು ವಾದರೆ, ಆತನ ದೈವ ಸಾಮ್ರಾಜ್ಯದ ಪ್ರಜೆಗಳಾದ ಮಾನವ ಕುಲ ಆತನ ನಿಯಮಗಳನ್ನಷ್ಟೇ ಪಾಲಿಸಬೇಕು. ಮತ್ತು ಅದು ಎಲ್ಲರಿಗೂ ಏಕರೂಪದಲ್ಲಿರುತ್ತದೆಯೇ ವಿನಃ ಭಿನ್ನವಾಗಿರುವು ದಿಲ್ಲ). ಎಲ್ಲರೂ ಆ ಪ್ರಭುತ್ವದ ನಿಯಮಗಳನ್ನು ಪ್ರಶ್ನಾತೀತವಾಗಿ ಪಾಲಿಸಬೇಕು, ಮತ್ತೆ ಅದು ಏಕರೂಪವಾಗಿಯೇ ಇರಬೇಕು. ಇದೇ ನೆಲೆಯಲ್ಲಿಯೇ ಮುಂದೆ ಪ್ರಭುತ್ವದ ಬಗ್ಗೆ

ವ್ಯಸ್ಥಿತವಾದ ಸಿದ್ಧಾಂತಗಳನ್ನು ಬೆಳೆಸಲು ಪ್ರಯತ್ನಿಸುವ ಹಾಬ್ಸ್, ಲಾಕ್, ರೂಸ್ಸೋ, ಹಾಗೂ ಆಸ್ಟಿನ್‌ನಂತವರು ಸಾರ್ವಭೌಮ ಪ್ರಭುತ್ವದ ಚಿತ್ರಣವನ್ನು ಕೊಡುತ್ತಾರೆ. ಅದರಲ್ಲೂ ಲಾಕ್‌ನ ಸಿದ್ಧಾಂತ ಹೇಗೆ ಕ್ರಿಶ್ಚಿಯನ್ ಥಿಯಾಲಜಿಯ ಸೆಕ್ಯುಲರೀಕೃತ ರೂಪ ಎನ್ನುವುದನ್ನು ಎಸ್.ಎನ್.ಬಾಲಗಂಗಾಧರರು ಸ್ಪಷ್ಟವಾಗಿಯೇ ತೋರಿಸುತ್ತಾರೆ.

## ನೇಷನ್ ಸ್ಟೇಟ್: ನಾಗರೀಕತ್ವದ ಬಂಧನ

ಇಲ್ಲಿಯ ರಾಜಕೀಯ ವ್ಯವಸ್ಥೆಯನ್ನು ರಾಷ್ಟ್ರ-ರಾಜ್ಯದ(ನೇಷನ್ ಸ್ಟೇಟ್) ಮಾದರಿಯೆಂದು ಕರೆಯಲ್ಪಟ್ಟರೂ ಸಹ ವಾಸ್ತವದಲ್ಲಿ ಇದು ಹಾಗೆ ಅಸ್ತಿತ್ವದಲ್ಲಿದೆಯೇ ಎಂಬ ಪ್ರಶ್ನೆಯನ್ನು ಮುಂದಿಟ್ಟುಕೊಂಡರೆ ಉತ್ತರ ಸಮರ್ಪಕವಾಗಿ ದೊರೆಯುವುದಿಲ್ಲ. ಇದನ್ನು ಸ್ಪಷ್ಟಗೊಳಿಸಿಕೊಳ್ಳಲು ನೇಷನ್-ಸ್ಟೇಟ್ ಅಂದರೆ ಏನು ಅದು ಯಾವ ರೂಪದಲ್ಲಿರುತ್ತದೆ ಎಂಬ ಮಾದರಿಯನ್ನು ಹುಡುಕಿದರೆ ಅದು ಪಶ್ಚಿಮ ಯೂರೋಪಿನಲ್ಲಿ 17 ರಿಂದ 19ನೇ ಶತಮಾನದ ಕಾಲಘಟ್ಟದಲ್ಲಿ ಬೆಳವಣಿಗೆಯಾದ ಒಂದು ವ್ಯವಸ್ಥೆಯಾಗಿ ಕಂಡುಬರುತ್ತದೆ. ಅಲ್ಲಿ ನೇಷನ್ ಎನ್ನುವುದು ಒಂದು ಜನಾಂಗವಾದರೆ ಆ ಜನಾಂಗಕ್ಕೆ ಒಂದು ಪ್ರಭುತ್ವ ರೂಪಿಸಿಕೊಂಡರೆ ಅದು ನೇಷನ್ ಸ್ಟೇಟ್ ಎಂದಾಗುತ್ತದೆ (Elie Kedourie, 2004) 1648ರ ವೆಸ್ಟ್‌ಫೇಲಿಯ ಒಪ್ಪಂದದಲ್ಲಿ ಈ ರೀತಿಯ ರಾಜಕೀಯ ರಚನೆಗೆ ಒಂದು ಒಮ್ಮತಕ್ಕೆ ಬರಲಾಗಿತ್ತು. ಆದ್ದರಿಂದಲೇ ಆಧುನಿಕ ರಾಜಕೀಯ ವ್ಯವಸ್ಥೆಯ ಮೂಲವನ್ನು ಈ ಒಪ್ಪಂದದಿಂದಲೇ ರಾಜ್ಯಶಾಸ್ತ್ರಜ್ಞರು ಗುರುತಿಸುತ್ತಾರೆ. ಈ ಒಪ್ಪಂದದಂತೆ ಇದದರಲ್ಲಿ ಭಾಗವಹಿಸಿದ್ದ ರಾಷ್ಟ್ರಗಳಾದ ರೋಮ್, ಹಬ್ಸ್‌ಬರ್ಗ್, ಸ್ಪೈನ್, ಫ್ರಾನ್ಸ್, ಸ್ವೀಡನ್, ಡಚ್ ಮುಂತಾದವುಗಳನ್ನು ಸಾರ್ವಭೌಮ ನೇಷನ್ ಸ್ಟೇಟ್ಸ್‌ಗಳೆಂಬುದಾಗಿ ಮಾನ್ಯ ಮಾಡಲಾಯಿತು ಎನ್ನಲಾಗುತ್ತದೆ (Hendrik Spruyt, 2000). ಅಂದರೆ ಇಲ್ಲಿ ಪ್ರತಿಯೊಂದು ಜನಾಂಗವೂ ತನ್ನದೇ ಆದ ಸಾರ್ವಭೌಮ ಪ್ರಭುತ್ವವನ್ನು ಹೊಂದಬಹುದು.

ಸಾರ್ವಭೌಮ ಪ್ರಭುತ್ವವೆಂದರೆ ಒಂದು ರಾಜಕೀಯ ವ್ಯವಸ್ಥೆಯು ಒಂದು ಜನಾಂಗ ವಾಸಿಸುವ ಪ್ರದೇಶವೆಂದು ಒಂದು ಸೀಮಿತ ಗಡಿಯನ್ನು ಗುರ್ತಿಸಿಕೊಂಡು ಆ ಗಡಿಯೊಳಗೆ ಅಲ್ಲಿಯ ರಾಜಕೀಯ ವ್ಯವಸ್ಥೆಯು ಯಾವುದೇ ರೀತಿಯ ಕಾನೂನುಗಳನ್ನು ರೂಪಿಸಿ ಜಾರಿಗೊಳಿಸಬಹದು ಅದನ್ನು ಯಾರೂ ರಾಷ್ಟ್ರದ (ಒಳಗೆ ಮತ್ತು ಹೊರಗೆ) ಪ್ರಶ್ನಿಸುವಂತಿಲ್ಲ. ಅಂದರೆ ಆ ರಾಷ್ಟ್ರದ ಗಡಿಯೊಳಗೆ ಆ ರಾಜಕೀಯ ವ್ಯವಸ್ಥೆಗೆ ಪ್ರಶ್ನಾತೀತ ಅಧಿಕಾರ ಪ್ರಾಪ್ತವಾಗುತ್ತದೆ. ಅದರ ಕಾನೂನುಗಳು ಈ ಸಾರ್ವಭೌಮ ಸ್ವರೂಪವನ್ನು ಹೊಂದಿರುತ್ತವೆ. ಸಾರ್ವಭೌಮ ಕಾನೂನುಗಳು ಜನರ ಜೀವನವನ್ನು ನಿರ್ದೇಶಿಸಿ ನಿಯಂತ್ರಿಸುತ್ತಿದ್ದುದರಿಂದ ಈ ರೀತಿಯ ಸೇಟ್ ನೇಷನ್-ಸ್ಟೇಟ್ ಸ್ವರೂಪವನ್ನೇ ಹೊಂದಬೇಕಾದ ಒತ್ತಡವೂ ಇಲ್ಲಿ ಉಂಟಾಗಿತ್ತು (Walter Mattli, 2000) ಏಕೆಂದರೆ ಯೂರೋಪಿನಲ್ಲಿ ಹಲವಾರು ಜನಾಂಗಗಳಿದ್ದವು. ಪ್ರತಿಯೊಂದು ಜನಾಂಗವೂ ಪರಸ್ಪರ ಭಿನ್ನವಾಗುವುದು ಅವುಗಳ ಭಿನ್ನ ಜೀವನ ವಿಧಾನದಿಂದಾಗಿಯೇ. ಅಂದರೆ ಈ ಪ್ರತಿಯೊಂದು ಜನಾಂಗಗಳೂ ಭಿನ್ನ ರೂಢಿ-ನಿಯಮಗಳನ್ನು ಹೊಂದಿದ್ದರಿಂದ ತಮ್ಮ ಜನಾಂಗಕ್ಕೆ ವಿಶಿಷ್ಟವಾದ ಈ ರೂಢಿ-ನಿಯಮಗಳೇ ಸಾರ್ವಭೌಮ ಕಾನೂನುಗಳಾದಾಗ ಅಲ್ಲಿಯ ಜನರು ಅದನ್ನು ಸುಲಭವಾಗಿ

ಪಾಲಿಸುತ್ತಾರಲ್ಲದೆ ಅಂತಹ ನಿಯಮಗಳೊಂದಿಗೆ ಅವರ ಜನಾಂಗದ ಸಾಂಸ್ಕೃತಿ ಅನುಭವೂ ಮೇಳೈಸಿರುವುದರಿಂದ ಆ ನಿಯಮಗಳ ಮೂರ್ತರೂಪ, ರೂಪಕನಾದ ಸ್ಟೇಟ್‌ನೊಡನೆ ಅವರು ಮಾನಸಿಕವಾದ ಸೆಳತದ ಸಂಬಂದವನ್ನು ಬೇಳೆಸಿಕೊಳ್ಳುತ್ತಾರೆ ಇದೇ ನೇಷನಲಿಸಂನ ರೂಪದಲ್ಲಿ ಪ್ರಕಟಗೊಳ್ಳುತ್ತದೆ. ಅದೇ ಒಂದು ಜನಾಂಗದ ರೂಡಿನಿಯಮಗಳನ್ನು ಸಾರ್ವಭೌಮ ಕಾನೂನುಗಳನ್ನಾಗಿ ಹೊಂದಿದ್ದಾಗ ಅಂತಹ ರಾಷ್ಟ್ರದ ಗಡಿಯೊಳಗೆ ಇತರೇ ಜನಾಂಗಗಳು ಇದ್ದರೆ ಅವುಗಳನ್ನು ಪಾಲಿಸಲೇ ಬೇಕಾದ ಒತ್ತಡ ಉಂಟಾಗುತ್ತದೆ. ಅದು ಸಹಜವಾಗಿಯೇ ಅವರ ಜೀವನಕ್ರಮಕ್ಕೆ ವ್ಯತಿರಿಕ್ತವಾಗಿರುತ್ತದೆ. ಪರಿಣಾಮವಾಗಿ ಅಂತಹ ಜನಾಂಗಗಳು ಪ್ರತ್ಯೇಕಗಳ್ಳುವ ಇಲ್ಲವೇ ತಮ್ಮ ಜನಾಂಗದ ಮೂಲ ಪ್ರದೇಶದ ಪ್ರಭುತ್ವದೊಡನೆ ಸೇರಿಕೊಳ್ಳುವ ಪ್ರಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತವೆ. ಇಟಲಿ ಜರ್ಮನಿ ಏಕೀಕರಣದಂತಹ ಪ್ರಕ್ರಿಯೆಗಳು ಈ ಬಗೆಯವೇ.

ಒಂದು ನಿರ್ಧಿಷ್ಟ ಜನಾಂಗವು ತನ್ನದೇ ಆದಂತಹ ಸಾರ್ವಭೌಮ ಪ್ರಭುತ್ವ ಹೊಂದುವ ವಿದ್ಯಾಮಾನವನ್ನು ನೇಷನ್–ಸ್ಟೇಟ್ ಪರಿಕಲ್ಪನೆ ಸೂಚಿಸುತ್ತದೆ ಎಂಬುದು ಇಲ್ಲಿ ಸ್ಪಷ್ಟ. ಆ ಜನಾಂಗವು/ಜನಾಂಗದವರು (ನೇಷನ್) ತನ್ನದೇ ಆದ ಈ ಸಾರ್ವಭೌಮ ಪ್ರಭುತ್ವದ ಬಗ್ಗೆ ಬೆಳಸಿಕೊಳ್ಳುವ ಅವಿನಾಭಾವ ಸಂಬಂದವನ್ನು ನೇಷನಲಿಸಂ ಎನ್ನುವುದೂ ಅಷ್ಟೇ ಸ್ಪಷ್ಟ.

**ಜಾಗತೀಕರಣಗೊಂಡಿರುವುದೇನು: ನೇಷನ್ನೋ? ಸ್ಟೇಟೋ? ಅಥವಾ ನೇಷನ್–ಸ್ಟೇಟೋ?**

ಭಾರತದಂತಹ ಸಂಧರ್ಭದಲ್ಲಿ ಈ ಪ್ರಶ್ನೆ ಬಹುಮುಖ್ಯವಾಗುತ್ತದೆ. ಸ್ವಾತಂತ್ರ್ಯಾನಂತರ ವಿಶ್ವದ ಇತರೆಡೆಯಲ್ಲಂತೇ ಇಲ್ಲೂ ಒಂದು ರಾಜಕೀಯ ಮಾದರಿಯನ್ನು ರೂಪಿಸಲಾಯಿತು ಮತ್ತು ಅದನ್ನು ನೇಷನ್–ಸ್ಟೇಟ್ ಮಾದರಿ ಎಂದೂ ಕರೆಯಲಾಯಿತು. ಆದರೆ ಇದು ಸಂವಿದಾನ ಮತ್ತು ಶಾಸನಗಳ ರೂಪದಲ್ಲಿ ಪ್ರಕಟಗೊಂಡರೂ ಇಲ್ಲಿಯ ಜೀವನದ ಮಾದರಿಯಾಗಿ ಪ್ರಕಟಗೊಂಡಿತೇ ಎನ್ನುವುದು ಪ್ರಮುಖ ಪ್ರಶ್ನೆ. ಈ ಕುರಿತು ಬರೆಯಲ್ಪಟ್ಟಿರುವ ಅಸಂಖ್ಯಾತ ಲೇಖನಗಳು ಪುಸ್ತಕಗಳು ತೋರಿಸುವಂತೆ ಹಾಗೆ ಪ್ರಕಟಗೊಳ್ಳುತ್ತಿಲ್ಲ ಎನ್ನುವ ಹಲುಬುವಿಕೆ ಎದ್ದುಕಾಣುತ್ತದೆ. ಆದರೆ ಈ ಹಲುಬುವಿಕೆಗಳು ಹೀಗೆ ಪ್ರಕಟಗೊಳ್ಳದಿರಲು ಭಾರತೀಯ ಸಮಾಜವನ್ನು ಅಂದರೆ ಇಲ್ಲಿಯ ಜಾತಿ ಪದ್ಧತಿ, ಶೋಷಣೆಯನ್ನೇ ಆಧಾರವನ್ನಾಗಿಸಿಕೊಂಡಿರುವ ಹಿಂದೂ ಧರ್ಮ, ಅದರ ಮೌಡ್ಯತೆ ಮತ್ತು ಒಡಕಿನ ಗುಣಗಳು ಅದರೊಳಗೆ ಜೀವಿಸುವ ಸಾಮಾನ್ಯ ಜನರನ್ನು ಮತ್ತು ಅವರಿಂದ ಆಯ್ಕೆಗೊಂಡ ನಾಯಕರನ್ನು ಹೊಣೆಯನ್ನಾಗಿಸುತ್ತದೆ (Bidyut Chakrabarty, 2008).

ಆದರೆ, ಈ ಮಾದರಿಯು ವಾಸ್ತವವಾಗಿ ಪ್ರಕಟಗೊಳ್ಳಲು ಇಲ್ಲಿಯರೆಲ್ಲರೂ ಒಂದು ಜನಾಂಗವಾಗಿರಬೇಕು ಮತ್ತು ಸಾರ್ವಭೌಮ ಕಾನೂನುಗಳನ್ನು ಏಕರೂಪ ನಿರ್ದೇಶನವಾಗಿ ಸ್ವೀಕರಿಸಲು ಆ ರೀತಿಯ ಸಾರ್ವಭೌಮ ನಿಯಮವೆಂದರೇನು ಮತ್ತು ಅದನ್ನು ಪ್ರಶ್ನಿಸದೆ ಪಾಲಿಸಬೇಕು ಎಂಬುದನ್ನು ಜೀವನ ವಿದಾನವನ್ನಾಗಿ ಹೊಂದಿರುವ ಸಂಸ್ಕೃತಿಯೂ ಇಲ್ಲಿರಬೇಕು ಅಲ್ಲವೇ ಎನ್ನುವಂತಹ ಅಂಶಗಳನ್ನು ಮುಂದಿಟ್ಟುಕೊಂಡರೆ ಇಡೀ ವಿಷಯವನ್ನು ಬೇರೆಯದೇ ರೀತಿಯಲ್ಲಿ ಚರ್ಚಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಸ್ವತಂತ್ರ ಪೂರ್ವದಲ್ಲಿ

ಈ ರೀತಿಯ ಒಂದು ಜನಾಂಗವಿದ್ದ ಲಕ್ಷಣಗಳಿಲ್ಲ. ಹಾಗೆಯೇ ಸ್ವತಂತ್ರ ನಂತರವೂ ಆ ರೀತಿಯ ಜನಾಂಗ ಸೃಷ್ಟಿಯಾಗಲೂ ಇಲ್ಲ. ಹಾಗೆಯೇ, ಸಾರ್ವಭೌಮ ಸ್ಟೇಟ್‌ನ ಪರಿಚಯವೂ ಭಾರತದಲ್ಲಿ ಇರಲಿಲ್ಲ; ಅದು ಬ್ರಿಟೀಷರಿಂದ ನಮಗೆ ಬಳುವಳಿಯಾಗಿ ಬಂದ ಪರಿಕಲ್ಪನೆ. ಆದರೆ ಅದೆಂದೂ ಇಲ್ಲಿಯ ಜೀವನ ವಿಧಾನವಾಗಲಿಲ್ಲ. ಹಿಂದೆ ರಾಜಮಹಾರಾಜರ ಆಳ್ವಿಕೆಯಲ್ಲಿ ಸ್ಥಳೀಯ ಜನರ ಜೀವನ ಅಲ್ಲಿಯ ಇಲ್ಲವೇ ಆಯಾ ಜಾತಿಗಳ ರೂಢಿ ಪದ್ಧತಿಯಂತೆ ನಡೆಯುತ್ತಿದ್ದವೇ ವಿನಃ ಪ್ರಭುತ್ವಗಳ ಕಾನೂನಿನ ಪ್ರಕಾರವಾಗೇನೂ ಅಲ್ಲ. ಹಾಗಾಗಿ ಪ್ರಭುತ್ವದ ಕಾನೂನಿನ ಪ್ರಕಾರ ಜೀವನ ನಡೆಸುವುದೂ ಇಲ್ಲಿಯ ಸಂಸ್ಕೃತಿಗೆ ಅಷ್ಟೇ ಅಪರಿಚಿತ. (ರಾಜಾರಾಮ ಹೆಗಡೆ, 2008).

ಈ ರೀತಿಯ ಸಂಸ್ಕೃತಿಯಿರುವೆಡೆ ಮೊದಲಿಗೆ ಸ್ಟೇಟ್ ಬ್ರೀಟೀಷರ ಮೂಲಕ (ಇಲ್ಲಿಯ/ಹಿಂದು ಜನರ ಜೀವನದ ಆಧಾರ ನಿಯಮಗಳೆಂದು ಕ್ರೋಢೀಕರಿಸಿ ಶಾಸನಗಳನ್ನಾಗಿ ಮಾಡಿ) ಪ್ರವೇಶವಾಯಿತು. ನಂತರ, ಸ್ವತಂತ್ರಾ ನಂತರ ನೇಷನ್–ಸ್ಟೇಟ್ ಎನ್ನುವುದು ಭಾರತೀಯ ಪ್ರಭುತ್ವ ಭಾರತೀಯ ಕಾನೂನುಗಳ (ಭಾರತೀಯರದ್ದೆಂದು ಕ್ರೋಢೀಕರಿಸಿ ಕೊಟ್ಟವರು ಬ್ರಿಟೀಷರು) ಮೂಲಕ ಆಳುವ ವ್ಯವಸ್ಥೆಯ ರೂಪದಲ್ಲಿ ಪ್ರವೇಶವಾಯಿತು. ಆದರೆ ನೇಷನ್ ಸ್ಟೇಟ್ ಎಂದಿಗೂ ಇಲ್ಲಿಯ ಜನರ ಅನುಭವ ಪ್ರಪಂಚದ ವಾಸ್ತವವಾಗಿ ಬದಲಾಗಲಿಲ್ಲ. ಅದಕ್ಕೆ ಇಲ್ಲಿಯ ಜನರೆಲ್ಲರೂ ಒಂದು ಜನಾಂಗವಾಗಿ ಬದಲಾಗಬೇಕಿತ್ತು ಮತ್ತು ಪಶ್ಚಿಮ ಸಂಸ್ಕೃತಿಯ ಪಡಿಯಚ್ಚಿನಂತೆ ಸಮಾಜವೂ ಬದಲಾಗ ಬೇಕಿತ್ತು. ಆದರೆ ಅದಾಗದ ಕಾರಣ (ಆಗಬೇಕೆಂಬ ಆಶಯ ಇದಲ್ಲ) ಇದು ಕೇವಲ ಪರಿಕಲ್ಪನೆಯಲ್ಲಿ ಉಳಿಯಿತೇ ವಿನಹ ಜನರ ವಾಸ್ತವಿಕ ಜೀವನ ವಿಧಾನವಾಗಿ ಬದಲಾಗಲಿಲ್ಲ.

**References:**

Hendrik Spruyt "The End of Empire and the Extension of the Westphalian System: The Normative Basis of the Modern State Order" in James A. Caporaso , ed. (2000), Continuity and Change in the Westphalian Order, Blackwell Publisher, UK.

Walter Mattli "Sovereignty Bargains in Regional Integration" in James A. Caporaso, ed. (2000), Continuity and Change in the Westphalian Order, Blackwell Publisher, UK.

Bidyut Chakrabarty (2008) Indian politics and society since independence: events, processes and ideology" Routledge, Newyark.

Roger Scruton, "In Defence of The Nation", Derek Matravers and Jon Pike(ed), (2005)Debates in Contemporary Political Philosophy - An Anthology, Routledge, London.

Raymond Wacks (2006) Philosophy of Law: A Very Short Introduction, Oxford University Press, Newyork

Elie Kedourie (2004) “Nationalism”, Blackwell Publishers, Oxford, UK.

Molina, Fernando and Oiarzabal, Pedro J.(2009) 'Basque-Atlantic shores: ethnicity, the nation-state and the diaspora in Europe and America (1808-98)', Ethnic and Racial Studies, 32: 4, 698 — 715

Alessandra Beasley Von Burg, Caught Between History and Imagination Vico's Ingenium for a Rhetorical Renovation of Citizenship Philosophy and Rhetoric, Volume 43, Number 1, 2010, pp. 26-53 (Article) Published by Penn State University Press

Mukherji, Partha Nath(2010) 'Civic-secular and ethnic nationalisms as bases of the nation-state: multiculturalism at the crossroads?', Asian Ethnicity, 11: 1, 1 — 23

Rajarama Hegade (2008) “Vasaatupurva Karnatakada Rajyapaddati”, Prasaranga, Kannada University, Hampi.

Balagangadhara S.N. The Heathen in his Blindness Asia West and the Dynamics of the Religion, Manohar Publishers, 2005 (1994).

Balagangadhara S. N. and Esther Bloch, “Colonialism, Colonial Consciousness, and Political Theory”, Research Centre Vergelijkende Cultuurwetenschap, Ghent University, Belgium.

ಸುಪ್ತ ಭಾವಗಳೆಲ್ಲ
ಶಕ್ತ ಪದದಲಿ ಬೆರೆತು
ಆಪ್ತವಾದವು ಮನಕೆ ಮತ್ತೆ ಬಂದು

# ಕನ್ನಡ–ಮಲಯಾಳಂ ನುಡಿಸಂಬಂಧ

**ಡಾ. ಎ. ಮೋಹನ ಕುಂಟಾರ್**
ಪ್ರಾಧ್ಯಾಪಕರು/ಮುಖ್ಯಸ್ಥರು
ಭಾಷಾಂತರ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–583276 ಹೊಸಪೇಟೆ ತಾಲೂಕು

ಕರ್ನಾಟಕ ಮತ್ತು ಕೇರಳ ರಾಜ್ಯಗಳ ಗಡಿಪ್ರದೇಶಗಳಲ್ಲಿ ಕನ್ನಡ–ಮಲಯಾಳಂ ಭಾಷೆಗಳು ಪರಸ್ಪರ ಪ್ರಭಾವಿಸಿವೆ. ಪರಿಣಾಮವಾಗಿ ಎರಡೂ ಭಾಷೆಯ ಜನಸಮುದಾಯಗಳು ಸಾಂಸ್ಕೃತಿಕವಾಗಿ ವಿಶಿಷ್ಟ ಸನ್ನಿವೇಶದಲ್ಲಿ ಬದುಕುತ್ತಿರುತ್ತವೆ. ಜನರು ಪೂರ್ಣವಾಗಿ ಕನ್ನಡವೂ ಅಲ್ಲದ ಮಲಯಾಳವೂ ಅಲ್ಲದ ಸಮ್ಮಿಶ್ರ ಸಂಸ್ಕೃತಿಯ ಭಾಗವಾಗಿ ವಿಶಿಷ್ಟ ಸಾಂಸ್ಕೃತಿಕ ಪರಿಸರದ ನಿರ್ಮಾಣಕ್ಕೆ ಕಾರಣರಾಗಿರುತ್ತಾರೆ. ಗಡಿಪ್ರದೇಶದ ಜನರು ಮಾತನಾಡುವ ಭಾಷೆ, ಬದುಕಿನ ರೀತಿ ನೀತಿಗಳು, ಆಚಾರ ವಿಚಾರಗಳು ಎಲ್ಲವೂ ಇದರ ಹಿನ್ನೆಲೆಯಲ್ಲಿ ಇವೆ. ಕೇರಳ–ಕರ್ನಾಟಕದ ಗಡಿಪ್ರದೇಶದಲ್ಲಿ ಅದರಲ್ಲೂ ಕಾಸರಗೋಡಿನಲ್ಲಿ ಇಂತಹ ಸಂಕರ ಸಂಸ್ಕೃತಿಯನ್ನು ಗುರುತಿಸಬಹುದು.

ಹಿಂದೆ ಕಾಸರಗೋಡು ವಿಜಯನಗರ ಸಾಮ್ರಾಜ್ಯದ ಅಧೀನವಾಗಿತ್ತು. ನಂತರ ಕೆಳದಿ ನಾಯಕರ ಅವಧಿಯಲ್ಲಿ ಕಾಸರಗೋಡಿನ ಭೂಪ್ರದೇಶಗಳು ರಾಜಕೀಯವಾಗಿ ಕನ್ನಡ ಆಡಳಿತದ ಭಾಗವಾಗಿದ್ದವು. ಹಾಗಾಗಿ ಅಲ್ಲಿ ಕನ್ನಡ ಜನಸಮುದಾಯಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದು ನೆಲೆಸಿದುವು. ಕನ್ನಡ ರಾಜರ ಆಡಳಿತದ ವ್ಯಾಪ್ತಿಯಲ್ಲಿದ್ದ ಈ ಪ್ರದೇಶದ ಮಲಯಾಳಂ ಮನೆ ಮಾತಿನವರು ಕನ್ನಡವನ್ನೇ ಹೆಚ್ಚು ಅವಲಂಬಿಸಿದ್ದರು. ಪರಿಣಮವಾಗಿ ಈಗ ಸ್ಥಳೀಯರಾದ ತುಳು ಜನಸಮುದಾಯಗಳ ನಡುವೆ ಕನ್ನಡ, ಮಲಯಾಳದ ಸಮುದಾಯಗಳು ಸೇರಿ ವಿಶಿಷ್ಟ ಸಾಂಸ್ಕೃತಿಕ ಸಂದರ್ಭದಲ್ಲಿ ಬದುಕುತ್ತಿವೆ.

ಕಾಸರಗೋಡಿನಲ್ಲಿ ವ್ಯಾವಹಾರಿಕ ಕನ್ನಡ ಎನ್ನುವುದು ಶಾಲೆಯಲ್ಲಿ ಕಲಿತ ಕನ್ನಡದ ಆಡುರೂಪ. ಅಂದರೆ ಗ್ರಾಂಥಿಕ ಕನ್ನಡದ ಆಡುರೂಪ. ಇದು ಕನ್ನಡದ ಹಲವು ಸಮುದಾಯಗಳು ಪರಸ್ಪರ ಸಂವಹನಕ್ಕಾಗಿ ಬಳಸುವ ಭಾಷೆ. ಹಾಗೆಯೇ ಮಲಯಾಳಂ ಮತ್ತು ತುಳು ಸಮುದಾಯಗಳಿಗೆ ಶಾಲೆಯಲ್ಲಿ ಕಲಿತ ಕನ್ನಡವೇ ವ್ಯಾವಹಾರಿಕ ಭಾಷೆಯೂ ಆಗಿದೆ. ಆದರೆ ಕನ್ನಡ ಸಮುದಾಯಗಳು ತಮ್ಮವರಲ್ಲಿ ಪರಸ್ಪರ ವ್ಯವಹರಿಸುವುದು ಖಾಸಗೀ ಭಾಷೆಯಲ್ಲಿ. ಇದು ಆಯಾ ಜನಸಮುದಾಯಗಳ ಅಸ್ತಿತ್ವದ (Identify) ಭಾಗವಾಗಿಯೇ ಉಳಿದುಕೊಂಡಿದೆ. ಇಂತಹ ಜನಸಮುದಾಯಗಳ ಕನ್ನಡ ಭಾಷೆ ಕಾಸರಗೋಡು ಪ್ರದೇಶದಲ್ಲಿ ಅನೇಕ ಇವೆ. ಆರ್ಯ ಮರಾಠ ಕ್ಷತ್ರಿಯರು(ಈ ಸಮುದಾಯದ ಗಂಡಸರ ಹೆಸರುಗಳು ರಾಮೋಜಿ, ಕೃಷ್ಣೋಜಿ, ಸೋಮೋಜಿ ಎಂಬಿತ್ಯಾದಿಯಾಗಿ 'ಓಜಿ' ಎಂದು ಕೊನೆಗೊಳ್ಳುವುದ ರಿಂದ 'ಓಜಿಯವರು' ಎಂದೂ ಗುರುತಿಸಲಾಗುತ್ತದೆ. ಅಥವಾ 'ಕನ್ನಡರು' ಎಂದೂ

ಹೇಳಲಾಗುತ್ತದೆ), ಕೋಟೆಯವರು ಅಥವಾ ರಾಮರಾಜ ಕ್ಷತ್ರಿಯರು, ಕೋಟ ಬ್ರಾಹ್ಮಣರು, ಮಾದಿಗರು, ಬ್ಯೆರರು, ಹವ್ಯಕರು ಮೊದಲಾದ ಜಾತಿ ಸಮುದಾಯಗಳ ಭಾಷೆ ಕನ್ನಡ. ಇವರ ನುಡಿಗಳನ್ನು ಓಜಿ ಕನ್ನಡ, ಕೋಟೆ ಕನ್ನಡ, ಕೋಟ ಕನ್ನಡ, ಮಾದಿಗ ಕನ್ನಡ, ಬ್ಯೆರ ಕನ್ನಡ, ಹವ್ಯಕ ಕನ್ನಡ ಎಂಬಿತ್ಯಾದಿಯಾಗಿ ಗುರುತಿಸಲಾಗುತ್ತದೆ. ಅವು ಕನ್ನಡದ ಉಪಭಾಷೆ (dialect)ಗಳೇ ಆಗಿವೆ. ಈ ಸಮುದಾಯದ ಜನರ ಭಾಷೆಯಲ್ಲಿಯೂ ವಿಶಿಷ್ಟ ನುಡಿ ಬೆರಕೆಗಳು ಧಾರಾಳ ಇವೆ.

**ನುಡಿಬೆರಕೆ**

ಕನ್ನಡ ಮತ್ತು ಮಲಯಾಳಂ ಭಾಷೆ ನೇರವಾಗಿ ಪರಸ್ಪರ ಸಂಪರ್ಕಕ್ಕೆ ಬರುವ ಗಡಿಪ್ರದೇಶಗಳಲ್ಲಿ ನುಡಿ ಬೆರಕೆಯು ಸಹಜ ಪ್ರಕ್ರಿಯೆ. ಗಡಿಪ್ರದೇಶದ ಜನರು ಮಾತಿನಲ್ಲಿ ಪ್ರಜ್ಞಾಪೂರ್ವಕವಾಗಿ ಒಂದು ನಿರ್ದಿಷ್ಟ ಭಾಷೆಯ ನುಡಿಗಳನ್ನು ಮಾತ್ರ ಅವಲಂಬಿಸಿರುವುದಿಲ್ಲ. ಸಂವಹನದ ಅಗತ್ಯಕ್ಕೆ ಅನುಗುಣವಾಗಿ ಭಾಷಾ ಪರಿಸರದಲ್ಲಿ ಬಳಕೆಯ ನುಡಿಗಳನ್ನು ತಮ್ಮ ಮಾತುಗಳಲ್ಲಿ ಸೇರಿಸುತ್ತಾರೆ. ಮಾತನಾಡುವ ಮತ್ತು ಕೇಳುವ ಜನರು ಒಂದೇ ಪರಿಸರದವರು ಆಗಿರುವ ಕಾರಣಕ್ಕೆ ನುಡಿಬೆರಕೆಯು ಗಮನಕ್ಕೆ ಬರುವುದಿಲ್ಲ. ಸಂವಹನವೇ ಮುಖ್ಯ ಲಕ್ಷ್ಯವಾಗಿರುವ ಕಾರಣಕ್ಕೆ ಮಾತು ಪರಿಸರದ ಒಂದಕ್ಕಿಂತ ಹೆಚ್ಚು ಭಾಷೆಯ ನುಡಿಗಳನ್ನು ಸೇರಿಸಿ ಸಾಗುತ್ತಿರುತ್ತದೆ. ಅನ್ಯ ಪ್ರದೇಶದ ಭಾಷಿಕರ ಮಾತುಗಳ ಜೊತೆಗೆ ತುಲನೆ ಮಾಡಿದರೆ ಮಾತ್ರ ಈ ನುಡಿ ಸಂಕರವನ್ನು ಗುರುತಿಸಬಹುದು.

ಕನ್ನಡ ಮತ್ತು ಮಲಯಾಳಂ ಭಾಷೆಯ ನುಡಿ ಸಂಬಂಧಗಳ ಕೆಲವೊಂದು ಸನ್ನಿವೇಶಗಳನ್ನು ಇಲ್ಲಿ ಗಮನಿಸಬಹುದು. ಈ ನುಡಿ ಸಂಬಂಧ ಗಡಿ ಪ್ರದೇಶದ ಅದರಲ್ಲೂ ಕನ್ನಡ ಮಲಯಾಳಂ ಪ್ರಚಲಿತದಲ್ಲಿರುವ ಕಾಸರಗೋಡು ಪರಿಸರವನ್ನು ಮುಖ್ಯವಾಗಿ ಗಮನದಲ್ಲಿರಿಸಿಕೊಳ್ಳಲಾಗಿದೆ.

ಇಲ್ಲಿನ ಕನ್ನಡ ಮಲಯಾಳಂ ಭಾಷೆಗಳು ಪರಸ್ಪರ ಪ್ರಭಾವಿಸಿರುವುದನ್ನು ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಿಕೊಳ್ಳಬಹುದು. ಕನ್ನಡ ವ್ಯಾಕರಣದ ಮೇಲೆ ಮಲಯಾಳಂ ಭಾಷೆಯ ಪ್ರಭಾವ ಆಗಿರುವುದನ್ನು ಗುರುತಿಸಬಹುದು.

ನಿಷೇಧಾರ್ಥ: ಕ್ರಿಯಾಧಾತುಗಳು ನಾಮರೂಪವನ್ನು ತಾಳದೆಯೇ ನಿಷೇಧ ಪ್ರತ್ಯಯ ಸೇರಿ ಉಚ್ಚಾರಗೊಳ್ಳುವುದು ಒಂದು ವಿಶೇಷ. ಇದು ಮಲಯಾಳಂ ಸಂಪರ್ಕದ ಕಾರಣದಿಂದಲೇ ಆಗಿರಬಹುದು.

ಮುಖ್ಯವಾಗಿ ಆರ್ಯ ಮರಾಠ ಕ್ಷತ್ರಿಯರ ಕನ್ನಡದಲ್ಲಿ ಇದರ ಬಳಕೆಯಿದೆ. ಶಿಷ್ಟ ಕನ್ನಡ 'ಇಲ್ಲ' ಎಂಬ ಪ್ರತ್ಯಯವು ಕ್ರಿಯಾಪದದೊಡನೆ ಸೇರುವಾಗ 'ಏಲ' ಎಂಬ ರೂಪ ಪಡೆಯುತ್ತದೆ.

ತಿನ್ನ್+ಇಲ್ಲ = ತಿನ್ನೇಲ (ತಿನ್ನುವುದಿಲ್ಲ)
ನೋಕ್ಕ್+ಇಲ್ಲ = ನೋಕೇಲ (ನೋಡುವುದಿಲ್ಲ)
ಕುಡಿಕ್ಕ್+ಇಲ್ಲ = ಕುಡಿಯೇಲ (ಕುಡಿಯುವುದಿಲ್ಲ)
ಬರಿ+ಇಲ್ಲ = ಬರಿಯೇಲ (ಬರೆಯುವುದಿಲ್ಲ)

ಕನ್ನಡದಲ್ಲಿ ಇದು ತಿನ್ನಲ್ಲ, ನೋಡಲ್ಲ, ಕುಡಿಯಲ್ಲ, ಬರೆಯಲ್ಲ ಎಂದಾಗಬೇಕಿತ್ತು. ಸ್ಥಳೀಯ ಮಲಯಾಳಂ ಭಾಷೆಯಲ್ಲಿಯೂ, ಕ್ರಿಯೆಗೆ 'ಇಲ್ಲ' ಎಂಬ ಪ್ರತ್ಯಯ ಸೇರಿ 'ಏಲ' ಎಂಬ ನಿಷೇಧ ರೂಪ ಸಿದ್ಧಿಸುತ್ತದೆ.

ತಿನ್ನ್+ಇಲ್ಲ = ತಿನ್ನೇಲ (ತಿನ್ನುವುದಿಲ್ಲ)

ನೋಕ್ಕ್+ಇಲ್ಲ = ನೋಕೇಲ (ನೋಡುವುದಿಲ್ಲ)

ಕುಡಿಕ್ಕ್+ಇಲ್ಲ = ಕುಡಿಕ್ಕೇಲ (ಕುಡಿಯುವುದಿಲ್ಲ)

ಎಳುದ್+ಇಲ್ಲ = ಎಳುದೇಲ (ಬರೆಯುವುದಿಲ್ಲ)

ಹೀಗೆ ಸ್ಥಳೀಯ ಕನ್ನಡ ಮತ್ತು ಮಲಯಾಳಂ ಭಾಷೆಗಳಲ್ಲಿ 'ಇಲ್ಲ' ಎಂಬ ನಿಷೇಧಾರ್ಥಕ ಪ್ರತ್ಯಯವು 'ಏಲ' ಎಂದಾಗುವುದು ಸಮಾನವಾಗಿದೆ.

'ಇಸು' ಪ್ರತ್ಯಯ

'ಇಸು' ಪ್ರತ್ಯಯದ ಬಳಕೆ ಬಹಳ ಪ್ರಾಚೀನವಾದುದು. ಆದರೆ ಕನ್ನಡದಲ್ಲಿ 'ಇಸು' ಪ್ರತ್ಯಯವನ್ನು ಸೇರಿಸಿ ಕ್ರಿಯಾರೂಪವನ್ನು ಮಾಡುವಲ್ಲಿ(ಗೋವಿಂದ ಪೈಯವರಿಗೆ) ಮಲಯಾಳಂನ ಮಾದರಿಗಳು ಪ್ರೇರಣೆಯಾಗಿರಬಹುದು ಎಂದು ಊಹಿಸುವುದಕ್ಕೆ ಅವಕಶವಿದೆ. ಮಲಯಾಳಂನಲ್ಲಿ ನಾಮರೂಪಕ್ಕೆ 'ಇಕ್ಕ್' ಸೇರಿ ಕ್ರಿಯಾರೂಪಗಳು ಸಿದ್ಧಿಸುತ್ತವೆ.

| | |
|---|---|
| ಕಾಣು+ಇಕ್ಕ್ = ಕಾಣಿಕ್ಕ್ | ಕಾಣು+ಇಸು = ಕಾಣಿಸು |
| ನೋಕು+ಇಕ್ಕು = ನೋಕಿಕ್ಕ್ | ನೋಡು+ಇಸು = ನೋಡಿಸು |
| ಚಿಂತ+ಇಕ್ಕ್ = ಚಿಂತಿಕ್ಕ್ | ಚಿಂತೆ+ಇಸು = ಚಿಂತಿಸು. |
| ನಡತ್ತು+ಇಕ್ಕ್ = ನಡತ್ತಿಕ್ಕ್ | ನಡೆ+ಇಸು = ನಡೆಸು/ನಡೆಯಿಸು |
| ತಿನ್ನು+ಇಕ್ಕ್ = ತಿನ್ನಿಕ್ಕ್ | ತಿನ್ನು+ಇಸು = ತಿನ್ನಿಸು |

**ಮಲಯಾಳಂ ಪ್ರಭಾವ ಮತ್ತು ಪದಸ್ವೀಕರಣೆ**

ಮಲಯಾಳಂ ಭಾಷೆಯ ಅನೇಕ ಪದಗಳು ಅಲ್ಲಿನದೇ ಅರ್ಥದಲ್ಲಿ ಕನ್ನಡದಲ್ಲಿ ಸ್ವೀಕೃತವಾಗಿವೆ. ಉದಾಹರಣೆಗಳ ಮೂಲಕ ಇದನ್ನು ಸ್ಪಷ್ಟಪಡಿಸಬಹುದು:

| **ಕಾಸರಗೋಡು** | **ಮಲಯಾಳಂ ಪದ** | **ಕನ್ನಡಪದ** |
|---|---|---|
| ಅವಘಡ | ಅವಘಡ | (ಅಪಘಾತ) |
| ಬುದ್ದಿಮುಟ್ಟು | ಬುದ್ದಿಮುಟ್ಟ್ | (ತೊಂದರೆ) |
| ಪರಿಶೋಧನೆ | ಪರಿಶೋಧನ | (ತಪಾಸಣೆ) |
| ಸುಡುಕುಳಿ | ಚುಡುಕುಳಿ | (ಸುಡುಗಾಡು) |
| ಚೇರ್ಚೆ | ಚೇರ್ಚ | (ಹೊಂದಾಣಿಕೆ) |
| ಬಹುಮಾನಿಸು | ಬಹುಮಾನಿಕ್ಕ್ | (ಗೌರವಿಸು) |
| ರಾಷ್ಟ್ರೀಯ | ರಾಷ್ಟ್ರೀಯಂ | (ರಾಜಕೀಯ) |
| ದೇಶ | ದೇಶಂ | (ಊರು) |
| ನಾಯಾಟ್ಟು | ನಾಯಾಟ್ಟ್ | (ಬೇಟೆ) |
| ಪಠನ | ಪಠನಂ | (ಅಧ್ಯಯನ) |

| | | |
|---|---|---|
| ಭರಣ | ഭരണം | (ಆಡಳಿತ) |
| ಭರಣ ಘಟನೆ | ഭരണ ഘടന | (ಸಂವಿಧಾನ) |
| ಯಾತ್ರೆ | യാത്ര | (ಪ್ರಯಾಣ) |
| ಯಾತ್ರಿಕ | യാത്രികന് | (ಪ್ರಯಾಣಿಕ) |
| ರಂಗ | രംഗം | (ಕ್ಷೇತ್ರ) |
| ಕ್ಷೇತ್ರ | ക്ഷേത്രം | (ದೇವಸ್ಥಾನ) |
| ವಿಮರ್ಶೆ | വിമര്ശനം | (ಟೀಕೆ) |
| ವಿವರ | വിവരം | (ತಿಳುವಳಿಕೆ) |
| ಸಮಾಪನ | സമാപനം | (ಸಮಾರೋಪ) |
| ವಿಕಲಾಂಗ | വികലാംഗന് | (ಅಂಗವಿಕಲ) |
| ಸ್ವೀಕರಣೆ | സ്വീകരണം | (ಸ್ವಾಗತ) |
| ತೆರಕ್ಕು | തിരക്ക് | (ಜನನಿಬಿಡ) |
| ಚಂಡಿ | ചണ്ട് | (ಒದ್ದೆ) |
| ಅವಸರ | അവസരം | (ಸಂದರ್ಭ) |
| ಪರಿಸರ | പരിസരം | (ವಠಾರ) |
| ಜನಾಧಿಪತ್ಯ | ജനാധിപത്യം | (ಪ್ರಜಾಪ್ರಭುತ್ವ) |
| ಅವಸಾನ | അവസാനം | (ಕೊನೆ) |
| ಸಂಭವ | സംഭവം | (ಘಟನೆ) |
| ರಕ್ಷೆ | രക്ഷ | (ರಕ್ಷಣೆ) |
| ಮತಪ್ರಸಂಗ | മതപ്രസംഗം | (ಧಾರ್ಮಿಕ ಪ್ರವಚನ) |
| ಪ್ರಸಂಗ | പ്രസംഗം | (ಭಾಷಣ) |
| ರೂಪೀಕರಿಸು | രൂപീകരിക്ക് | (ರೂಪಿಸು) |

**ಕನ್ನಡ ಪ್ರಭಾವ**

**ಇ – ಎ, ಉ, ಒ**

ಮಲಯಾಳಂ ಭಾಷೆ ಕೂಡಾ ಕನ್ನಡದ ಪ್ರಭಾವಕ್ಕೆ ಒಳಗಾಗಿರುವುದನ್ನು ಗಮನಿಸಬಹುದು. ಪದಾದಿಯ ಇ, ಉ ಸ್ವರಗಳು ಎ, ಒ ಗಳಾಗಿ ಬದಲಾಗುವ ಪ್ರಕ್ರಿಯೆ ದ್ರಾವಿಡ ಭಾಷೆಗಳಲ್ಲಿ ನಡೆದಿದೆ. ಮಲಯಾಳಂ ಭಾಷೆಯಲ್ಲಿ ಮೂಲ ದ್ರಾವಿಡದ ರೂಪವೇ ಉಳಿದುಕೊಂಡಿದೆ. ಆದರೆ ಕಾಸರಗೋಡು ಪ್ರದೇಶದ ಮಲಯಾಳಂ ಈ ಪ್ರಕ್ರಿಯೆಯಲ್ಲಿ ಕನ್ನಡವನ್ನು ಅನುಸರಿಸಿದೆ.

| **ಕನ್ನಡ** | **ಶಿಷ್ಟ ಮಲಯಾಳಂ** | **ಮಲಯಾಳಂ** |
|---|---|---|
| ಎಲೆ | എല | (ಎ<ಇ) ഇല |
| ಬೆಳೆ | ബെള | (ಎ<ಇ) വിള |
| ಹೊಗೆ | പൊഗ | (ಒ<ಉ)പുക |

| | | |
|---|---|---|
| ಹೊಳೆ | ಪೊಯ | (ಒ<ಉ) ಪುಟಿ |
| ಹೊಗಳು | ಪೊಗಳ್ | (ಒ<ಉ) ಪುಗಳ್ |
| ತೊಡೆ | ತೊಡ | (ಒ<ಉ) ತುಡ |
| ಕೊಡೆ | ಕೊಡ | (ಒ<ವಿ) ಕುಡ |
| ಮೊನೆ | ಮೊನ | (ಒ<ಉ) ಮುನ |
| ಎಡೆ | ಎಡ | (ಎ<ಇ) ಇಡ |
| ಎರೆ | ಎರ | (ಎ<ಇ) ಇರ |
| ಎಳವೆ | ಎಳಮ | (ಎ<ಇ) ಇಳಮೆ |
| ಬೆಲೆ | ಬೆಲ | (ಎ<ಇ) ವಿಲ |

ಹೀಗೆ ಈ ಪ್ರದೇಶದ ಮಲಯಾಳಂ ಇತರೇ ಪ್ರದೇಶಕ್ಕಿಂತ ಬೇರೆಯೇ ಒಂದು ಉಪಭಾಷೆಯ(ಡಯಲೆಕ್ಟ್)ಯಾಗಿ ದಾಖಲಾಗಿದೆ. ಕಾಸರಗೋಡಿನಲ್ಲಿ ಮಲಯಾಳಂ ಮನೆಮಾತಿನ ಹಲವು ಜಾತಿ ಸಮುದಾಯಗಳಿವೆ. ಈ ಹಲವು ಜನಸಮುದಾಯಗಳ ಮಲಯಾಳಂ ಭಾಷೆಗಳಲ್ಲಿ ವ್ಯತ್ಯಾಸವಿದ್ದರೂ ಎಲ್ಲವನ್ನು ಒಂದು ಪ್ರಾದೇಶಿಕ ಚೌಕಟ್ಟಿನಲ್ಲಿ ಕಾಸರಗೋಡುಮಲಯಾಳಂ ಎಂದು ಹೆಸರಿಸಬಹುದು. ಈ ಕಾಸರಗೋಡು ಮಲಯಾಳಂ ಭಾಷೆಯ ಮೇಲೆ ಕನ್ನಡದ ಪ್ರಭಾವವನ್ನು ಗುರುತಿಸಬಹುದು. ಉದಾಹರಣೆಗಳ ಮೂಲಕ ಅವುಗಳನ್ನು ಖಚಿತ ಪಡಿಸಿಕೊಳ್ಳಬಹುದು.

| **ಕನ್ನಡ ಪದ** | **ಕಾಸರಗೋಡು ಮಲಯಾಳಂ** | **ಮಲಯಾಳಂ** |
|---|---|---|
| ತೆಂಗಿನೆಣ್ಣೆ | ತೇಙ ಎಣ್ಣ | ವೆಳಿಚ್ಚೆಣ್ಣ |
| ನೀರುಳ್ಳಿ | ಉಳ್ಳಿ | ಸವ್ಗೋಳ |
| ಕತ್ತೆ | ಕತ್ತ | ಕಟಿದ |
| ಕೃಷಿಕ | ಕೃಷಿಕನ್ | ಕರ್ಷಕನ್ |
| ನಿಂಬೆಹುಳಿ | ನಿಂಬೆ ಪುಳಿ | ಚೆರುನಾರಙ |
| ಬೊಂಬೆ | ಬೊಮ್ಮ | ಪಾವ್ಯ |
| ಉಪ್ಪಿನಕಾಯಿ | ಉಪ್ಪೇರಿ | ಅಚ್ಚಾರ್ |
| ಮಾವಿನಮರ | ಮಾಙಂಡೆ ಮರ | ಮಾವ್ |
| ಕಡುಬು | ಕಡುಂಬು | ಕೊಳ್‌ಕಟ್ಟ |
| ಚೆಂಡು | ಚೆಂಡ್ | ಪಂದ್ |
| ಬೆಲೆ | ಬೆಲ | ವಿಲ |
| ಹೊಗೆ | ಪೊಗ | ಪುಗ |
| ಹತ್ತುಸಾವಿರ | ಪತ್ತಾಯಿರ | ಪದಿನಾಯಿರಂ |
| ಹನ್ನೆರಡುಸಾವಿರ | ಪಂದ್ರಂಡಾಯಿರ | ಪಂದೀರಾಯಿರಂ |
| ಹದಿಮೂರು ಸಾವಿರ | ಪದಿಮೂನಾಯಿರ | ಪದಿಮೂವಾಯಿರಂ |
| ಹದಿನೈದು ಸಾವಿರ | ಪದಿನೆಂಙಾಯಿದ | ಪದಿನ್ಯೆಯ್ಯಾಯಿರಂ |

| | | |
|---|---|---|
| ಹದಿನೆಂಟು ಸಾವಿರ | ಪದಿನೆಟ್ವಾಯಿರ | ಪದಿನೆಣ್ಣಾಯಿರಂ |
| ಗಿಳಿ | ಕಿಳಿ | ತತ್ತ |
| ಬೆಳ್ಳುಳ್ಳಿ | ಬೆಳ್ಳುಳ್ಳಿ | ಬೆಳ್ತುಳ್ಳಿ |
| ಜಾಗೆ | ಜಾಗ | ಸ್ಥಲಂ |
| ಚೀಲ | ಚೀಲೊ | ಸಂಚಿ |
| ಚಳಿ | ಚಳಿ | ಕುಳಿರ್ |
| ನವಿಲ್ | ನವಿಲ್ | ಮಯಿಲ್ |
| ಕೋಗಿಲೆ | ಕೋಗಿಲ | ಕುಯಿಲ್ |
| ಅಂಗವಿಕಲರು | ಅಂಗವಿಕಲನ್ಮಾರ್ | ವಿಕಲಾಂಗರ್ |
| ಶಾಲೆ | ಶಾಲ | ಸ್ಕೂಳ್ |

ಮಲಯಾಳಂ ಮಾತನಾಡುವ ಅನೇಕ ಜಾತಿ ಸಮುದಾಯಗಳ ಭಾಷೆಯಲ್ಲಿ ಈ ಪದಗಳು ಬಳಕೆಯಾಗುತ್ತಿವೆ. ಹೀಗೆ ಬಳಸುವ ಮಲಯಾಳಂ ಮನೆ ಮಾತಿನವರು ಶಿಕ್ಷಣ ಸಂದರ್ಭದಲ್ಲಿ ಶಿಷ್ಟ ಮಲಯಾಳಂ ಕಲಿತ ಬಳಿಕ ಇಂತಹ ಬಳಕೆಗಳು, ಬಹುತೇಕ ಕ್ಷೀಣಿಸಿವೆ.

**ಸಮಾನ ಬಳಕೆ ಪದಗಳು**

ಎರಡೂ ಭಾಷೆಗಳಲ್ಲಿ ಸಮಾನವಾಗಿ ಬಳಕೆಯಲ್ಲಿರುವ ಪದಗಳು ಅನೇಕ ಇವೆ. ಇಲ್ಲಿ ಕನ್ನಡ ಮಲಯಾಳಂ ಎಂಬ ಭೇದವಿಲ್ಲ. ಉದಾಹರಣೆಗೆ ಮಲಯಾಳಂ ಪದಗಳು:

ಸಮರ(ಮುಷ್ಕರ ಎಂಬರ್ಥದಲ್ಲಿ) ಕಡಪ್ಪುರ (ಕರಾವಳಿ ಎಂಬರ್ಥದಲ್ಲಿ) ನೊಣೆ (ಸುಳ್ಳು ಎಂಬ ಅರ್ಥದಲ್ಲಿ) ಚೂಡು(ಬಿಸಿ ಎಂಬ ಅರ್ಥದಲ್ಲಿ) ಸೌಜನ್ಯ (ಉಚಿತ ಎಂಬ ಅರ್ಥದಲ್ಲಿ) ನೇಜಿ (ಭತ್ತದ ಸಸಿ ಎಂಬ ಅರ್ಥದಲ್ಲಿ) ಗಡಿಬಿಡಿ (ಅವಸರ ಎಂಬ ಅರ್ಥದಲ್ಲಿ) ಕತ್ತಿ (ಕುಡುಗೋಲು) ಸಾರ ಇಲ್ಲ(ಪರವಾಗಿಲ್ಲ ಎಂಬರ್ಥದಲ್ಲಿ) ಇತ್ಯಾದಿಯಾಗಿ ಹೀಗೆ ಬಳಕೆಯಲ್ಲಿವೆ. ಹಾಗೆಯೇ ಬೆಡಿ(ಸಿಡಿಮದ್ದು), ರಾಕು(ಶರಾಬು), ಶೀಲ(ಅಭ್ಯಾಸ) ಎಂಬಿತ್ಯಾದಿ ಸಮಾನ ಬಳಕೆಯ ಪದಗಳೂ ಇವೆ. ಇಲ್ಲಿಯೂ ಪರಸ್ಪರ ಪ್ರಭಾವವಿದೆ.

**ಕಾಸರಗೋಡು ಮಲಯಾಳಂನಲ್ಲಿ ಕನ್ನಡ ಸ್ವೀಕೃತ ಪದಗಳು**

ಬಳ್ಳಿ (ಮಲಯಾಳಂ ವಳ್ಳಿ ಎಂದಿದೆ)
ಸರಿ (ಮಲಯಾಳಂನಲ್ಲಿ ಶೆರಿ ಎಂದಿದೆ)
ತವುಡು (ಮಲಯಾಳಂನಲ್ಲಿ ತವಿಟ್ ಎಂದಿದೆ)
ಅಜ್ಜಿ (ಮಲಯಾಳಂ ಅಮ್ಮೊಮ್ಮ ಎಂದಿದೆ)
ಜಾಗ (ಮಲಯಾಂನಲ್ಲಿ ಸ್ಥಲಂ ಎಂದಿದೆ)

**ಸಾಂಸ್ಕೃತಿಕ ಪದಗಳು**

ತರವಾಡು, ಅಂತರ್ಜನ, ನಾಯರ್, ನಂಬೂದಿರಿ, ಮೇನೋನ್, ಓಣಂ(ಶ್ರಾವಣ), ಮೇಹಿನಿಯಾಟ, ತಿರುವಾದಿರ, ಕಥಕಳಿ, ಓಟಂತುಳ್ಳಲ್ ಭಗವತಿ, ಕಾಕ ಇತ್ಯಾದಿ ಪದಗಳು

ಮಲಯಾಳಂ ಪರಿಸರದಿಂದ ಬಂದು ಕನ್ನಡದಲ್ಲಿ ಜಾಗಪಡೆದಿವೆ. ಈ ನುಡಿಗಳು ಮಲಯಾಳಂ ಪರಸರದ ಅರ್ಥವನ್ನೇ ಕೊಡುತ್ತವೆ ಹೊರತು ಕನ್ನಡದ್ದನ್ನಲ್ಲ. ಮಲಯಾಳಂನ ಸಾಂಸ್ಕೃತಿಕ ಪರಿಸರವನ್ನು ಬಿಂಬಿಸುವಲ್ಲಿ ಈ ಪದಗಳಿವೆ ಕನ್ನಡದಲ್ಲಿ ಮಹತ್ವದ ಸ್ಥಾನವಿದೆ.

ಬೆಳ್ಚಪ್ಪಾಡ್ ಎಂಬುದು ವೆಳಿಚ್ಚಪಾಡ್ ಎಂಬ ಪದದ ಕನ್ನಡ ರೂಪ. ವೆಳಿಚ್ಚಪ್ಪಾಡ್ ಎಂದರೆ ದೇವರ ಆವೇಶವನ್ನು ಮೈಯಲ್ಲಿ ತುಂಬಿಕೊಳ್ಳುವುದು. ದೇವರ ಆವೇಶ ತುಂಬಿಕೊಂಡು ದೇವರದ್ದೇ ಆದ ಮಾತುಗಳನ್ನು ಹೇಳುತ್ತಾನೆ. ಹಾಗಾಗಿ ದೇವರೂಪದ ಅಥವಾ ಅರಿವಿನ ಮಾತುಗಳನ್ನು ಪ್ರಕಟಪಡಿಸುವವ ಎಂದರ್ಥ. ಇಲ್ಲಿನ 'ವೆಳಿಚ್ಚ' ಎಂಬ ಪದಕ್ಕೆ ಬೆಳಕು, ಅರಿವು ಎಂಬಿತ್ಯಾದಿ ಅರ್ಥಗಳಿವೆ. ಅದಕ್ಕೆ ಅದೇ ಪದವು ಕನ್ನಡದಲ್ಲಿ ಅರ್ಥಾನುವಾದ ಆಗದೆ 'ಬೆಳ್ಚಪಾಡ್' ಎಂದಾಗಿದೆ.

ನೈಚೋರು ಮಲಯಾಳಂನ ಈ ಪದ Ghee Rice ಎಂಬುದಕ್ಕೆ ಸಂವಾದಿ. ಇಲ್ಲಿ 'ನೆಯ್' ಎಂದರೆ ತುಪ್ಪ ಎಂದರ್ಥ. ಇದು ಕನ್ನಡದಲ್ಲಿ ಬಳಕೆಯಾಗುವಾಗ 'ತುಪ್ಪಾನ್ನ; ಎಂದು ಅನುವಾದವಾಗಿಲ್ಲ. ಬದಲಾಗಿ 'ನೆಯ್‌ಚೋರು' ಎಂಬ ರೂಪವನ್ನೇ ಉಳಿಸಿಕೊಂಡಿದೆ. ಇಂತಹ ಪದಗಳೆಲ್ಲ ಸಾಂಸ್ಕೃತಿಕ ಅನನ್ಯತೆಯ ಕಾರಣಕ್ಕಾಗಿ ಭಾಷಾಭೇದ ಇಲ್ಲದೆ ಬಳಕೆಯಾಗುತ್ತಿರುವುದಕ್ಕೆ ಸಶಕ್ತವಾದ ನಿದರ್ಶನಗಳಾಗಿವೆ.

**ಅನುವಾದಗಳ ಪರ್ಯಾಯ ಸೃಷ್ಟಿ**

ಅನುವಾದ ಕೃತಿಗಳಲ್ಲಿ ಕೆಲವೊಂದು ಮಲಯಾಳಂ ಸಾಹಿತ್ಯ ಪದಗಳಿಗೆ ಪದಸೃಷ್ಟಿ ಮಾಡಿರುವುದು ಕೂಡ ಗಮನಾರ್ಹವೆನಿಸುತ್ತದೆ.

ಕೆಂಪು ಮೀನು– ಇದು 'ಚೆಮ್ಮೀನ್' ಎಂಬುದನ್ನು ಕನ್ನಡದಲ್ಲಿ ನಾ. ಕಸ್ತೂರಿಯವರು ಅನುವಾದಿಸಿದ ಪದ. ವಾಸ್ತವದಲ್ಲಿ ಚೆಮ್ಮೀನ್‌ಗೆ ಕನ್ನಡದಲ್ಲಿ ಸೀಗಡಿ ಎಂಬ ಪದವಿದೆ. ಇದೊಂದು ಪದಶಃ ಅನುವಾದ. 'ಕೆಂಪುಮೀನು' ಹೊಸತಾಗಿ ಸೃಷ್ಟಿಸಿದ ಪದ.

ಚೌಕಟ್ಟಿನ ಮನೆ: ಮಲಯಾಳಂನ 'ನಾಲು ಕೆಟ್ಟ್' ಎಂಬುದಕ್ಕೆ ಸಂವಾದಿಯಾಗಿ ರೂಪಿಸಿದ ಪದವಿದು. ನಾಲು ಕೆಟ್ಟ್ ಎಂದರೆ ನಾಲ್ಕು ಸುತ್ತಿನ ಮನೆ ಎಂದರ್ಥ. ಮೈಸೂರು, ಮಲೆನಾಡು ಪ್ರದೇಶಗಳಲ್ಲಿ ಈ ತರಹ ಮನೆಗಳಿವೆ. ಮೈಸೂರು ಪ್ರದೇಶದಲ್ಲಿ ಇವುಗಳನ್ನು 'ಅಂಕಣದ ಮನೆ' ಮಲೆನಾಡು ಪ್ರದೇಶದಲ್ಲಿ ತೊಟ್ಟಿಮನೆ ಎಂದು ಕರೆಯಲಾಗುತ್ತದೆ. ಚೌಕಟ್ಟಿನ ಮನೆ ಕನ್ನಡಕ್ಕೆ ಹೊಸ ಪದ.

ಮಲಯಾಳಿ ಮಠ, ಮಲಯಾಳ ಪಂಡಿತ, ನಾಯರ್ ಕೆರೆ, ಕೇರಳಾಪುರ, ಕಾ ಕಾ ಹೊಟೇಲ್, ಕೇರಳ ಜ್ಯೋತಿಷಿ, ಮಂತ್ರವಾದಿ, ಮಲಬಾರಿಗಳು, ಸ್ತ್ರೀ ರಾಜ್ಯ, ಪ್ರಮೀಳಾ ರಾಜ್ಯ, ಮೇಧಾವಿಗಳ ಊರು.

ಇತ್ಯಾದಿ ಪದಗಳ ಸೃಷ್ಟಿಯ ಹಿಂದೆ ಮಲಯಾಳಂ ಭಾಷೆ, ಸಂಸ್ಕೃತಿಯ ಹಿನ್ನೆಲೆ ಇರುವುದನ್ನು ಗಮನಿಸಬಹುದು. ಇವುಗಳ ಬಗೆಗಿನ ಐತಿಹ್ಯಗಳೂ ಕುತೂಹಲದ ಕೆಲವೊಂದು ವಿಷಯಗಳನ್ನು ಮುಂದಿಡುತ್ತವೆ.

ಗಡಿಪ್ರದೇಶದ ಕೆಲವೊಂದು ಪದಗಳು ಮಲಯಾಳಂನ ಅನುವಾದಗಳಾಗಿ ಬಳಕೆಯಾಗುವುದಿದೆ.

ಕೋಳಿ ಕಟ್ಟ (ಕೋಳಿ ಅಂಕ) ಕೊಯಿಕಟ್ಟ್
ಮಾಲೆಹಾಕು (ಅಯ್ಯಪ್ಪ ಭಕ್ತನಾಗಿ ದೀಕ್ಷೆ ವಹಿಸು) ಮಾಲ ಇಡು
ನೆಲ್ಲಿಗೋರಿ (ಭತ್ತವನ್ನು ರಾಶಿಮಾಡಲು ಹಾಗೂ ಹರಡಲು ಬಳಸುವ ಸಲಕೆಯಂತಹ ಉಪಕರಣ) ನೆಲ್ಲುಕೋರಿ.
ಹೊಳೆಕರೆ (ಹೊಳೆಬದಿ) ಪೊಯಕ್ಕರ
ಆಚೆಕರೆ (ಹೊಳೆಯ ಇನ್ನೊಂದು ಬದಿ) ಅಕ್ಕರೆ
ಕಟ್ಟು ಕಟ್ಟು (ಅಯ್ಯಪ್ಪ ದರ್ಶನಕ್ಕೆ ಹೊರಟ ಭಕ್ತರು ಜೊತೆಗೆ ಒಯ್ಯುವ ಕಟ್ಟು) ಕೆಟ್ಟ್ ಕೆಟ್ಟ್ (ಇಲ್ಲಿ ಒಂದು ನಾಮಪದ ಒಂದು ಕ್ರಿಯಾಪದ)
ಕೋಪೆ (ಗೊಂಚಲಿನ ರೂಪದಲ್ಲಿ ಜೋಡಿಸಿದ) ಕೋಪ, ಸ್ವಾಸ್ಥ್ಯಸಚಿವ (ಆರೋಗ್ಯ ಮಂತ್ರಿ) ಸ್ವಾಸ್ಥ್ಯ ಮಂತ್ರಿ, ತೇಪು (ಸಾರಣೆ) ತೇಯ್‌ಪು ತೋದ (ಅಳತೆಯ ಪಮಾಣವನ್ನು ಹೇಳುವ ಪದ) ತೋದ್
ಯಥಾವತ್ತಾಗಿ ಸ್ವೀಕರಣೆ ಇರುಮುಡಿ (ಸಂಚಿ ಚೀಲ, ಒಟ್ಟಂ ತುಳ್ಳಲ್ ಕಲಾವಿದರು ತಲೆಯ ಮೇಲೆ ಇಟ್ಟುಕೊಳ್ಳುವ ವಸ್ತು ಎಂಬ ಅರ್ಥವಿದೆ (ಶಬ್ದ ತಾರಾವಳಿ) ತಲೆಯ ಮೇಲೆ ಮುಂದಕ್ಕೂ ಹಿಂದಕ್ಕೂ ಇರುವಂತೆ ಇಟ್ಟುಕೊಳ್ಳುವ ಎರಡು ಗಂಟುಗಳ ಚೀಲ. ಎರಡು ಮುಡಿ– ಕೂದಲ ಗಂಟಿನಂತಿರುವ– ಇರುವುದು– ಇರುಮುಡಿ)
ಹೀಗೆ ಪದಗಳ ಬಳಕೆಯ ಸಂದರ್ಭದಲ್ಲಿ ಪರ್ಯಾಯಗಳ ಸೃಷ್ಟಿಯಲ್ಲಿ ಅನುವಾದ ಮಾಡಿಕೊಂಡಿರುವುದೂ ಕೂಡಾ ಇದೆ ಎಂಬುದು ತಿಳಿಯುತ್ತದೆ.

**ನುಡಿ ಸಂಕರ**

ಕನ್ನಡನಾಡಿನ ಬ್ರಾಹ್ಮಣರು ಕೇರಳದ ದೇವಾಲಯಗಳಲ್ಲಿ ಪೌರೋಹಿತ್ಯಕ್ಕಾಗಿ ಹೋಗಿ ಅಲ್ಲಿಯೇ ನೆಲೆಸಿದವರಿದ್ದಾರೆ. ಅವರು ಕನ್ನಡ ಭಾಷೆಯನ್ನು ಮಲಯಾಳೀಕರಿಸಿ ನುಡಿಯಲು ಶ್ರಮಿಸಿದ ಪರಿಣಾಮ ಭಾಷಾ ಸಂಕರ ಏರ್ಪಟ್ಟಿತ್ತು. ಮೌಖಿಕವಾಗಿ ಈ ಸಂಕರ ಭಾಷೆಯ ಮಾತುಗಳು ಒಂದು ಕಾಲದಲ್ಲಿ ಪ್ರಚಲಿತದಲ್ಲಿದ್ದುವು. ವಲಸೆಹೋದ ಸಂದರ್ಭದಲ್ಲಿ ಕನ್ನಡ ಭಾಷೆ ಮಾತ್ರ ಬಲ್ಲ ಬ್ರಾಹ್ಮಣ ಪುರೋಹಿತರು ಸ್ಥಳೀಯ ಜನರೊಡನೆ ವ್ಯವಹರಿಸಲು ಮಾಡಿದ ಪ್ರಯತ್ನದಿಂದ ರೂಢಿಯಲ್ಲಿದ್ದ ಭಾಷೆಯ ಸ್ವರೂಪವನ್ನು ಒ.ಚಂದು ಮೇನೋನ್ ಅವರ 'ಶಾರದ' ಕಾದಂಬರಿಯಲ್ಲಿ ಕಾಣಬಹುದು.

ಉದಾಹರಣೆಗೆ: "ಎಂಬ್ರಾನ್– ಆರು ದೇವಸ್ಥಾನತ್ತಿಲ್ ಬಾಯಿಡುನ್ನ? ನೀನು ಗಜಪೋಕ್ಕಿರಿಯೊಂಬಳತ್ತಿಲ್ ಬಾಯಿಡಾಮೋ? ನಿನಗು ಎಂದು ವೇಣಂ?".

ಅಪರ ವೇಳೆಯಲ್ಲಿ ದೇವಸ್ಥಾನಕ್ಕೆ ಬಂದವನೊಡನೆ ಅಲ್ಲಿನ ಕನ್ನಡ ಅರ್ಚಕ ಈ ಮೇಲಿನ ಮಾತುಗಳನ್ನು ಹೇಳಿದ್ದಾನೆ 'ಯಾರು ದೇವಸ್ಥಾನಕ್ಕೆ ಅಕ್ರಮವಾಗಿ ಪ್ರವೇಶಿಸಿದ್ದು? ನೀನು ರೌಡಿಯಂತೆ ದೇವಸ್ಥಾನಕ್ಕೆ ಅಕ್ರಮವಾಗಿ ಬರಬಹುದೇ? ನಿನಗೆ ಏನು ಬೇಕು? ಎಂಬ ಅರ್ಥದ ಮಾತುಗಳಿವು. ಮುಂದುವರಿದು ಆತ

"ಎಂಬ್ರಾನ್ ದುಡ್ ನೀನು ನನ್ನ ಕೈಯಿಲೆ ಕೊಟ್ಟರೆ ಬಾಳಿಬಾಡು ರಾತ್ತರಿ ಗಯಕ್ಕುಂ. ಇಲ್ಲಿ ಬಹು ದುರ್‌ಬಿಚ್ಚ ಅಪ್ಪಾ, ನಾಯಿ ಅಕ್ಕಿ ನಿಬೆದ್ಯ ಉಳ್ಳು, ಅದು ನಾನು ಅರಗು ಕೊಡಲಿಕ್ಕಿಲ್ಲ"

(ಎಂಬ್ರಾನ್ ದುಡ್ಡು ನೀನು ನನ್ನ ಕೈಯಲ್ಲಿ ಕೊಟ್ಟರೆ ಬಲಿವಾಡನ್ನು ರಾತ್ರಿ ನೆರವೇರಿಸಬಹುದು. ಇಲ್ಲಿ ಬರಗಾಲ( ದುರ್‌ಬಿಚ್ಚ)ವಿದೆಯಪ್ಪಾ, ನನ್ನಲ್ಲಿ(ನಾಯಿ) ನೈವೇದ್ಯದ ಅಕ್ಕಿ ಮಾತ್ರ ಇದೆ. ಅದನ್ನು ನಾನು ಯಾರಿಗೂ ಕೊಡಲಿಕ್ಕಿಲ್ಲ ಎಂಬರ್ಥದ ಮಾತುಗಳಿವು).

ಬಾಳಿಬಾಡು ಬಲಿವಾಡು(ಹರಕೆ) ರಾತ್ರಿಂ–ರಾತ್ರಿ, ಗಯಕ್ಕುಂ– ಯಕ್ಕುಂ (ಮಾಡಲಹುದು) ದುರ್‌ಬಿಚ್ಚ– ದುರ್ಭಿಕ್ಷ, ನಾಯಿ– ಞಾನ್ (ನಾನು) ನಿಬೆದ್ಯ–ನೈವೇದ್ಯ, ಬೆಚ್ಚದೆ–ವೆಚ್ಚದು (ಇಟ್ಟುದು) ಉಳ್ಳು–ಇದೆ. ಅರಗು ಆರ್ಕೊ (ಯಾರಿಗೊ) ಹೀಗೆ ಮಲಯಾಳಂ ಪದಗಳನ್ನು ಅಪಭ್ರಂಶಗೊಳಿಸಿದ್ದನ್ನು ಇಲ್ಲಿ ಗಮನಿಸಬಹುದು.

**ಪದಗಳ ಆಮದು**

ಕನ್ನಡಕ್ಕೆ ಮಲಯಾಳಂನ ಹೊಸಪದಗಳು ಆಮದಾಗಿರುವುದನ್ನು ವಿಶೇಷವಾಗಿ ಗಮನಿಸಬಹುದು:

ಉದಾಹರಣೆ: ಸ್ಥಿರ ಮದ್ಯಪಾನಿ(ಮದ್ಯ ಕುಡಿಯುವುದನ್ನು ನಿತ್ಯ ಚಟವಾಗಿ ರೂಢಿಸಿಕೊಂಡವ)

ತರವಾಡಿ –(ಒಳ್ಳೆಯ ಮನೆತನದಲ್ಲಿ ಜನಿಸಿದ)

ಅಧಿಕೃತರು –(ಅಧಿಕಾರಿಗಳು)

ಕಾಲವಿಳಂಬ –(ತಡವಾದ ಸಮಯ)

ಇಂತಹ ಅನೇಕ ಪದಗಳನ್ನು ಪರ್ಯಾಯ ಪದಗಳನ್ನು ರೂಪಿಸಲೆತ್ನಿಸದೆ ಯಥಾವತ್ತಾಗಿ ಸ್ವೀಕರಿಸಲಾಗಿದೆ. ಇವು ಕನ್ನಡದ ಸಂದರ್ಭದಲ್ಲಿ ಬಳಕೆಗೆ ಸಾಧ್ಯವಾಗಬಹುದಾದ ಪದಗಳೇ ಆಗಿವೆ. ಗಡಿ ಪ್ರದೇಶಗಳ ಕನ್ನಡದ ಬರಹ ಹಾಗೂ ಮಾತುಗಳಲ್ಲಿ ಇಂತಹ ಪದಗಳನ್ನು ಯಥೇಚ್ಛವಾಗಿ ಗುರುತಿಸಬಹುದು.

ಹೀಗೆ ಕನ್ನಡ ಮಲಯಾಳಂ ನುಡಿ ಬೆರಕೆಗಳು ಗಡಿಪ್ರದೇಶದಲ್ಲಿ ಸ್ವಾಭಾವಿಕವಾಗಿವೆ. ನುಡಿ ಬೆರಕೆಗಳ ಮೂಲಕ ಎರಡೂ ಭಾಷೆಯ ಜನಸಮುದಾಯಗಳ ಸಾಂಸ್ಕೃತಿಕ ಬದುಕು ವಿಶಿಷ್ಟವಾಗಿದೆ. ಎರಡು ಭಾಷಿಕರ ಸಾಂಸ್ಕೃತಿಕ ಆಚರಣೆಗಳು, ಹಬ್ಬ ಹರಿದಿನಗಳು, ಸಂಪ್ರದಾಯಗಳು ಇತ್ಯಾದಿಗಳ ಸಂದರ್ಭಗಳಲ್ಲಿ ಬಳಸುವ ಪದಸಂಪತ್ತುಗಳೂ ವಿಶಿಷ್ಟವಾಗುತ್ತವೆ. ಇವುಗಳನ್ನು ಒಂದು ನಿರ್ದಿಷ್ಟ ಭಾಷೆಯ ಲಕ್ಷಣದ ವ್ಯಾಪ್ತಿಯಲ್ಲಿ ತರುವುದು ಸಮಂಜಸವಾಗದು. ಅಲ್ಲಿ ಎರಡೂ ಭಾಷೆಯ ನಿರ್ದಿಷ್ಟ ಗುಣಾವಗುಣಗಳೂ ಇಂತಹ ನುಡಿಬೆರಕೆಗಳಲ್ಲಿ ಕಾಣಬಹುದು. ನುಡಿಬೆರಕೆಗಳು ಗಡಿಪ್ರದೇಶದ ಜನಸಮುದಾಯಗಳ ದೈನಂದಿನ ವ್ಯವಹಾರದಲ್ಲಿ ಅನಿವಾರ್ಯವಾಗಿವೆ. ಅಪ್ರಜ್ಞಾಪೂರ್ವಕವಾಗಿಯೇ ನಡೆಯುವ ಇಲ್ಲಿನ ವ್ಯಾವಹಾರಿಕ ಭಾಷೆ ಸಂವಹನವನ್ನು ಮುಖ್ಯ ಲಕ್ಷ್ಯವಾಗಿಸಿಕೊಂಡಿದೆ. ಹಾಗಾಗಿ ಭಾಷಿಕ ಗಡಿಪ್ರದೇಶಗಳಲ್ಲಿ ನುಡಿ ಬೆರಕೆಗಳ ಮೂಲಕ ನುಡಿಸಂಬಂಧಗಳು ನಿರಂತರವಾಗಿ ನಡೆಯುವ ಪ್ರಕ್ರಿಯೆಗಳಾಗಿವೆ.

# ‘ಮನಸ್ಮೃತಿ’ಯಲ್ಲಿನ ಶೈಕ್ಷಣಿಕ ಪರಿಕಲ್ಪನೆಗಳು


**ದಿಲೀಪಕುಮಾರ್ ಪಾಂಡೆ**

‘ದಿನಕರ’

2ನೇ ಕ್ರಾಸ್, ಅಶೋಕನಗರ

ಶಿವಮೊಗ್ಗ-577201


## ಪ್ರಸ್ತಾವನೆ

ಮನುಸ್ಮೃತಿ– ಸಾಕಷ್ಟು ಖಂಡನೆ ಮಂಡನೆಗೊಳಗಾಗಿರುವ ಒಂದು ಸಂಸ್ಕೃತ ಕೃತಿ. ಈ ಮೂಲಕೃತಿಯ ಮೇಲೆ ಸಂಸ್ಕೃತ ಹಾಗೂ ಇತರ ದೇಶೀಯಭಾಷೆಗಳಲ್ಲಿ ಹಲವು ಟೀಕಾಗ್ರಂಥಗಳು ಹಲವು ಶತಮಾನಗಳ ದೀರ್ಘಾವಧಿಯಲ್ಲಿ ಪ್ರಕಟವಾಗಿವೆ. ಈ ಪೈಕಿ ಸಂಸ್ಕೃತದಲ್ಲಿ ಕಲ್ಲೂಕಭಟ್ಟನು ಬರೆದಿರುವ ಭಾಷ್ಯವು ಹೆಚ್ಚು ಪ್ರಖ್ಯಾತವಾಗಿದೆ. ಇಂಗ್ಲೀಷ್‌ನಲ್ಲಿಯು ಈ ಗ್ರಂಥದ ವ್ಯಾಖ್ಯಾನಗಳು ಹೊರಬಂದಿವೆ.

ಹನ್ನೆರಡು ಅಧ್ಯಾಯಗಳು ಹಾಗೂ ಒಟ್ಟು 2684 ಶ್ಲೋಕಗಳನ್ನು ಹೊಂದಿರುವ ಈ ಗ್ರಂಥದಲ್ಲಿ – ಲೋಕಸೃಷ್ಟಿ, ಮನ್ವಂತರಗಳ ವಿವರಣೆ, ಚಾತುರ್ವರ್ಣಗಳನ್ನು ಕುರಿತ ವಿವರಣೆ, ಬ್ರಾಹ್ಮಣ ಕ್ಷತ್ರಿಯ ಇತ್ಯಾದಿಯವರ ಕರ್ಮಗಳು, ಧರ್ಮದ ಸಾಮಾನ್ಯ ಲಕ್ಷಣ, ಇಂದ್ರಿಯ ಸಂಯಮ, ಅಧ್ಯಯನ, ಯೋಗ್ಯ ಶಿಷ್ಯ, ಗುರು, ಆಚಾರ್ಯ, ಉಪಾಧ್ಯಾಯ, ಶಿಷ್ಯನ ವರ್ತನೆ, ಕೀಳುಜಾತಿಯವರಿಂದ ವಿದ್ಯಾಗ್ರಹಣ, ಗುರುದಕ್ಷಿಣೆ, ಗೃಹಸ್ಥಾಶ್ರಮ ಸ್ವೀಕಾರ, ವಿವಾಹವಿಧಿ, ಯೋಗ್ಯ ಕನ್ಯೆಯ ಆಯ್ಕೆ, ರಾಜನ ಕರ್ತವ್ಯ, ಜಲರಕ್ಷಣೆ, ಪ್ರಾಣಿರಕ್ಷಣೆ, ಅತಿಥಿ ಉಪಚಾರ, ವಾನಪ್ರಸ್ಥಾಶ್ರಮ, ಸ್ತ್ರೀ ಸ್ವಭಾವ, ಅವರ ರಕ್ಷಣೆ, ಸ್ನಾತಕರ ಭೇದಗಳು– ಕರ್ಮಫಲ – ಇತ್ಯಾದಿ ನೂರಾರು ವಿಷಯಗಳನ್ನು ಹೇಳಲಾಗಿದೆ.

ಇವುಗಳ ಪೈಕಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹೇಳಲ್ಪಟ್ಟ ಕೆಲವು ವಿಷಯಗಳನ್ನು ಸಂಗ್ರಹಿಸುವುದು, ಅವುಗಳ ಬಗ್ಗೆ ಮನುವಿನ ಅಭಿಪ್ರಾಯಗಳನ್ನು ವಿವೇಚಿಸುವುದು ಈ ಸಂಪ್ರ ಬಂಧದ ಗುರಿ.

## ಮಹತ್ವ

ಮನುಸ್ಮೃತಿಯಲ್ಲಿನ ಶೈಕ್ಷಣಿಕ ಪರಿಕಲ್ಪನೆಗಳನ್ನು ಸಂಗ್ರಹಿಸುವ, ವಿವೇಚಿಸುವ ಶೋಧನಾಕಾರ್ಯ ಈವರೆಗೂ ನಡೆದಿಲ್ಲ.

ಪಾಶ್ಚಾತ್ಯ ಜಗತ್ತಿನಲ್ಲಿ ಶಿಕ್ಷಣವನ್ನು ಕುರಿತು ಶಾಸ್ತ್ರೀಯ ದೃಷ್ಟಿಕೋನ ಬೆಳೆಯುವುದಕ್ಕೂ ಮೊದಲೇ (ಅರಿಸ್ಟಾಟಲ್, ಸಾಕ್ರಟೀಸರಂಥ ಗ್ರೀಕ್ ತತ್ವಶಾಸ್ತ್ರಜ್ಞರನ್ನು ಹೊರತುಪಡಿಸಿ), ಭಾರತದಲ್ಲಿ ಶಿಕ್ಷಣದ ವಿವಿಧ ಅಂಶಗಳನ್ನು, ಆಯಾಮಗಳನ್ನು ಕುರಿತಂತೆ ಸ್ಪಷ್ಟ ವಿಚಾರಗಳು ರೂಪುಗೊಂಡಿದ್ದವು ಎನ್ನುವುದಕ್ಕೆ ಮನುಸ್ಮೃತಿಯಲ್ಲಿನ ಅನೇಕ ಶ್ಲೋಕಗಳು ಆಧಾರವಾಗಿವೆ. ಈ ವಿಚಾರಗಳು ಮನುವಿನಿಂದ ಸೃಷ್ಟಿಸಲ್ಪಟ್ಟವುಗಳಲ್ಲ. ತನ್ನವರೆಗೂ ಹರಿದುಬಂದ ತತ್ವ/

ಆಚಾರ/ ನಿಯಮಾವಳಿಗಳನ್ನು ಮನು ಗ್ರಂಥರೂಪದಲ್ಲಿ ಕ್ರೋಢೀಕರಿಸಿದ ಎಂಬುದು ಎಲ್ಲ ವಿದ್ವಾಂಸರೂ ಒಪ್ಪಿರುವ ವಿಚಾರ. ಆದ್ದರಿಂದ ಮನುಸ್ಮೃತಿಯಲ್ಲಿನ ಶೈಕ್ಷಣಿಕ ವಿಚಾರಗಳು ಬಹುಹಿಂದಿನಿಂದಲೇ ಅಂದರೆ ಋಗ್ವೇದದ ಕಾಲದಿಂದಲೇ ಹರಿದು ಬಂದವು ಎಂಬುದು ಪ್ರಮುಖ ಅಂಶ. ಆದರೆ 'ವೇದ ಕಾಲದ ಶಿಕ್ಷಣ ಪದ್ಧತಿ' ಯನ್ನು ವಿವರಿಸುವ ನಮ್ಮ ಶಿಕ್ಷಣ ಗ್ರಂಥಗಳು ವಿವಿಧ ವೇದಗಳಲ್ಲಿನ (ವಿಶೇಷತಃ ಋಗ್ವೇದ, ಸಾಮವೇದಗಳಲ್ಲಿನ) ಕೆಲವು ಸೂಕ್ತಿಗಳನ್ನು, ಉಪನಿಷತ್ತು ಹಾಗೂ ಶಂಕರಾಚಾರ್ಯರ ಕೆಲವು ಉಕ್ತಿಗಳನ್ನು ಉದಾಹರಿಸುತ್ತವೆಯೇ ವಿನಃ ಮನುಸ್ಮೃತಿಯಲ್ಲಿನ ವಿವರಣೆಯ ಪ್ರಸ್ತಾಪ ಮಾಡುವುದು ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ.

ಆದ್ದರಿಂದ ಪ್ರಸ್ತುತ ಸಂಪ್ರಬಂಧವು ಈವರೆಗೂ ಬಹುಮಟ್ಟಿಗೆ ಅಶೋಧಿತವಾಗಿದ್ದ ಕ್ಷೇತ್ರವೊಂದಕ್ಕೆ ಕೈ ಹಾಕುವ ಪ್ರಯತ್ನವಾಗಿದೆ.

ಪ್ರಬಂಧದ ಮಿತಿ: ಈ ಸಂಪ್ರಬಂಧವು ಮನುಸ್ಮೃತಿಯಲ್ಲಿನ, ಶಿಕ್ಷಣಕ್ಕೆ ನೇರವಾಗಿ ಸಂಬಂಧಿಸಿದ ಕೆಲವು ವಿಚಾರಗಳನ್ನು ಚರ್ಚಿಸುವುದಕ್ಕೆ ಮಾತ್ರ ಸೀಮಿತವಾಗಿದೆ. ಅಲ್ಲಿನ ಇತರ ವಿಚಾರಗಳನ್ನು ಚರ್ಚಿಸುವ, ಸಮರ್ಥಿಸುವ, ಇಲ್ಲವೇ ನಿರಾಕರಿಸುವುದು ಈ ಸಂಪ್ರಬಂಧದ ವ್ಯಾಪ್ತಿಗೆ ಹೊರತಾದುದು.

## ಮನುಸ್ಮೃತಿ – ಶೈಕ್ಷಣಿಕ ಪರಿಕಲ್ಪನೆಗಳು

ಈಗ ಈ ಪ್ರಾಚೀನ ಕೃತಿಯಲ್ಲಿನ ವಿವಿಧ ಶೈಕ್ಷಣಿಕ ವಿಚಾರಗಳ ಕಡೆ ತಿರುಗೋಣ. ಸಂಪ್ರಬಂಧ ದೀರ್ಘವಾಗುದನ್ನು ತಡೆಯಲು ಮೂಲ ಶ್ಲೋಕಗಳನ್ನು ಎಲ್ಲ ಕಡೆ ಉದಾಹರಿಸಬಲ್ಲ ಕೆಲವೆಡೆ ಮಾತ್ರ ಉದ್ಧರಿಸಿದೆ. ಎಲ್ಲ ಕಡೆಯೂ ಆ ಶ್ಲೋಕವಿರುವ ಅಧ್ಯಾಯ ಹಾಗೂ ಅಲ್ಲಿನ ಶ್ಲೋಕ ಸಂಖ್ಯೆಯನ್ನು ನಮೂದಿಸಿ, ತಾತ್ಪರ್ಯಾರ್ಥವನ್ನು ಮಾತ್ರ ನೀಡಿ ಆ ಬಗ್ಗೆ ಈಗ ಪ್ರಚಲಿತವಿರುವ ತಜ್ಞರ ನಿಲುವಿನೊಡನೆ ಹೋಲಿಸಲಾಗಿದೆ.

## 1. ಗುರು/ಆಚಾರ್ಯ/ಉಪಾಧ್ಯಾಯ

ಮನುಸ್ಮೃತಿಯಲ್ಲಿ ಈ ಮೂವರ ನಡುವಿನ ವ್ಯತ್ಯಾಸಗಳನ್ನು ಸ್ಪಷ್ಟವಾಗಿ ಹೇಳಲಾಗಿದೆ. ಇವರ ಪೈಕಿ 'ಗುರು' ಕೇವಲ ಮೊದಲ ಹಂತದವನು.

ನಿಷೇಕಾದೀನಿ ಕರ್ಮಾಣಿ ಯಃ ಕರೋತಿ ಯಥಾವಿಧಾ ।
ಸಂಭಾವಯತಿ ಚಾನ್ನೇನ ಸ ವಿಪ್ರೋ ಗುರುರುಚ್ಯತೇ ॥ (2–142)

'ಯಾವ ಬ್ರಾಹ್ಮಣನು ನಿಷೇಕ ಮುಂತಾದ ಸಂಸ್ಕಾರ ಕರ್ಮಗಳನ್ನು ವಿಧಿಪೂರ್ವಕವಾಗಿ ಮಾಡಿಸುತ್ತ (ಮಾಡುತ್ತ) ಅನ್ನವಿತ್ತು ಸಲಹುತ್ತಾನೋ ಅವನು ಗುರುವೆನ್ನಿಸಿಕೊಳ್ಳುತ್ತಾನೆ'.[1]

ಗುರುವಿನ ಬಗ್ಗೆ ನೀಡಿರುವ ಈ ವ್ಯಾಖ್ಯೆ ಅನ್ಯ ವೈದಿಕ ಸಾಹಿತ್ಯದಲ್ಲಿನ ವ್ಯಾಖ್ಯೆಗಳಿಗಿಂತ ಭಿನ್ನವಾಗಿದೆ. ಈ ಪ್ರಸಿದ್ಧ ಶ್ಲೋಕವನ್ನು ಗಮನಿಸಿ:

ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನ ಶಲಾಕಯಾ ।
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀ ಗುರುವೇ ನಮಃ ॥

ಅಂದರೆ – 'ಅಜ್ಞಾನವೆಂಬ ಕತ್ತಲೆಯಲ್ಲಿ (ನಾನು) ಮುಳುಗಿದ್ದಾಗ ಜ್ಞಾನದ ಅಂಜನವನ್ನು ತಂದು ಕಣ್ಣು ತೆರೆಸಿದಂಥ ಶ್ರೀ ಗುರುವಿಗೆ ನಮಸ್ಕಾರ' – ಎಂಬುದು ಈ ಶ್ಲೋಕದ ಮುಖ್ಯಾರ್ಥ. ಇದೇ ರೀತಿ – "ಗುರುಬ್ರಹ್ಮ ಗುರುವಿಷ್ಣು ಗುರುರ್ದೇವೋ ಮಹೇಶ್ವರಃ." ಎಂದು ಆರಂಭವಾಗುವ ಸಂಸ್ಕೃತ ಶ್ಲೋಕ ಸಹ 'ಗುರು' ಎಂಬುದಕ್ಕೆ ಬಹುಪೂಜ್ಯವಾದ ಅರ್ಥ ಮತ್ತು ಸ್ಥಾನವನ್ನು ಕೊಟ್ಟಿದೆ.

ಸಂತ ಕವಿ ಕಬೀರನು ತನ್ನೊಂದು 'ದೋಹಾ'ದಲ್ಲಿ ದೇವರು ಯಾರೆಂದು ತೋರಿಸಿಕೊಡುವವನೇ ಗುರು. ಆದ್ದರಿಂದ ಇಬ್ಬರೂ ಒಟ್ಟಿಗೆ ಎದುರಿಗೆ ಬಂದರೆ ನಾನು ಮೊದಲು ಗುರುವಿಗೇ ನಮಿಸುವೆ ಎಂದಿದ್ದಾನೆ –

"ಗುರು ಗೋವಿಂದ ದೋಂವು ಖರೇ, ಕಾಕೇ ಲಾಗೂ ಪಾಂವ್
ಬಲಿಹಾರಿ ಗುರು ಆಪ್ನೆ, ಜಿಸೆ ಗೋವಿಂದ್ ದಿಯಾ ಬತಾಯ್ ।"3

ಹೀಗೆ ಮನುಸ್ಮೃತಿಯಲ್ಲಿ– ಕೇವಲ ಸಂಸ್ಕಾರಕರ್ಮಗಳನ್ನು ಮಾಡುವುದನ್ನು ಕಲಿಸುವವನನ್ನು ಗುರು ಎಂದರೆ, ಇದಕ್ಕಿಂತ ಮೇಲಿನ ಮಟ್ಟದ ಬೋಧನೆ, ತರಬೇತಿಗಳನ್ನು ಕೊಡುವವನನ್ನು ಉಪಾಧ್ಯಾಯ ಎಂದು ಕರೆಯಲಾಗಿದೆ.

ಏಕದೇಶಂ ತು ವೇದಸ್ಯ ವೇದಾಂಗಾನ್ಯಪಿ ವಾ ಪುನಃ ।
ಯೋಽಧ್ಯಾಪಯತಿ ವೃತ್ತ್ಯರ್ಥಮುಪಾಧ್ಯಾಯಃ ಸ ಉಚ್ಯತೇ ।
(ಮನುಸ್ಮೃತಿ: 2–141)

'ಯಾವ ಬ್ರಾಹ್ಮಣನು ಜೀವನೋಪಾಯದ ವೃತ್ತಿಯನ್ನಾಗಿ ಅಂಗೀಕರಿಸಿ, ವೇದವನ್ನು ಭಾಗಶಃ ಅಥವಾ ವೇದಾಂಗವನ್ನು ಕಲಿಸುತ್ತಾನೋ ಅವನು ಉಪಾಧ್ಯಾಯನೆನ್ನಿಸಿಕೊಳ್ಳುತ್ತಾನೆ.

– ಅಂದರೆ, ಉಪಾಧ್ಯಾಯನಿಗೆ ವೇದದ ಭಾಗಗಳನ್ನು ಅಥವಾ ವೇದಾಂಗವನ್ನು ಕಲಿಸುವುದೇ ಜೀವನವೃತ್ತಿಯನ್ನಾಗಿರುತ್ತದೆ ಎಂದರ್ಥ.

ಇದರಲ್ಲಿ ಇನ್ನೂ ಮೂರು ನಿಹಿತಾರ್ಥಗಳಿವೆ–

1. ಉಪಾಧ್ಯಾಯನು ಬ್ರಾಹ್ಮಣನೇ ಆಗಿರುತ್ತಾನೆ. (ಶ್ಲೋಕದಲ್ಲಿ ಇದನ್ನು ಸ್ಪಷ್ಟವಾಗಿ ಹೇಳಿಲ್ಲದಿದ್ದರೂ ವೇದ/ವೇದಾಂಗಗಳನ್ನು ಪಾಠ ಮಾಡುವ ಹಕ್ಕು ಮತ್ತು ಸಾಮರ್ಥ್ಯ ಆ ಕಾಲದಲ್ಲಿ ಇದ್ದದ್ದು ಬ್ರಾಹ್ಮಣರಿಗೆ ಮಾತ್ರ).
2. ಈ ಉಪಾಧ್ಯಾಯನು ವೇದಗಳನ್ನು ಪೂರ್ಣವಾಗಿ ಕಲಿಸಬಲ್ಲಷ್ಟು ಜ್ಞಾನಿಯಾಗಿರುವುದಿಲ್ಲ.
3. ಹೀಗೆ ಕಲಿಸುವುದು ಇವನ ವೃತ್ತಿಯಾಗಿರುತ್ತದೆ. ಅಂದರೆ ಇದಕ್ಕಾಗಿ ಈ ಉಪಾಧ್ಯಾಯನಿಗೆ ವಿದ್ಯಾರ್ಥಿಯ ಪೋಷಕರು 'ಗುರುದಕ್ಷಿಣೆ' ಎಂಬ ಫೀ ಕೊಡಬೇಕಾಗಿರುತ್ತದೆ.

   – ಈ 'ಉಪಾಧ್ಯಾಯ' ನನ್ನು ಇಂದಿನ ಟೀಚರ್‌ಗಿಂತ ತುಸು ವಿಶಾಲಾರ್ಥದಲ್ಲಿ ಮನುವಿನ ಕಾಲದಲ್ಲಿ ಬಳಸಲಾಗುತ್ತಿತ್ತೆಂದು ಊಹಿಸಬಹುದು. ಈ ಊಹೆಗೆ ಕಾರಣಗಳಿವು:

1. ಆ 'ಉಪಾಧ್ಯಾಯ'ನು ಇಂದಿನ 'teacher'ಗಳಿಗಿಂತ ಸಾಕಷ್ಟು ಹೆಚ್ಚಿನ ಸಂಸ್ಕೃತ ಜ್ಞಾನ ಹಾಗೂ ವೇದಜ್ಞಾನವನ್ನು ಹೊಂದಿದ್ದ.
2. ಉಪಾಧ್ಯಾಯನು ಶಿಷ್ಯನನ್ನು ತನ್ನ ಮನೆಯಲ್ಲಿಟ್ಟುಕೊಂಡು ಪೋಷಿಸುತ್ತಿದ್ದ. (ಹಾಗೆಂದು ಈ ಶ್ಲೋಕದಲ್ಲಿ ಸ್ಪಷ್ಟವಾಗಿ ಹೇಳಿಲ್ಲವಾದರೂ ಆಗ ಗುರುಕುಲ ಪದ್ಧತಿಯ ವಿದ್ಯಾಭ್ಯಾಸ ಮಾತ್ರವೇ ಚಾಲ್ತಿಯಲ್ಲಿದ್ದದ್ದರಿಂದ ಹಾಗೆ ಭಾವಿಸಲಡ್ಡಿಯಿಲ್ಲ).
3. ಈ ಉಪಾಧ್ಯಾಯನಿಗೆ – ವ್ಯಾಕರಣ, ಛಂದಸ್ಸು, ಜ್ಯೋತಿಷ್ಯ ವೇದಗಣಿತ ಇವೂ ತಿಳಿದಿರಲಿಕ್ಕೇ ಬೇಕು. ಯಾಕೆಂದರೆ ಇವನ್ನು ತಿಳಿಯದೆ ಶ್ಲೋಕದ ಸರಿಯಾದ ಪಾಠವನ್ನು ಖಚಿತಪಡಿಸಲಿಕ್ಕೆ ಆಗುತ್ತಿರಲಿಲ್ಲ ಹಾಗೂ ವಿವಿಧ ನೇಮಾನುಷ್ಠಾನಗಳನ್ನು ಮಾಡಲಿಕ್ಕೆ ಜ್ಯೋತಿಷ್ಯ ಮತ್ತು ವೇದಗಣಿತದ ಜ್ಞಾನ ಅಗತ್ಯವಾಗಿತ್ತು.

ಆಚಾರ್ಯನು ಅತ್ಯಂತ ಉನ್ನತ ಸ್ತರದ ಶಿಕ್ಷಕನಾಗಿದ್ದನೆಂದು ಮನುವಿನ ವಿವರಣೆಯಿಂದ ತಿಳಿಯುತ್ತದೆ. ಅವನ ಲಕ್ಷಣವನ್ನು ಮನುಸ್ಮೃತಿ ಹೀಗೆ ನಿರೂಪಿಸಿದೆ –

ಉಪನೀಯ ತು ಯಃ ಶಿಷ್ಯಂ ವೇದ ಮಧ್ಯಾಪಯೇದ್ವಿಜಃ ।
ಸಂಕಲ್ಪ ಸರಹಸ್ಯಂ ಚ ತಮಾಚಾರ್ಯಂ ಪ್ರಚಕ್ಷತೇ ॥ (2–140)

ಅಂದರೆ – 'ಯಾವ ಬ್ರಾಹ್ಮಣನು ಶಿಷ್ಯನಿಗೆ ಉಪನಯನವನ್ನು ಮಾಡಿ ಅವನಿಗೆ ಸಮಸ್ತ ವೇದ ವೇದಾಂಗಗಳನ್ನೂ ಅವುಗಳ ಅರ್ಥಸಹಿತವಾಗಿ ವಿವರಿಸಿ, ಅವುಗಳ ಗೂಢಾರ್ಥಗಳನ್ನೂ ಕಲಿಸುತ್ತಾನೋ, ಅಂಥವನು ಆಚಾರ್ಯ ಎಂದು ತಿಳಿಯಲ್ಪಡುತ್ತಾನೆ'.

'ಸಮಸ್ತ ವೇದ ವೇದಾಂಗಗಳನ್ನೂ ಅವುಗಳ ಗೂಢಾರ್ಥ ಸಹಿತವಾಗಿ'– ಎಂಬ ಮಾತು ಇಲ್ಲಿ ಬಹುಮುಖ್ಯ. ಹಾಗೆ ಹೇಳಬಲ್ಲ ವ್ಯಕ್ತಿ ಪರಿಪಕ್ವ ಪಂಡಿತನೂ ವಿವಿಧ ತಾತ್ವಿಕ ಸಿದ್ಧಾಂತಗಳನ್ನರಿತವನೂ ಆಗಿರಬೇಕು. ಇಂದು ನಾವು great scholar, Emeritus professor, National Professor –ಎಂದು ಕರೆಯುವ ವ್ಯಕ್ತಿಗಳ ಮಟ್ಟದಲ್ಲಿ ಅಥವಾ ಅದಕ್ಕಿಂತ ಮೇಲೆ ಇವರಿದ್ದರೆಂಬುದು ಸ್ಪಷ್ಟ.

ಹೀಗೆ – ಕಲಿಸುವವರಲ್ಲಿ ಮೂರು ವಿಧಗಳೆಂದು ಮನು ಪಟ್ಟಿ ಮಾಡುತ್ತಾ ಅವರ ಲಕ್ಷಣವನ್ನು ಸ್ಪಷ್ಟೀಕರಿಸಿದ್ದಾನೆ. ಅಂದರೆ ಮುಂದಿನ ಶಿಕ್ಷಣ ಸಂದರ್ಭಗಳಲ್ಲೆಲ್ಲಾ ಗುರುವೆಂಬ ಶಬ್ದವನ್ನೇ ಎಲ್ಲ ಅರ್ಥಗಳಲ್ಲೂ ಬಳಸಿದ್ದಾನೆ.

## 2. ಶಿಷ್ಯನ ನಡವಳಿಕೆ

ತನಗೆ ಜ್ಞಾನದಾನ ಮಾಡುವವನ ಜೊತೆ ಶಿಷ್ಯನಾದವನು ಹೇಗೆ ವರ್ತಿಸಬೇಕೆಂಬುದನ್ನು ಮನುಸ್ಮೃತಿ ಸ್ಪಷ್ಟವಾಗಿ ಹೇಳಿದೆ.

ಶಿಷ್ಯನು, ಅಂದರೆ – ಕಲಿಕೆಯ ಹಂತದಲ್ಲಿರುವವನು, ಅದು ಮುಗಿಯುವವರೆಗೂ ಬ್ರಹ್ಮಚಾರಿಯಾಗಿರಬೇಕು. ನಿರ್ದಿಷ್ಟಪಡಿಸಿದ ಚರ್ಮ (ಕೃಷ್ಣಾಜಿನ – ಇತ್ಯಾದಿ), ಸೂತ್ರ (ಜನಿವಾರ), ಉಡುದಾರ (ಮೇಖಲಾ), ದಂಡ ಹಾಗೂ ವಸ್ತ್ರಗಳನ್ನೇ ಎಲ್ಲ ವ್ರತಾಚರಣೆಗಳಲ್ಲಿ ಧರಿಸಬೇಕೆಂಬುದು ನಿಯಮವಾಗಿತ್ತು. (2–174) ಅವನು ತನ್ನ ಇಂದ್ರಿಯಗಳನ್ನು ನಿಯಂತ್ರಿಸಿಕೊಂಡು ನಿಯಮ ಪಾಲನೆ ಮಾಡಬೇಕು (2–175). ಹೆಂಡ,

ಮಾಂಸ, ಗಂಧ, ಮಾಲೆ, ರಸ ಮತ್ತು ಸ್ತ್ರೀ ಭೋಗಗಳನ್ನು ತ್ಯಜಿಸಬೇಕು. ಹುಳಿ ರಸ ಸೇವಿಸಬಾರದು. ಪ್ರಾಣಿಹಿಂಸೆ ಮಾಡಬಾರದು (2–177) . ಛತ್ರಿ, ಪಾದರಕ್ಷೆ, ಅಭ್ಯಂಜನ, ಕಾಡಿಗೆ ಮೊದಲಾದ ವಸ್ತುಗಳನ್ನೂ ಅವನು ವರ್ಜಿಸಬೇಕು. (2–178)

ಇದರ ಜೊತೆಗೆ, ಬ್ರಹ್ಮಚಾರಿಯಾದವನು (ಅಂದರೆ – ವಿದ್ಯಾರ್ಥಿ)– ದ್ಯೂತ, ಜಗಳ, ಪರನಿಂದೆ, ಸುಳ್ಳು ಹೇಳುವುದು, ಸ್ತ್ರೀ ವೀಕ್ಷಣೆ, ಆಲಿಂಗನ, ಅಪಕಾರ–ಇವುಗಳನ್ನು ಮಾಡಬಾರದೆನ್ನುತ್ತಾನೆ ಮನು (2–179).

– ಇಲ್ಲಿ ನಾವು ಗಮನಿಸಬೇಕು ವಿದ್ಯಾರ್ಥಿಗೆ ವರ್ಜ್ಯವಾದವುಗಳಲ್ಲಿ ಕೆಲವು (ಪರನಿಂದೆ, ಸುಳ್ಳು, ಅಪಕಾರ, ಜಗಳ– ಇತ್ಯಾದಿ) – ಎಲ್ಲರಿಗೂ ಎಲ್ಲ ಕಾಲಕ್ಕೂ ನಿಷೇಧಿತವಾದವುಗಳೇ. ಬಸವಣ್ಣನವರ 'ಕಳಬೇಡ, ಕೊಲಬೇಡ' –ಎಂಬ ಪ್ರಸಿದ್ಧ ವಚನದಲ್ಲಿನ ನೈತಿಕ ನಡವಳಿಕೆಗಳನ್ನು ಮನುವಿನ ಕಾಲಕ್ಕಾಗಲೇ ಸಮಾಜ ಒಪ್ಪಿಕೊಂಡಿತ್ತು ಎನ್ನುವುದು ಮನುಸ್ಮೃತಿಯಿಂದ ಸ್ಪಷ್ಟ. ಉಳಿದ ಕೆಲವು ನಿಯಮಗಳು (ಛತ್ರಿ, ಪಾದರಕ್ಷೆಗಳನ್ನೂ ಉಪಯೋಗಿಸದಿರುವುದು, ಸ್ತ್ರೀ ಸಹವಾಸದಿಂದ ದೂರವಿರುವುದು – ಮೊದಲಾದವು) ವಿಶೇಷವಾಗಿ ಬ್ರಹ್ಮಚಾರಿಯಾದ ವಿದ್ಯಾರ್ಥಿಗೆ ಹೇಳಲ್ಪಟ್ಟವು ಹಾಗೂ ಅವರಿಗೆ ಅವುಗಳ ತ್ಯಾಗ ಅಗತ್ಯ ಹಾಗೂ ಅನಿವಾರ್ಯವಾಗಿತ್ತು.

ಶಿಷ್ಯ ಗುರುಗಳಿಗಾಗಿ ಕೊಡದಲ್ಲಿ ನೀರನ್ನು, ಪೂಜೆಗಾಗಿ ಪುಷ್ಪ, ದರ್ಭೆ, ಮೃತ್ತಿಕೆಗಳನ್ನು, ನೆಲಶುದ್ಧಿ ಕಾರ್ಯಕ್ಕಾಗಿ ಗೋಮಯ (ಆಕಳ ಸಗಣಿ)ಯನ್ನು, ಇಂಥ ಇತರ ಅಗತ್ಯ ವಸ್ತುಗಳನ್ನು ಸಂಗ್ರಹಿಸಿ ತರಬೇಕು ಎಂಬುದೂ ಆ ಕಾಲದ ನಿಯಮವಾಗಿತ್ತು:

ಉಪಕುಂಭಂ ಸುಮನಸೋ ಗೋಶನ್ಮೃತ್ತಿಕಾ ಕುಶಾನ್ ।
ಆಹರೇದ್ಯಾವದರ್ಥಾನಿ ಭೈಕ್ಷರಿ ಚಾಹರಹಶ್ಚರೇತ್ ॥ (2–182)

– ಪ್ರತಿದಿನವೂ ಆತ ತನ್ನ ಆಹಾರಕ್ಕಾಗಿ ಕೆಲವು ಮನೆಗಳಲ್ಲಿ ಭಿಕ್ಷೆ ಬೇಡಬೇಕು ಎಂದೂ ಮೇಲಿನ ಶ್ಲೋಕದಲ್ಲಿ ಹೇಳಲಾಗಿದೆ.

–ಹದಿನೆಂಟನೇ ಶತಮಾನದಿಂದೀಚೆಗೆ ಈ ಎಲ್ಲ ಕರ್ತವ್ಯಗಳಿಂದ ಶಿಷ್ಯ (ವಿದ್ಯಾರ್ಥಿ) ಬಿಡುಗಡೆ ಹೊಂದಿದ. ಶಿಕ್ಷಕನೂ ಸಹ ಅವನನ್ನು ಬೆಳಿಗ್ಗೆ ಏಳಿಸುವ, ವ್ಯಾಯಾಮ, ಯೋಗಗಳನ್ನು ಮಾಡಿಸುವ, ಆರೋಗ್ಯ ನೋಡಿಕೊಳ್ಳುವ – ಜವಾಬ್ದಾರಿಯಿಂದ ಬಿಡುಗಡೆ ಹೊಂದಿದ. ಯಾಕೆಂದರೆ ಕಲಿಸುವ – ಕಲಿಯುವ ಪ್ರಕ್ರಿಯೆ ವ್ಯಕ್ತಿ ಪ್ರಧಾನವಾಗಿದ್ದ ಸಣ್ಣ ಸಾಂಸ್ಥಿಕ ಘಟಕದ ಸ್ವರೂಪವನ್ನು ಬಿಟ್ಟುಕೊಟ್ಟು ಇಲಾಖೆಯೆಂಬ ಸಮಷ್ಟಿಯ ಅಧೀನದಲ್ಲಿ ಕೆಲಸ ಮಾಡುವ ಏಕವ್ಯಕ್ತಿ ಜವಾಬ್ದಾರಿ ಇಲ್ಲದ ಶಾಲೆ ಎಂಬ ಸಂಸ್ಥೆಯಾಗಿ ಪರಿವರ್ತನೆಗೊಂಡಿತು. ಹೀಗಾಗಿದ್ದಕ್ಕೆ ಕಾರಣಗಳನ್ನೂ, ಅದರ ಪರಿಣಾಮಗಳನ್ನೂ ವಿವೇಚಿಸುವುದಕ್ಕೆ ಇದು ಸಂದರ್ಭವಲ್ಲ. ಆದರೆ ಇದರಿಂದಾಗಿ ಶಿಕ್ಷಕ – ವಿದ್ಯಾರ್ಥಿಗಳಲ್ಲಿದ್ದ ವೈಯುಕ್ತಿಕ ಸಂಬಂಧ ಹಾಗೂ ಪರಸ್ಪರರ ಬಗೆಗಿನ ಜವಾಬ್ದಾರಿಯ ಪ್ರಜ್ಞೆ ಬಹುಮಟ್ಟಿಗೆ ಸಡಿಲವಾಯಿತು ಎಂಬುದಷ್ಟೆ ಮುಖ್ಯ. ಈಗಿನ ಅಂತರ್ಜಾಲ ಯುಗ ಮತ್ತು ಉಚಿತ ಕೊಡುಗೆಗಳ ಯುಗದಲ್ಲಿ ಈ ಸಂಬಂಧ ಮತ್ತು ಹತೋಟಿಗಳು ತುಂಬಾ ಸಡಿಲಗೊಂಡಿವೆ ಎನ್ನುವುದು ಶಿಕ್ಷಕರ ಅನುಭವಕ್ಕೆ ಬಂದಿರುವ ಸಂಗತಿ.

ಬ್ರಹ್ಮಚಾರಿಯು (ವಿದ್ಯಾರ್ಥಿ) ಎಲ್ಲೆಲ್ಲಿ ಭಿಕ್ಷೆ ಬೇಡಬೇಕು, ಬೇಡಬಾರದು, ಭಿಕ್ಷೆ ಸಿಗದಿದ್ದರೆ ಏನು ಮಾಡಬೇಕು ಎಂಬ ನಿಯಮಗಳೂ ಮನುಸ್ಮೃತಿಯಲ್ಲಿ ಉಕ್ತವಾಗಿವೆ (ಅಧ್ಯಾಯ 2 – ಶ್ಲೋಕ ಸಂಖ್ಯೆ 184 ರಿಂದ 190).

ಗುರು ಹೇಳಲಿ ಹೇಳದಿರಲಿ ಶಿಷ್ಯನು ಅಧ್ಯಯನ ಹಾಗೂ ಗುರುವಿಗೆ ಹಿತಕರವಾದ ಕಾರ್ಯವನ್ನು ಮಾಡುತ್ತಿರಬೇಕು – 'ಕುರ್ಯಾದಧ್ಯಯನೇ ಯತ್ನಮಾಚಾರ್ಯಸ್ಯ ಹಿತೇಷು ಚ' (2–191) ಎಂಬುದು ನಿಯಮವಾಗಿತ್ತು.

ಪಾಠ ಕೇಳುವ ಸಯಮದಲ್ಲಿ ಶಿಷ್ಯ ಹೇಗಿರಬೇಕೆಂಬುದನ್ನು ಈ ಶ್ಲೋಕ ಹೇಳುತ್ತದೆ–

ಶರೀರಂ ಚೈವ ವಾಚಂ ಚ ಬುದ್ಧೀಂದ್ರಿಯಮನಾಂಸಿ ಚ ।
ನಿಯಮ್ಯ ಪ್ರಾಂಜಲಿಸ್ತಿಷ್ಠೇದ್ವೀಕ್ಷ ಮಾಣೋ ಗುರೋರ್ಮುಖಂ ॥ (2–192)

ಪಾಠ ಕೇಳುವ ಸಮಯದಲ್ಲಿ ಬ್ರಹ್ಮಚಾರಿಯು ದೇಹ ಮನಸ್ಸು ಬುದ್ಧಿ ವಾಣಿ ಹಾಗೂ ಇಂದ್ರಿಯಗಳನ್ನು ನಿಯಂತ್ರಿಸಿಕೊಂಡು ಗುರುಗಳ ಮುಖವನ್ನೇ ವೀಕ್ಷಿಸುತ್ತಾ ಗುರುಸನ್ನಿಧಿಯಲ್ಲಿ ನಿಲ್ಲಬೇಕು. (ಇಲ್ಲಿ 'ನಿಲ್ಲಬೇಕು' ಎಂದರೆ, ಗುರುವಿನ ಅಪ್ಪಣೆಯಾದ ಬಳಿಕ ಕುಳಿತುಕೊಳ್ಳಬೇಕೆಂದರ್ಥ).

'ಆಸ್ಯತಾಮಿತಿ ಚೋಕ್ತಃ ಸನ್ನಾಸೀತಾಭಿಮುಖಂ ಗುರೋಃ' ಎಂದೂ ಹೇಳಲಾಗಿದೆ (2–193) ಅಂದರೆ – 'ಕುಳಿತುಕೋ' ಎಂದು ಗುರುವಿನ ಮುಖದಿಂದ ಹೇಳಲ್ಪಟ್ಟ ಬಳಿಕ ಗುರುವಿಗೆದುರಾಗಿ ಕುಳಿತುಕೊಳ್ಳಬೇಕು'– ಎಂದರ್ಥ.

ಇದು ನಾವು ಈಗಲೂ ತರಗತಿಗಳಲ್ಲಿ ವಿದ್ಯಾರ್ಥಿಗಳಿಂದ ಅಪೇಕ್ಷಿಸುವ ವರ್ತನೆಯೇ ಆಗಿದೆ. ವಿದ್ಯಾರ್ಥಿಗಳು ಏಕಾಗ್ರಚಿತ್ತದಿಂದ ಪಾಠ ಕೇಳಬೇಕೆಂದು ಅಪೇಕ್ಷಿಸುತ್ತೇವೆ. ಶಿಕ್ಷಕ ತರಗತಿಯನ್ನು ಪ್ರವೇಶಿಸಿದಾಗ ವಿದ್ಯಾರ್ಥಿಗಳು ಎದ್ದುನಿಂತು ಶಿಕ್ಷಕರು ಹೇಳಿದ ನಂತರ ಕೂರುತ್ತಾರೆ. ಆದರೆ ಈಗ ಪಾಠ ಶುರುವಾದ ನಂತರವೂ ಕೆಲವು ವಿದ್ಯಾರ್ಥಿಗಳಾದರೂ ಒಂದಿಷ್ಟು ತಲೆಹರಟೆಯಲ್ಲಿ ತೊಡಗಿರುತ್ತಾರೆ. ಅಂಥಾದ್ದಕ್ಕೆ ಆಗ ಅವಕಾಶವಿರಲಿಲ್ಲ.

ಇದೇ ರೀತಿ – ಗುರುವಿನೊಡನೆ ಹೇಗೆ ಮಾತನಾಡಬೇಕು, ಹೇಗೆ ಮಾತಾಡಬಾರದು, ಗುರುವಿನೆದುರು ಇವನು ಎಂಥ ವಸ್ತು ಧರಿಸಿರಬೇಕು ಎಂಬುದೆಲ್ಲ ಹೇಳಲ್ಪಟ್ಟಿದೆ (2–196 ರಿಂದ 198).

ಗುರುವಿನ ಹೆಸರನ್ನು ಹೇಳಬೇಕಾಗಿ ಬಂದಾಗ ಅವರ ಹೆಸರನ್ನು ಮಾತ್ರ ಹೇಳದೆ 'ಆಚಾರ್ಯ' ಇತ್ಯಾದಿ ಉಪಾಧಿಗಳನ್ನು ಸೇರಿಸಿ ಹೇಳಬೇಕು ಎಂಬುದೂ ಒಂದು ನಿಯಮವಾಗಿತ್ತು. ಗುರುವಿನ ನಡೆ ನುಡಿಗಳನ್ನು ಅನುಕರಣ ಮಾಡಿ ನಗಬಾರದು – 'ನ ಚೈವಾಸ್ಯಾನುಕುರ್ವೀತ ಗತಿ ಭಾಷಿತ ಚೇಷ್ಟಿತಂ' (2–199) – ಎಂದೂ ಹೇಳಲಾಗಿದೆ. ಅಂಥ ವಿದ್ಯಾರ್ಥಿಗಳ ಸಂಖ್ಯೆ ಈಗ ವಿಪರೀತ. ಆಗಲೂ (ಕಡಿಮೆ ಸಂಖ್ಯೆಯಲ್ಲಾದರೂ) ಇದ್ದರು ಎಂಬುದು ಇದರಿಂದ ಸ್ಪಷ್ಟ.

ಗುರುವಿಗೆ ಕಾಣುವ ಹಾಗೆ ಮನಸ್ಸಿಗೆ ಬಂದಂತೆ ಕೂರಬಾರದು ('ಗುರೋಸ್ತು ಚಕ್ಷುರ್ವಿಕ್ಷಯೇ ನ ಯಥೇಷ್ಟಾಸನೋ ಭವೇತ್'– 2–199)– ಎಂದೂ ಮನುಸ್ಮೃತಿ ಹೇಳುತ್ತದೆ. 'ತನ್ನ ಗುರುವಿನ ನಿಂದೆಯಾಗುತ್ತಿದ್ದರೆ ಶಿಷ್ಯ ಕಿವಿಮುಚ್ಚಿಕೊಳ್ಳಬೇಕು ಅಥವಾ ಆ ಜಾಗದಿಂದ

ಎದ್ದು ಹೋಗಬೇಕು' (2–200) ಎಂದು ಇನ್ನೊಂದೆಡೆ ಹೇಳಿದೆ.

–ಇದರ ಹಿಂದೆ ಇರುವ ಮನಃಶಾಸ್ತ್ರೀಯ ಕಾರಣವನ್ನು ತಿಳಿಯುವುದು ಸುಲಭ. ಒಬ್ಬ ಗುರುವಿನ ನಿಂದನೆ ಅವನ ಶಿಷ್ಯನೆದುರು ಆಗುತ್ತಿದ್ದರೆ ಆ ಗುರುವಿನ ಬಗ್ಗೆ ಶಿಷ್ಯನ ಮನೋಭಾವ ಕೆಡುತ್ತದೆ. ಮುಂದೆ ಅವನ ಬಳಿ ಏಕಾಗ್ರತೆಯಿಂದ ಅಧ್ಯಯನ ಮಾಡುವುದು ಇವನಿಗೆ ಕಷ್ಟವಾಗಬಹುದು. ಇವನು ಚಿಕ್ಕವನಾದ್ದರಿಂದ ಪ್ರತಿಭಟಿಸುವುದೂ ಕಷ್ಟ. ಆದ್ದರಿಂದ ಆ ನಿಂದನೆಯನ್ನು ಕಿವಿಯ ಮೇಲೆ ಬೀಳಿಸಿಕೊಳ್ಳದೆ ಇರುವುದೇ ಉತ್ತಮ – ಎನ್ನುವುದು ಇಲ್ಲಿನ ವಿಚಾರ ಸರಣಿ.

ತನಗೆ ವಿದ್ಯೆಯನ್ನು ಬೋಧಿಸಿದ ಮನೆಯ ಹಿರಿಯರಲ್ಲೂ, ಧರ್ಮವನ್ನು ಉಪದೇಶಿಸುವವರಲ್ಲಿ, ಅಧರ್ಮವನ್ನು ತೊಡೆಯುವವರಲ್ಲೂ ಬ್ರಹ್ಮಚಾರಿಯು (ವಿದ್ಯಾರ್ಥಿ) ಹೀಗೆಯೇ ನಡೆದುಕೊಳ್ಳಬೇಕೆನ್ನುತ್ತದೆ ಮನುಸ್ಮೃತಿ –

ವಿದ್ಯಾ ಗುರುಷ್ವೇತದೇವ ನಿತ್ಯಾ ವೃತ್ತಿಃ ಸ್ವಯೋನಿಷಾಃ।
ಪ್ರತಿಷೇಧತ್ಸುಚಾರ್ಧಾನ್ ಹಿತಂ ಚೋಪದಿ ಶತ್ಸ್ವಪಿ॥ (2–206)

### 3. ಯಾರಿಂದ ವಿದ್ಯೆ ಕಲಿಯಬೇಕು?

ಬ್ರಾಹ್ಮಣನೇ ಶಾಸ್ತ್ರಾಧ್ಯಯನಕ್ಕೆ, ಅಧ್ಯಾಪನಕ್ಕೆ ಅರ್ಹ, ವೇದಾಧ್ಯಯನವೇ ಅವನ ತಪಸ್ಸು ಎಂದು ಮನುಸ್ಮೃತಿ ಸ್ಪಷ್ಟವಾಗಿ ಹೇಳಿರುವುದು ನಿಜ. ಆದರೆ ಒಬ್ಬನಿಗೆ ಬೇಕಾದ ವಿದ್ಯೆ ಇತರರಲ್ಲಿದ್ದರೆ ಅವರಿಂದಲೂ ಕಲಿಯಬಹುದು ಎಂದೂ ಅಷ್ಟೇ ಸ್ಪಷ್ಟವಾಗಿ ಹೇಳಿದೆ–

ಶ್ರದ್ಧಾ ಧಾನಃ ಶುಭಾಂ ವಿದ್ಯಾಮಾದದೀತಾವರಾದಪಿ।
ಅಂತ್ಯಾದಪಿ ಪರಂ ಧರ್ಮಂ ಸ್ತ್ರೀ ರತ್ನಂ ದುಷ್ಕುಲಾದಪಿ॥ (೨–೨೩೮)

'ಶ್ರದ್ಧಾವಂತನಾದವನು ಶುಭಕರವಾದ ವಿದ್ಯೆಯನ್ನು ಶೂದ್ರನಿಂದಲಾದರೂ ಕೂಡ ಸಂಪಾದಿಸಿಕೊಳ್ಳಬೇಕು. ಶ್ರೇಷ್ಠವಾದ ಧರ್ಮದ ಉಪದೇಶವನ್ನು ಅರ್ಹನಾದ ಅಂತ್ಯಜನಿಂದ, ಕೆಳಜಾತಿಯಲ್ಲಿ ಹುಟ್ಟಿದ್ದರೂ ಉತ್ತಮಳಾದ ಸ್ತ್ರೀಯಿಂದಲೂ ಸ್ವೀಕರಿಸಬಹುದು.' ಅಂದರೆ ಒಳ್ಳೆಯ ವಿದ್ಯೆಯನ್ನು ನೀಡಬಲ್ಲವನಿಂದ ಅದನ್ನು ಸ್ವೀಕರಿಸಬಹುದು. ಆಗ – ಬೋಧಕನ ಜಾತಿ ಹಾಗೂ ಲಿಂಗವನ್ನು ನೋಡತಕ್ಕದ್ದಲ್ಲವೆಂದು ಇದರ ಸರಳವಾದ ಅರ್ಥ. ಇದು ಇಂದಿನ ಪ್ರಜಾಸತ್ತಾತ್ಮಕ ದೃಷ್ಟಿಕೋನಕ್ಕೂ ಹೊಂದಿಕೆಯಾಗುವಂಥದು. ಶ್ರೇಷ್ಠವಾದ ವಿದ್ಯೆಯನ್ನು ಪಡೆದ ಶುದ್ರರು ಕೆಲವರಾದರೂ ಇದ್ದರೆಂದು ಇದರಿಂದ ಅರ್ಥವಾಗುತ್ತದೆ.

ಆದರೆ–ದೀರ್ಘಕಾಲ ಗುರುಕುಲದಲ್ಲಿ ಒಬ್ಬನು ಇರಬಯಸಿದರೆ ಅವನು ಅಬ್ರಾಹ್ಮಣನಾದ ಗುರುವಿನ ಬಳಿಯಲ್ಲಾಗಲೀ, ಅಥವಾ ವೇದವಿದ್ವಾಂಸನಲ್ಲದ ಬ್ರಾಹ್ಮಣನ ಬಳಿಯಲ್ಲಾಗಲೀ ಹಾಗೆ ಇರಬಾರದು ಎಂದೂ ಮನುಸ್ಮೃತಿ ಹೇಳಿದೆ (2–242).

ಮೇಲ್ನೋಟಕ್ಕೆ ಇದು ವರ್ಣಭೇದ ಎನಿಸುತ್ತದೆ. ಆದರೆ ಹೀಗೆ ಯಾಕೆ ವಿಧಿಸಲಾಗಿತ್ತು ಎಂದು ಯೋಚಿಸಿದರೆ ಇದರಲ್ಲೊಂದು ತರ್ಕಬದ್ಧತೆ ಕಾಣುತ್ತದೆ. ದೀರ್ಘಕಾಲ ಗುರುಕುಲದಲ್ಲಿ ವಾಸಿಸಬಯಸುವುದು ಅಧ್ಯಯನ, ಅಧ್ಯಾಪನ ಸೌಕರ್ಯಕ್ಕಾಗಿ ಮಾತ್ರ, ಬ್ರಾಹ್ಮಣರು ಮಾತ್ರ ಆ ಕಾಲದಲ್ಲಿ ಹಾಗಿರಲು ಸಾಧ್ಯವಿತ್ತು. ಯಾಕೆಂದರೆ – ಅಂಥ ಕೆಲಸಗಳೇ ಅವರ ಜೀವನ ಕರ್ತವ್ಯಗಳಾಗಿದ್ದವು. (ಕ್ಷತ್ರಿಕ, ವೈಶ್ಯ, ಶೂದ್ರರಿಗೆ ಬೇರೆ ಜೀವನೋಪಾಯದ

ಕರ್ತವ್ಯಗಳಿದ್ದದ್ದರಿಂದ ಅವರು ಶಾಸ್ತ್ರಾಧ್ಯಯನದಲ್ಲೇ ಮುಳುಗಿರಲು ಸಾಧ್ಯವಿರಲಿಲ್ಲ). ಬ್ರಾಹ್ಮಣರು ನಿರ್ದಿಷ್ಟ ಆಚರಣೆಗಳನ್ನು ಪಾಲಿಸಲೇ ಬೇಕಿತ್ತು. ನದಿಸ್ನಾನ, ಅಗ್ನಿಕಾರ್ಯ – ಇತ್ಯಾದಿ. ಬ್ರಾಹ್ಮಣೇತರ ವಿದ್ಯಾವಂತನಿಗೆ ಅವೆಲ್ಲ ಮಾಡಲೇಬೇಕಾದ ಕರ್ತವ್ಯಗಳಾಗಿರಲಿಲ್ಲ. ಆದ್ದರಿಂದ ಅಂಥ ಗುರುವಿನಿಂದ ತನಗೆಷ್ಟುಬೇಕೋ ಅಷ್ಟನ್ನು ಕಲಿತುಕೊಂಡ ಬಳಿಕವೂ ಅಲ್ಲಿದ್ದರೆ ಇವನು ತನಗೆ ವಿದಿತವಾದ ಆಚಾರಗಳ ಬಗ್ಗೆ ಉದಾಸೀನನಾಗಿ ಅದನ್ನು ಕೈಬಿಡುವ ಸಂಭವವೇ ಹೆಚ್ಚು. ಇನ್ನೂ ವಿದ್ವಾಂಸನಲ್ಲದ ಬ್ರಾಹ್ಮಣನ ಬಳಿ ದೀರ್ಘಕಾಲ ವಾಸಿಸುವುದರಿಂದ ಯಾವ ವಿದ್ಯಾಲಾಭವೂ ಆಗದು. ಆದ್ದರಿಂದಲೇ ಅಂಥವರ ಬಳಿ ಅನಗತ್ಯ ದೀರ್ಘಕಾಲದ ವಾಸ ಕೂಡದು ಎಂಬುದು ಆ ಕಾಲದ ನಿಯಮವಾಗಿತ್ತು.

**4. ಗುರುದಕ್ಷಿಣೆ (ಫೀ)**

ಗುರುಕುಲ ಪದ್ಧತಿಯಲ್ಲಿ ನಿರ್ದಿಷ್ಟ ಶಿಕ್ಷಣ ಶುಲ್ಕವಿರಲಿಲ್ಲ. ರಾಜನಿಂದ ಆಶ್ರಮಗಳಿಗೆ ದೊರೆಯುತ್ತಿದ್ದ ಉಚಿತ ಭೂಮಿ, ಅಲ್ಲಿ ವಿದ್ಯಾರ್ಥಿಗಳಾದವರು ಸಲ್ಲಿಸುತ್ತಿದ್ದ ಶ್ರಮಸೇವೆ, ನೆರೆಹೊರೆಯವರು ಸ್ವ–ಇಚ್ಛೆಯಿಂದ ಕೊಡುತ್ತಿದ್ದ ಧನ–ಧಾನ್ಯ–ಕಾಳುಕಡಿಗಳ ಕಾಣಿಕೆ – ಇವುಗಳಿಂದ ಗುರುಕುಲದ ಖರ್ಚು ನಡೆಯುತ್ತಿತ್ತು. ತನ್ನ ವಿದ್ಯಾಭ್ಯಾಸ ಸಮಯದಲ್ಲಿ ಶಿಷ್ಯನು ಗುರುವಿಗೆ (ತನ್ನ ಸೇವೆಯೊಂದರ ವಿನಃ) ಬೇರಾವ ಕಾಣಿಕೆಯನ್ನೂ ಕೊಡಕೂಡದು ಎಂದು ಮನುಸ್ಮೃತಿ ಸ್ಪಷ್ಟವಾಗಿ ವಿಧಿಸುತ್ತದೆ.

ನಪೂರ್ವಂ ಗುರುವೇ ಕಿಂಚಿದುಪಕುರ್ವೀತ ಧರ್ಮವಿತ್ ।
ಸ್ನಾಸ್ಯಂತು ಗುರುಣಾಜ್ಞಪ್ತಃ ಶಕ್ತ್ಯಾ ಗುರ್ವರ್ಥಮಾಹರೇತ್ ॥ (2–245)

–'(ವಿದ್ಯಾಭ್ಯಾಸ ಪೂರ್ತಿಗೆ) ಮೊದಲೇ ಶಿಷ್ಯನು ಗುರುವಿಗೆ ಗುರುಕಾಣಿಕೆ ಸಮರ್ಪಿಸಬಾರದು. ವಿದ್ಯಾಭ್ಯಾಸ ಪೂರ್ಣವಾದ ನಂತರ, ಗುರುವಿನ ಅಪ್ಪಣೆ ಪಡೆದು ಮನೆಗೆ ತೆರಳುವ ಮುನ್ನ ತನ್ನ ಶಕ್ತಿಗನುಸಾರವಾಗಿ ಗುರುಕಾಣಿಕೆ ಅರ್ಪಿಸಬೇಕು'– ಎಂದು ಇದರ ಅರ್ಥ. ಹೀಗೆ ಅರ್ಪಿಸಬಹುದಾದ ವಸ್ತುಗಳಲ್ಲಿ – ಭೂಮಿ, ಬಂಗಾರ, ಗೋವು, ಕುದುರೆಗಳು, ಕೊಡೆ, ಪಾದರಕ್ಷೆ, ಆಸನ, ಧಾನ್ಯ, ಕಾಯಿಪಲ್ಯ, ವಸ್ತ್ರ– ಇವು ಸೇರಿದ್ದವು (2–246) ಇವುಗಳನ್ನು ಶಿಷ್ಯನು ತನ್ನ ಶಕ್ತ್ಯಾನುಸಾರವಾಗಿ ಕೊಡಬಹುದಿತ್ತು.

**5. ಯಾರಿಗೆ ಕಲಿಸಬೇಕು?**

ಎಂಥ ಶಿಷ್ಯರಿಗೆ ವಿದ್ಯೆಯನ್ನು ಕಲಿಸಬೇಕೆನ್ನುವ ಬಗ್ಗೆ ಮನುಸ್ಮೃತಿ ಕೆಲವು ಶ್ಲೋಕಗಳಲ್ಲಿ ಸ್ಪಷ್ಟವಾಗಿ ಹೇಳಿದೆ. ಅದರ ಸಾರಾಂಶವಿದು–

"ಪ್ರಶ್ನಿಸಿ ತಿಳಿದುಕೊಳ್ಳಬೇಕೆಂಬ ಇಚ್ಛೆ ಇಲ್ಲದವನಿಗೆ, ಅರ್ಥಹೀನ ಪ್ರಸ್ನೆ ಮಾಡುವಂಥ ಅವಿವೇಕಿಗೆ ಏನನ್ನೂ ಹೇಳಬಾರದು. ತಾನು ಓದಿ ತಿಳಿದುಕೊಂಡಿದ್ದರೂ ಬುದ್ಧಿವಂತನಾದವನು ಅಂಥ ಸಂದರ್ಭಗಳಲ್ಲಿ ಏನೂ ಗೊತ್ತಿಲ್ಲದವನಂತೆ ಸುಮ್ಮನಿರಬೇಕು. ಅಧರ್ಮದಿಂದ ಕಲಿಸಿದರೆ ಅಥವಾ ಅಧರ್ಮದಿಂದ ಪ್ರಶ್ನಿಸಿದರೆ ಅವರಿಬ್ಬರಲ್ಲಿ ಒಬ್ಬನು ಸಾಯುತ್ತಾನೆ ಅಥವಾ ಅವರ ಮಧ್ಯೆ ವಿದ್ವೇಷ ಉಂಟಾಗುತ್ತದೆ. 'ಯಾವ ಶಿಷ್ಯನಲ್ಲಿ

ಧರ್ಮಾರ್ಥಗಳಿರುವುದಿಲ್ಲವೋ, ಅಥವಾ ಗುರುಸೇವಾ ಭಾವನೆ ಇರುವುದಿಲ್ಲವೋ, ಅಂಥ ಅಯೋಗ್ಯನಿಗೆ ವಿದ್ಯೆಯನ್ನು ಕಲಿಸಬಾರದು. ಅದು ಬಂಜರು ಭೂಮಿಯಲ್ಲಿ ಬಿತ್ತಿದ ಬೀಜದಂತೆ ನಿಷ್ಫಲವಾಗುತ್ತದೆ' (2–110–112).

ಹೀಗೆ – ಕಲಿಯುವ ಆಸಕ್ತಿ, ಗುರುಸೇವಾ ಭಾವನೆ, ಜಿಜ್ಞಾಸಾ ಪ್ರವೃತ್ತಿ, ಇರುವಂಥವನನ್ನೇ ಶಿಷ್ಯನನ್ನಾಗಿ ಸ್ವೀಕರಿಸಬೇಕೆಂದು ಮನುಸ್ಮೃತಿ ಹೇಳುತ್ತದೆ. ವಿದ್ಯಾದೇವತೆಯು ಬ್ರಾಹ್ಮಣನ ಬಳಿ ಬಂದು ಹೇಗೆ ಹೇಳುತ್ತದಂತೆ –

ಯಮೇವ ತು ಶುಚಿಂ ವಿದ್ಯಾನ್ನಿಯತ ಬ್ರಹ್ಮಚಾರಿಣಂ ।
ತಸ್ಮೈ ಮಾಂ ಬ್ರೂಹಿ ವಿಪ್ರಾಯ ನಿಧಿಪಾಯಾಪ್ರಮಾದಿನೋ ॥ (2–115)

'ಯಾರನ್ನು ನೀನು ಶುಚಿಧಾರಿ, ಬ್ರಹ್ಮಚಾರಿ ಎಂದು ಭಾವಿಸುತ್ತೀಯೋ ಅಂಥ ವಿಪ್ರನಿಗೆ ಹಾಗೂ ಜಾಗ್ರತೆಯಿಂದ ನನ್ನನ್ನು ಕಾಪಾಡುವವನಿಗೆ ಮಾತ್ರ ನನ್ನನ್ನು ದಾನ ಮಾಡು'– ಇಲ್ಲಿ ವಿಪ್ರನಿಗೆ ಎಂದು ಮಾತ್ರವೇ ಉಲ್ಲೇಖವಿದ್ದರೂ ಶೂದ್ರರ ಹೊರತಾಗಿ ಉಳಿದವರೆಲ್ಲರಿಗೂ ಕಲಿಯುವ ಅವಕಾಶವಿತ್ತು ಎಂಬುದು ಸ್ಪಷ್ಟ. ಆದರೆ ವೇದ ವೇದಾಂಗಗಳನ್ನು ವಿವರವಾಗಿ ಕಲಿಯುತ್ತಿದ್ದವರು ಬ್ರಾಹ್ಮಣರು ಮಾತ್ರವೇ. ಅದನ್ನು ಬ್ರಾಹ್ಮಣನ ಕರ್ತವ್ಯ ಎಂದು ಮನುಸ್ಮೃತಿಯಲ್ಲೇ ಇತರೆಡೆ ಹೇಳಲಾಗಿದೆ. ಉಳಿದೆರಡು ವರ್ಣಗಳವರು ವೇದಾಧ್ಯಯನವನ್ನು ಸ್ವಲ್ಪ ಮಟ್ಟಿಗೆ ಮಾತ್ರ ಮಾಡಿ ಅನಂತರ ತಮ್ಮ ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳನ್ನು ಅಭ್ಯಾಸ ಮಾಡುತ್ತಿದ್ದರೆಂದು ಕಾಣುತ್ತದೆ. ವಾಸ್ತವವಾಗಿ 'ಶೂದ್ರರಿಗೆ ಬುದ್ಧಿ ಹೇಳಬಾರದು, ಧರ್ಮೋಪದೇಶ ಮಾಡಬಾರದು'– ಎಂದಿತ್ಯಾದಿಯಾಗಿ ಮನುಸ್ಮೃತಿ ಸ್ಪಷ್ಟವಾಗಿ ಹೇಳಿದೆ –

ನ ಶೂದ್ರಾಯ ಯ ಮತಿಂ ದದ್ಯಾನ್ನೋಚ್ಛಿಷ್ಟಂ ನ ಹವಿಷ್ಕೃತಂ।
ನ ಚಾಸ್ಯೋಪದಿಶೇದ್ಧರ್ಮಂ ನಚಾಸ್ಯ ವ್ರತಮಾದಿಶೀತ ॥ (4–80)

ಹಾಗೆ ಶೂದ್ರರಿಗೆ ಧರ್ಮೋಪದೇಶ / ವ್ರತಾಚರಣೆಗಳ ಉಪದೇಶ ಮಾಡುವವನು ಆ ಶೂದ್ರನೊಡನೆ 'ಅಸಂವೃತ' ವೆಂಬ ನರಕಕ್ಕೆ ಹೋಗುತ್ತಾನೆ. (4–81) ಎಂದೂ ಮನುಸ್ಮೃತಿ ಹೇಳುತ್ತದೆ. ಹೀಗೆ ಸ್ಪಷ್ಟವಾಗಿ ಶೂದ್ರರನ್ನು ವಿದ್ಯೆ / ತಿಳಿವಳಿಕೆಯಿಂದ ದೂರವಿರಿಸಿದ್ದನ್ನು ಒಪ್ಪಲಾಗದು. ಅದೇ ರೀತಿ 'ಧನಾರ್ಜನೆ ಮಾಡುವ ಶಕ್ತಿ ಸಾಮರ್ಥ್ಯಗಳಿದ್ದರೂ ಶೂದ್ರನು ಧನ ಸಂಪಾದನೆ ಮಾಡಬಾರದು. ಹಾಗೆ ಮಾಡಿದರೆ ಅವನು ಬ್ರಾಹ್ಮಣನನ್ನು ಕಡೆಗಣಿಸುತ್ತಾನೆ' ಎಂದೂ ಹೇಳಲಾಗಿದೆ. ('ಶಕ್ತೇನಾಪಿ ಹಿ ಶೂದ್ರೇಣ ನ ಕಾರ್ಯೋ ಧನಸಂಚಯಃ) 10–129. ಇದೂ ಕೂಡ ತಿರಸ್ಕರಿಸಬೇಕಾದ ಮಾತು). ಬಹುಶಃ ಡಾ. ಬಿ.ಆರ್. ಅಂಬೇಡ್ಕರ್ ರವರು ಮನುಸ್ಮೃತಿಯನ್ನು ಸುಟ್ಟುಹಾಕಲು ಇಂಥ ಹಲವು ಮಾತುಗಳೇ ಕಾರಣವಿರಬಹುದು.

## 6. ಓದುವ / ಓದಿಸುವ ಕಾಲ

ಯಾವ ವೇಳೆಯಲ್ಲಿ ಓದಬೇಕು, ಓದಿಸಬೇಕು ಎಂಬುದನ್ನು ಮನುಸ್ಮೃತಿಯ ನಾಲ್ಕನೆಯ ಅಧ್ಯಾಯದಲ್ಲಿ ಹೇಳಲಾಗಿದೆ. ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು ಶೌಚವಿಧಿಗಳನ್ನು ಪೂರೈಸಿ ಧರ್ಮಾರ್ಥಗಳನ್ನು ಕುರಿತು, ವೇದ ತತ್ವಾರ್ಥಗಳನ್ನು ಕುರಿತು, ಶರೀರಕ್ಕಾಗುವ ಕಷ್ಟಗಳ

ಮೂಲ ಕಾರಣಗಳನ್ನು ಕುರಿತು ಚಿಂತನೆಮಾಡಬೇಕು (4–92). ಶ್ರಾವಣ / ಭಾದ್ರಪದ ಮಾಸದ ಹುಣ್ಣಿಮೆಯಂದು ಉಪಾಕರ್ಮ ಹೋಮವನ್ನು ಮಾಡಿ ಶ್ರಮಪಟ್ಟು ಐದೂವರೆ ತಿಂಗಳ ಕಾಲ ವೇದಗಳನ್ನು ಅಧ್ಯಯನ ಮಾಡಬೇಕು (4–95), ವೇದವನ್ನು ನಸುಕಿನಲ್ಲಿ ಓದಿದ ನಂತರ ಬಳಲಿಕೆಯಾಗಿದೆ ಎಂದು ಮಲಗಬಾರದು (4–99). ಮಳೆಗಾಲದಲ್ಲಿ ಗಾಳಿ ಸಶಬ್ದವಾಗಿ ಬೀಗುತ್ತಿರುವ ರಾತ್ರಿಯಲ್ಲಿ, ಧೂಳೆಬ್ಬಿಸುತ್ತಾ ಗಾಳಿ ಬೀಸುವ ಹಗಲಿನಲ್ಲಿ ವೇದಗಳನ್ನೂ ಕಲಿಯಬಾರದು, ಕಲಿಸಬಾರದು (4–102). ಮಿಂಚು ಗುಡುಗು ಸಹಿತ ಮಳೆಬರುತ್ತಿರುವಾಗ, ಉಲ್ಕಾಪಾತವಾಗುತ್ತಿರುವಾಗ, ಆ ಸಮಯದಿಂದಾರಂಭಿಸಿ ಮರುದಿನ ಅದೇ ಸಮಯದವರೆಗೆ ವೇದಾಧ್ಯಯನ ಮಾಡಬಾರದು, ಮಾಡಿಸಬಾರದು (4–103)' ಹೀಗೆ ಹಲವು ಸಂದರ್ಭಗಳನ್ನು ಮನುಸ್ಮೃತಿ 'ಅನಧ್ಯಯನ ಕಾಲ' ವೆಂದು ಸೂಚಿಸಿದೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ – ಸೂಕ್ತವಾದ ಭೌತಿಕ ಹಾಗೂ ಮಾನಸಿಕ ಪರಿಸರವನ್ನು ಶಾಸ್ತ್ರಕಾರರು ಗಮನಿಸಿರುವುದು (suitable physical and psychological environments) ಎಂಥ ಪರಿಸರ ಹಾಗೂ ಪರಿಸ್ಥಿತಿಯಲ್ಲಿ ಓದಿದರೆ / ಓದಿಸಿದಂತೆ ಚೆನ್ನಾಗಿ ಮನವರಿಕೆಯಾಗುತ್ತದೋ ಅಂಥ ಸಂದರ್ಭದಲ್ಲೇ ಕಲಿಸುವಿಕೆ ಮತ್ತು ಕಲಿಯುವಿಕೆ ನಡೆಯಬೇಕೆಂಬುದು ಇದರ ಆಶಯ.

**ಸಮಾರೋಪ:**

ಹೀಗೆ ಮನುಸ್ಮೃತಿಯು ಶಿಕ್ಷಣಕ್ಕೆ ಸಂಬಂಧಿಸಿದ ಅನೇಕ ಅಂಶಗಳನ್ನು ಒಂದೆಡೆಯಲ್ಲಿ ಸಂಗ್ರಹಿಸಿಕೊಟ್ಟಿದೆ. ಅದರಲ್ಲಿ ಕೆಲವು ಪರಿಕಲ್ಪನೆಗಳನ್ನು ಮಾತ್ರ ಪ್ರಸ್ತುತ ಸಂಪ್ರಬಂಧದಲ್ಲಿ ವಿಶ್ಲೇಷಿಸಲು ಸಾಧ್ಯವಾಗಿದೆ. ಈವರೆಗಿನ ವಿಶ್ಲೇಷಣೆಯ ಒಟ್ಟು ಸಾರಾಂಶವನ್ನು ಹೀಗೆ ಸಂಗ್ರಹಿಸಬಹುದು–

1. ಅಧ್ಯಯನ ಎಂದರೆ ಮುಖ್ಯವಾಗಿ ವೇದ, ವೇದಾಂಗಗಳದ್ದೇ. ಆದರೆ ಬ್ರಾಹ್ಮಣನು ಅವುಗಳನ್ನೇ ಅಭ್ಯಾಸ ಮಾಡಿದರೆ ಉಳಿದೆರಡು ವರ್ಣಗಳವರು ಅದನ್ನು ಒಂದು ಹಂತದವರೆಗೆ ಅಭ್ಯಾಸಿಸಿ, ನಂತರ ತಮ್ಮ ಕುಲೋಚಿತವಾದ ಅನ್ಯವಿದ್ಯೆಗಳನ್ನು ಕಲಿಯಬಹುದು.
2. ಶೂದ್ರನಿಗೆ ವೇದಾಧ್ಯಯನದ ಅಧಿಕಾರವಿಲ್ಲ. ಬ್ರಾಹ್ಮಣರು ಅವರ ಬಳಿ ವೇದ ಓದಬಾರದು. ಆದರೆ ಅವರು ಇತರರಿಗೆ ಉಪಕಾರವಾಗುವಂಥ ವಿದ್ಯೆಯನ್ನು (ಕೆತ್ತನೆ, ಶಿಲ್ಪ, ಚಿತ್ರಕಲೆ, ಸೇವೆಯ ರೀತಿ – ಇತ್ಯಾದಿ) ಅದನ್ನು ಬಲ್ಲವರಿಂದ ಕಲಿಯಬಹುದು.
3. ಅಧ್ಯಯನ / ಅಧ್ಯಾಪನಗಳು, ಸೂಕ್ತವಾದ ಶಾಂತ ವೇಳೆ ಮತ್ತು ಸನ್ನಿವೇಶಗಳಲ್ಲಿ ನಡೆಯಬೇಕು. ಹಾಗಿಲ್ಲದ ದಿನಗಳು ಅನಧ್ಯಯನದ ದಿನಗಳಾಗಿರುತ್ತವೆ.
4. ಶಿಷ್ಯನು ಗುರುವಿನಲ್ಲಿ ಗೌರವಾದರ ಹೊಂದಿರಬೇಕು. ಅವರ ಬಳಿ ಚೆನ್ನಾಗಿ ನಡೆದುಕೊಳ್ಳಬೇಕು.
5. ಶಿಷ್ಯನು (= ಅವನ ಪೋಷಕರು) ಶಕ್ತ್ಯಾನುಸಾರವಾಗಿ ಗುರುದಕ್ಷಿಣೆ ವಿದ್ಯಾಭ್ಯಾಸದ ಕೊನೆಯಲ್ಲಿ ಕೊಡಬೇಕು.
6. ಗುರು, ಉಪಾಧ್ಯಾಯ, ಆಚಾರ್ಯ – ಈ ಶಬ್ದಗಳಿಗೆ ವಿಭಿನ್ನವಾದ ಅರ್ಥ ವ್ಯಾಪ್ತಿ

ಇದೆ. ಆಚಾರ್ಯ ಎಂಬುದು ಅತ್ಯುನ್ನತ ಸ್ಥಾನ.

7. ಉಪನಯನವೆಂಬುದು ವಿದ್ಯಾಭ್ಯಾಸದ ಆರಂಭಕ್ಕೆ ಮುನ್ನ ಆಗಬೇಕಾದ ಒಂದು ಸಂಸ್ಕಾರ. ಶೂದ್ರನಿಗೆ ಯಾವ ಸಂಸ್ಕಾರಗಳೂ ಇರುವುದಿಲ್ಲ. ಅವನಿಗೆ ಅಧ್ಯಯನದ ಅವಕಾಶಗಳನ್ನು ನಿರಾಕರಿಸಲು ಇದೂ ಒಂದು ಕಾರಣ.

8. ಕಲಿಸಬೇಕಾದ ಗುರುವಿಗೆ ಕೆಲವು ಅರ್ಹತೆಗಳಿರಬೇಕಾದಂತೆ ಕಲಿಯಬೇಕಾದ ಶಿಷ್ಯನಿಗೂ ಕೆಲವು ಅರ್ಹತೆಗಳಿರಬೇಕಾಗುತ್ತದೆ. ಈಗಿನ ಪರಿಭಾಷೆಯಲ್ಲಿ entry behaviour ಇದನ್ನು ಎಂದು ಕರೆಯಬಹುದು.

– ಹೀಗೆ ಮನುಸ್ಮೃತಿಯಲ್ಲಿನ ಶೈಕ್ಷಣಿಕ ವಿಚಾರಗಳನ್ನು ನಾವು ಗಮನಿಸಿ ವಿಶ್ಲೇಷಿಸಬೇಕಾಗುತ್ತದೆ. ಈ ಬಗ್ಗೆ ಚರ್ಚಿಸಬೇಕಾದ ಅನೇಕ ಸಂಗತಿಗಳಿರುತ್ತವೆ. ಅವು ಸುದೀರ್ಘ ಚರ್ಚೆಯನ್ನು ಬೇಡುವಂಥವು. ಮುಖ್ಯವಾಗಿ 'ಮನು' ಎಂಬುವನು ಒಬ್ಬನೇ ವ್ಯಕ್ತಿಯಲ್ಲ. ಕಾಲಕಾಲಕ್ಕೆ ನಿಯಮಾವಳಿಗಳನ್ನು ರೂಪಿಸುವ, ಕ್ರೋಢೀಕರಿಸುವ ಎಲ್ಲರನ್ನೂ ಆ ಶಬ್ದ ಸಂಕೇತಿಸುತ್ತದೆ ಎಂಬುದು ಮುಖ್ಯ. ಈ ಬಗ್ಗೆ ಕನ್ನಡದಲ್ಲಿ ನಡೆದಿರುವ ಅಧ್ಯಯನಗಳು ಕಡಿಮೆ. ಅಲ್ಲಿನ ಶೈಕ್ಷಣಿಕ ದೃಷ್ಟಿಕೋನವನ್ನೂ ವಿಶ್ಲೇಷಣೆಗೊಳಪಡಿಸುವ ಒಂದು ಆರಂಭಿಕ ಪ್ರಾಮಾಣಿಕ ಪ್ರಯತ್ನವೇ ಈ ಸಂಪ್ರಬಂಧ.

ಉರಿದು ಕಂತುವ ಸೂರ್ಯ ಮೇಲಿರೆ
ಹರಿದು ಸಾಗುವ ನದಿಯು ಕೆಳಗೆ
ಸರಿವ ಕಾಲಕೆ ಸಡ್ಡು ಹೊಡೆಯುತೆ
ಸರಿಯದುಳಿದಿದೆ ಸೇತುವೆ

# ಪರಿಸಂಖ್ಯಾ ಪರಿಚಯ

**ಯಲ್ಲಾಪುರ ಕೃಷ್ಣ ಶರ್ಮಾ**
10, 8ನೇ ಮುಖ್ಯರಸ್ತೆ, 3ನೇ ಹಂತ, ಗಿರಿನಗರ, ಬೆಂಗಳೂರು – 85

ವೇದದಲ್ಲಿರುವ ವಿಧಿವಾಕ್ಯಗಳ ಅರ್ಥವಿಶ್ಲೇಷಣೆಗಾಗಿ ಪೂರ್ವಮೀಮಾಂಸಾ ಶಾಸ್ತ್ರದಲ್ಲಿ ಅನೇಕಾನೇಕನ್ಯಾಯಗಳನ್ನು, ಕಟ್ಟಳೆಗಳನ್ನು ನಿಗದಿಪಡಿಸಿದ್ದಾರೆ. ಈ ಕಟ್ಟಳೆಗಳ ಪೈಕಿ ಪರಿಸಂಖ್ಯಾವಿಧಿ ಎಂಬುದೂ ಒಂದು. ಪರಿಸಂಖ್ಯೆಯ ಸ್ವರೂಪ ಕೊಂಚ ತೊಡಕಿನದು. ಮೇಲ್ನೋಟದ ಓದಿನಲ್ಲಿ ಅದು ನಮಗೆ ಕಾಣಿಸಿಕೊಳ್ಳುವುದೇ ಇಲ್ಲ. ಗುರುಮುಖದ ಅಧ್ಯಯನ ಹಾಗೂ ಆರೆಂಟು ಉದಾಹರಣೆಗಳನ್ನು ಮನಗಂಡು ಅವುಗಳ ಸ್ವರೂಪ ಹಾಗೂ ಅರ್ಥವಿಶೇಷಗಳನ್ನು ಮನಸ್ಸಿಗೆ ತಂದುಕೊಂಡು ಚೆನ್ನಾಗಿ ಮೆಲುಕು ಹಾಕಿದಾಗ ಮಾತ್ರ ಪರಿಸಂಖ್ಯೆಯನ್ನು ಅರಿತುಕೊಳ್ಳಲು ಸಾಧ್ಯ. ಇಷ್ಟಾದರೂ ಕೂಡ ಬೇರೆ ಬೇರೆ ಸಂದರ್ಭಗಳಲ್ಲಿ ಪ್ರಯುಕ್ತವಾಗಿರುವ ಪರಿಸಂಖ್ಯೆಯ ಪರಿಚಯವು ಮೇಲ್ನೋಟದ ಸಾಮಾನ್ಯವಾದ ಓದಿಗೆ ಒಮ್ಮೆಲೇ ನಮ್ಮ ಗಮನಕ್ಕೆ ಬಂದೀತೆಂದು ಹೇಳಲಾಗದು. ಕೊಂಚ ಕುರಿತೋದಿದಾಗ ಮಾತ್ರ ಅದು ನಮಗೆ ಮನವರಿಕೆಯಾದೀತು ಅಷ್ಟೇ. ಪೂರ್ವೋತ್ತರ ಮೀಮಾಂಸಶಾಸ್ತ್ರಗಳಲ್ಲೂ ಧರ್ಮಶಾಸ್ತ್ರದಲ್ಲೂ ಕೂಡ ಈ ಪರಿಸಂಖ್ಯೆಯ ಪ್ರಯೋಗ ವ್ಯವಹಾರಗಳು ಹೆಚ್ಚಾಗಿ ಕಂಡುಬರುತ್ತವೆ. ಇತರ ಶಾಸ್ತ್ರಗಳಲ್ಲೂ ಕೂಡ ಅಪರೂಪವಾಗಿ ಪರಿಸಂಖ್ಯೆಯ ಬಳಕೆ ಇದ್ದೇ ಇದೆ.

ಪರಿಸಂಖ್ಯಾ ಸ್ಥಳದಲ್ಲಿ ಪ್ರಯುಕ್ತವಾದ ಪದಗಳ ಮೇರೆಗೆ ವಿಧಿರೂಪದ ಅರ್ಥವೇ ವಾಚ್ಯವಾಗಿ ತೋರಿಬರುತ್ತದೆ. ಹಾಗಿದ್ದರೂ ಈ ವಾಚ್ಯಾರ್ಥವು ಅಲ್ಲಿ ಆಗಲೇ ಇನ್ನಾವುದೋ ಬಗೆಯಲ್ಲಿ ಪ್ರಾಪ್ತವೇ ಆಗಿರುತ್ತದೆಯಾದ್ದರಿಂದ ಪುನಃ ವಿಧಿಗೆ ವಿವಕ್ಷೆಯಿಲ್ಲ. ಬದಲಾಗಿ ವಾಚ್ಯಾರ್ಥಕ್ಕೆ ಸಂಬಂಧಿಸಿದ, ಯಾವುದೋ ಬಗೆಯಲ್ಲಿ ಅಲ್ಲಿ ಉಪಸ್ಥಿತವಾಗುವ ಇನ್ನೊಂದು ಅರ್ಥವನ್ನು (ಕ್ರಿಯೆಯನ್ನು) ನಿಷೇಧಿಸುವುದೇ ಪರಿಸಂಖ್ಯೆಯ ಉದ್ದೇಶ ಎಂದು ಹೇಳುತ್ತಾರೆ. ನಿಷೇಧವು ಅಲ್ಲಿರುವ ಪದಗಳಿಂದ ವಾಚ್ಯವಲ್ಲದ್ದರಿಂದ ಲಕ್ಷಣಾವೃತ್ತಿಯ ಮೂಲಕ ಆ ಅರ್ಥವನ್ನು ಗ್ರಹಿಸಬೇಕು. ಹೀಗೆ ಈ ಲಾಕ್ಷಣಿಕ ಪರಿಸಂಖ್ಯಾಸ್ಥಳದಲ್ಲಿ ಶ್ರುತಹಾನಿ ಅಶ್ರುತಕಲ್ಪನಾ ಪ್ರಾಪ್ತಬಾಧ ಎಂಬ ಮೂರು ದೋಷಗಳು ಗಂಟುಬೀಳುತ್ತವೆ. ವಾಕ್ಯಾರ್ಥನಿರ್ವಾಹವೇ ಮಹಾಪ್ರಯೋಜನವಾದುದರಿಂದ ಈ ದೋಷ ಅನಿವಾರ್ಯ ಎಂದು ಹೇಳುತ್ತಾರೆ.

ತೈತ್ತರೀಯ ಶಿಕ್ಷಾವಲ್ಲಿಯಲ್ಲಿ ಸತ್ಯಂವದ ಧರ್ಮಂಚರ ಎಂಬೀ ವಾಕ್ಯಗಳಿವೆ. ಸತ್ಯವನ್ನು ನುಡಿ, ಧರ್ಮವನ್ನು ಆಚರಿಸು ಎಂಬುದಾಗಿ ಇಲ್ಲಿ ನೇರವಾದ ಅರ್ಥವನ್ನು ನಾವು ಗ್ರಹಿಸುತ್ತೇವೆ. ಈ ಅರ್ಥಗಳು ಲೋಕವ್ಯವಹಾರದಿಂದಲೇ ತಿಳಿದು ಬರುತ್ತವೆಯಾಗಿ ಪುನಃ ವಿಧಿಯು ಬೋಧಿಸಬೇಕಾದ ಅಗತ್ಯವಿಲ್ಲ. ಆದರೆ ಲೋಕದಲ್ಲಿ ಸ್ವೇಚ್ಛಾಪ್ರವೃತ್ತಿಯಿಂದಾಗಿ ಸುಳ್ಳಾಡುವಿಕೆ, ಅಧರ್ಮಾಚರಣೆಗಳಲ್ಲಿ ಜನರು ಪ್ರವೃತ್ತರಾಗುವ ಸಂಭವವಿದೆ. ಅದನ್ನು

ತಡೆಗಟ್ಟಲು ನಿಷೇಧವು ಅಪೇಕ್ಷಿತ. ಆದ್ದರಿಂದ ಸತ್ಯಂವದ ಧರ್ಮಂಚರ ಎಂಬ ವಾಕ್ಯಗಳಿಗೆ ಲಕ್ಷಣಯಾ 'ಅಸತ್ಯಂ ಮಾ ವದ' 'ಅಧರ್ಮಂ ಮಾ ಚರ' ಎಂಬುದಾಗಿ ನಿಷೇಧವೇ ವಿವಕ್ಷಿತವೆಂದು ಹೇಳುತ್ತಾರೆ. "ಆತ್ಮಾವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿಧಿಧ್ಯಾಸಿತವ್ಯ" ಎಂಬೀ ಉಪನಿಷದ್‌ವಾಕ್ಯದಲ್ಲೂ ಪರಿಸಂಖ್ಯೆಯನ್ನು ಹೇಳುತ್ತಾರೆ. ನಿಷೇಧವನ್ನು ತಿಳಿಸುವ ಪದಗಳು ಇಲ್ಲಿ ಪ್ರಯುಕ್ತವಾಗಿಲ್ಲ. ಲಕ್ಷಣಯಾ ಗ್ರಹಿಸಬೇಕು. ಸಾಮಾನ್ಯರಿಗೆ ಇದು ಕೊಂಚ ಕ್ಲಿಷ್ಟ. ಪರಿಸಂಖ್ಯಾವಾಕ್ಯದಲ್ಲಿ ವಾಚ್ಯವಾಗಿ ತೋರುವ ಕ್ರಿಯೆಗೆ ವಿರುದ್ಧವಾದ ಕ್ರಿಯೆಯ ನಿಷೇಧವು ಲಕ್ಷಣಯಾ ಗೃಹೀತವಾಗುತ್ತದೆ. ಸತ್ಯಂವದ ಎಂಬಲ್ಲಿ ಸುಳ್ಳು ಆಡಬೇಡ ಎಂಬ ಅರ್ಥವು ವಿವಕ್ಷಿತ. ಕ್ರಿಯಾನಿಷೇಧವೆನಿಸುವಂತಿದ್ದರೂ ಆ ಕ್ರಿಯೆಗೆ ಆಶ್ರಯವಾದ ದ್ರವ್ಯ, ಗುಣಗಳೂ ಅಲ್ಲಿ ಇರಲೇಬೇಕು. ಪ್ರಕೃತಕ್ಕೆ ಸಂಬಂಧಪಟ್ಟಂತೆ ಎರಡು ವಿಷಯಗಳು (ದ್ರವ್ಯಗುಣಕ್ರಿಯಾರೂಪದ) ಒಟ್ಟಿಗೆ ಪ್ರಾಪ್ತವಾದಾಗ, ತೋರಿಬಂದಾಗ ಒಂದನ್ನು ನಿಷೇಧಿಸುವುದೇ ಪರಿಸಂಖ್ಯೆ. ವಿಂಗಡಿಸು, ಬೇರ್ಪಡಿಸು, ಕೈಬಿಡು, ಬದಿಗಿಡು, ತಿರಸ್ಕರಿಸು, ನಿಷೇಧಿಸು ಎಂಬೀ ಬಗೆಯಲ್ಲಿ ಪರಿಸಂಖ್ಯೆಯನ್ನು ಪರಿಚಯಿಸಬಹುದು. ಎರಡರಲ್ಲಿ ಒಂದನ್ನು ನಿಷೇಧಿಸು ಎಂದರ್ಥ. ನಿಷೇಧವನ್ನು ತಿಳಿಸುವ ಪದಗಳು ಪ್ರಯುಕ್ತವಾಗಿರುವುದಿಲ್ಲಾದ್ದರಿಂದ ಜನಸಾಮಾನ್ಯರ ಮೇಲ್ನೋಟದ ಓದಿಗೆ ಈ ಪರಿಸಂಖ್ಯೆಯ ಅರಿವಾಗುವುದು ಅಪರೂಪವೇ ಸರಿ.

ಪಂಚ ಪಂಚನಖಾ ಭಕ್ಷ್ಯಾಃ (ವಾ.ರಾ.ಕಿಷ್ಕಿಂಧಾಕಾಂಡ : 17–27) ಎಂಬೀ ವಾಕ್ಯವನ್ನು ಲಾಕ್ಷಣಿಕಪರಿಸಂಖ್ಯಾವಿಧಿಗೆ ಉದಾಹರಿಸುತ್ತಾರೆ. ವಾಲಿವಧ ಸಂದರ್ಭದಲ್ಲಿ ವಾಲಿಯು ಶ್ರೀರಾಮನಿಗೆ ಹೇಳಿದ ಮಾತಿದು. ಈ ವಾಕ್ಯದಲ್ಲಿ ಮೇಲ್ನೋಟಕ್ಕೆ ನಿಷೇಧವೇನೂ ತೋರುವುದಿಲ್ಲ. "ಮಾಂಸಾಹಾರಿಗಳು ಇಲ್ಲಿ ಹೆಸರಿಸಿದ ಐದುಗುರಿನ ಐದು ಪ್ರಾಣಿಗಳನ್ನು ತಿನ್ನಬಹುದು" ಎಂಬುದಿಲ್ಲಿ ನಮಗೆ ತೋರುವ ಸರಳ ಅರ್ಥ. ಆದರೆ ಈ ಅರ್ಥಕ್ಕೆ ಇಲ್ಲಿ ವಿವಕ್ಷೆ ಇಲ್ಲ. ಯಾಕೆಂದರೆ ರಾಗತಃ ಪ್ರಾಪ್ತವಾಗುವ ಮಾಂಸಭಕ್ಷಣಕ್ಕೆ ವಿಧಿಯ ಅವಶ್ಯಕತೆ ಇಲ್ಲ. ಆದರೆ ಇಲ್ಲಿ ಹೆಸರಿಸದೇ ಇರುವ ಇನ್ನೂ ಹಲವು ಐದುಗುರಿನ ಪ್ರಾಣಿಗಳಿವೆ. ಅವುಗಳ ಮಾಂಸಭಕ್ಷಣೆಯಲ್ಲೂ ಕದಾಚಿತ್ ಆಶೆಯುಂಟಾಗಬಹುದು. ಅದನ್ನು ನಿಷೇಧಿಸುವುದಕ್ಕೋಸ್ಕರ ಈ ವಾಕ್ಯ ಹೊರಟಿದೆ. "ಈ ಹೇಳಿದ ಐದುಗುರಿನ ಐದು ಪ್ರಾಣಿಗಳ ಹೊರತಾಗಿ ಇನ್ನುಳಿದ ಐದುಗುರಿನ ಪ್ರಾಣಿಗಳನ್ನು ತಿನ್ನಬಾರದು" ಎಂಬಂತಹ ನಿಷೇಧವು ಪಂಚ ಪಂಚಾನಖಾ ಭಕ್ಷ್ಯಾಃ ಎಂಬೀ ವಾಕ್ಯದ ವಿವಕ್ಷಿತಾರ್ಥ ಎಂದು ಹೇಳುತ್ತಾರೆ. ಹೀಗೆ ಪರಿಸಂಖ್ಯಾ-ವಾಕ್ಯದ ಅರ್ಥವು ಕೊಂಚ ತೊಡಕಿನದ್ದಾದರಿಂದ ಕೆಲವೊಮ್ಮೆ ನಾವು ಮೇಲ್ನೋಟದ ಅರ್ಥವನ್ನು ಮಾತ್ರ ಗ್ರಹಿಸಿ ಮುಂದೆ ಹೋಗಿಬಿಡುತ್ತೇವೆ.

ಕನ್ನಡದಲ್ಲೂ ಪರಿಸಂಖ್ಯಾ ಪ್ರಯೋಗಗಳು ಇರಬಹುದು. ನಾನು ನೋಡಿದ ಒಂದು ಪ್ರಯೋಗವನ್ನು ಮಾತ್ರ ಇಲ್ಲಿ ಉದಾಹರಿಸಬಯಸುತ್ತೇನೆ.

ಧ್ವನಿಯೆಂಬುದಳಂಕಾರಂ
ಧ್ವನಿಯಿಸುಗುಂ ಶಬ್ದದಿಂದಂ। ಅರ್ಥದೆ ದೂಷ್ಯಂ ।
ನೆನೆವುದಿದನಿಂತು ಕಮಲದೊಳ್
ಅನಿಮಿಷಯುಗಮೊಪ್ಪಿತೋರ್ಪುದಿಂತಿದು ಚೋದ್ಯಂ ॥ ಕರಾಮಾ 3-209

ಸಂಸ್ಕೃತದ ಧ್ವನಿಕಾವ್ಯಲಕ್ಷಣಕಾರಿಕೆಯು ಮಾರ್ಗಕಾರನ ಧ್ವನಿಕಂದಕ್ಕೆ ಪ್ರೇರಣೆಯನ್ನೊದಗಿಸಿದೆ. ಧ್ವನಿಕಾವ್ಯಲಕ್ಷಣದ ಅರ್ಥವನ್ನು ಮನಸ್ಸಿಗೆ ತಂದುಕೊಳ್ಳದಿದ್ದರೆ ಧ್ವನಿಕಂದವು ಅರ್ಥವಾಗುವುದೇ ಇಲ್ಲ. ಆದ್ದರಿಂದ ಧ್ವನಿಕಂದದ ಓದಿಗೆ ಹಿನ್ನೆಲೆಯಾಗಿ ಧ್ವನಿಕಾವ್ಯಲಕ್ಷಣಕಾರಿಕೆಯ ಅರ್ಥವನ್ನು ಮನಸ್ಸಿಗೆ ತಂದುಕೊಳ್ಳಬೇಕಾದುದು ಅನಿವಾರ್ಯ. ಧ್ವನಿಕಾವ್ಯಲಕ್ಷಣವಾಕ್ಯ ಹೀಗಿದೆ :–

ಯತ್ರಾರ್ಥಃ ಶಬ್ದೋ ವಾ ತಮರ್ಥಮುಪಸರ್ಜನೀಕೃತಸ್ವಾರ್ಥೌ ।
ವ್ಯಂಕ್ತಃ ಕಾವ್ಯ ವಿಶೇಷಃ ಸ ಧ್ವನಿರಿತಿ ಸೂರಿಭಿಃ ಕಥಿತಃ ॥

– ಧ್ವನ್ಯಾಲೋಕಃ 1–12

"ಶಬ್ದದಂತೆಯೇ ಅರ್ಥವೂ ಕೂಡ ವ್ಯಂಜನಾವೃತ್ತಿಯ ಮೂಲಕ ಅರ್ಥಾಂತರವನ್ನು ಧ್ವನಿಸುತ್ತದೆ'' ''ಅರ್ಥಃ ತಮರ್ಥಂ ವ್ಯನಕ್ತಿ'' ಎಂಬುದಾಗಿ ಈ ಮೇಲಿನ ಧ್ವನಿಕಾವ್ಯಲಕ್ಷಣವಾಕ್ಯದಲ್ಲಿ ಹೇಳಿದೆ. ಇದು ಧ್ವನಿ ಪ್ರಸ್ಥಾನದ ಸಿದ್ಧಾಂತ. ಧ್ವನಿ ಪ್ರಸ್ಥಾನವು ವಿದ್ವಲ್ಲೋಕದಲ್ಲಿ ಮಾನ್ಯವಾಗುವವರೆಗೂ ಕೂಡ "ಅರ್ಥಃ ಅರ್ಥಾಂತರಂ ವ್ಯನಕ್ತಿ" ಎಂಬ ಮಾತು ವಿದ್ವತ್‌ಪ್ರಪಂಚದಲ್ಲಿ ಗ್ರಾಹ್ಯವಾಗಿರಲಿಲ್ಲ. ಶಬ್ದವು ಮಾತ್ರವೇ ಅರ್ಥಬೋಧಕ ಅರ್ಥಪ್ರತ್ಯಾಯಕ ಎಂಬುದೇ ರೂಢಿಯಾಗಿತ್ತು.

ನ ಸೋಽಸ್ತಿ ಪ್ರತ್ಯಯೋ ಲೋಕೇ ಯಃ ಶಬ್ದಾನುಗಮಾದೃತೇ ।
ಅನುವಿದ್ಧಮಿದ ಜ್ಞಾನಂ ಸರ್ವಂ ಶಬ್ದೇನ ಭಾಸತೇ ॥

– ಭರ್ತೃಹರಿಃ ವಾಕ್ಯಪದೀಯ

ಅರಿವೆಲ್ಲಕ್ಕೂ ನುಡಿಯ ಹಿನ್ನೆಲೆ ಬೇಕೇ ಬೇಕು ಎಂಬುದು ಶಾಸ್ತ್ರದ ಕಟ್ಟಳೆ. ಅದನ್ನು ಮೀರಿ ಇದೀಗ ಧ್ವನಿ ಪ್ರಸ್ಥಾನವು (ಕ್ರಿಸ್ತ ಶಕ–900) ಅರ್ಥವೂ ಕೂಡ ವ್ಯಂಜನಾವೃತ್ತಿಯ ಮೂಲಕ ಅರ್ಥಾಂತರವನ್ನು ತಿಳಿಸುತ್ತದೆ, ಧ್ವನಿಸುತ್ತದೆ ಎಂಬ ಅಭಿಪ್ರಾಯವನ್ನು ಮಂಡಿಸಹೊರಟಾಗ ಕೆಲವರಿಗೆ ಅದು ಹಿಡಿಸಲಿಲ್ಲ. ಮುಖ್ಯವಾಗಿ ಶಬ್ದ ಅರ್ಥ ಎರಡರಲ್ಲೂ ವ್ಯಂಜನಾ ಎಂಬ ವೃತ್ತಿಯೊಂದನ್ನು ಹೊಸದಾಗಿ ಕಲ್ಪಿಸಹೊರಟದ್ದು ಕೆಲವರ ತಕರಾರಿಗೆ ಕಾರಣವಾಯಿತು. ಅಭಿಧಾ ಲಕ್ಷಣಾ ಎಂಬೀ ಎರಡು ಶಬ್ದವೃತ್ತಿಗಳನ್ನು ಶಾಸ್ತ್ರಕಾರರೆಲ್ಲರೂ ಒಪ್ಪಿದ್ದಾರೆ. ಆ ಎರಡು ವೃತ್ತಿಗಳಿಂದಲೇ ಕಾವ್ಯದಲ್ಲೂ ಕೂಡ ವ್ಯವಹಾರ ನಿರ್ವಾಹ ವಾಗುತ್ತಿರುವ ಇದೀಗ ಹೊಸದಾಗಿ ಕಲ್ಪಿಸಿದ ವ್ಯಂಜನಾವೃತ್ತಿಯಿಂದ ಆಗಬೇಕಾದ್ದೇನೂ ಇಲ್ಲ ಎಂಬುದಾಗಿ ವಿದ್ವಾಂಸರು ಕೆಲವರು ವ್ಯಂಜನಾವೃತ್ತಿಯ ಬಗೆಗೆ ಅಸಹನೆಯನ್ನು ವ್ಯಕ್ತಪಡಿಸಿದರು. ಧ್ವನಿವಿರೋಧ ಧ್ವನಿವಿರೋಧಿಗಳು ಎಂಬ ಮಾತಿಗೆ ವ್ಯಂಜನಾವೃತ್ತಿಯ ಬಗೆಗೆ ಅಸಹನೆ ಎಂದಿಷ್ಟೇ ಅರ್ಥ. ಮಾರ್ಗಕಾರನೂ ಕೂಡ ವ್ಯಂಜನಾವೃತ್ತಿಯ ಬಗೆಗೆ ಅಸಹನೆಯನ್ನು ತಾಳಿದವನು. ಅವನು ಅಂತರ್ಭಾವವಾದಿ. 'ಧ್ವನಿ' ಎಂಬುದು ಬೇರೆ ಬೇರೆ ಅರ್ಥಾಲಂಕಾರಗಳಲ್ಲೇ ಅಡಕವಾಗುವ ಧರ್ಮವೇ ಹೊರತು ಅಲಂಕಾರಗಳಿಗಿಂತ ಬೇರೇನೂ ಅಲ್ಲ ಎಂಬುದು ಮಾರ್ಗಕಾರನ ನಿಲುವು.

ಉಭಯಸ್ಯ ಯುಗಪತ್ ಪ್ರಾಪ್ತೌ ಇತರವ್ಯಾವೃತ್ತಿಪರೋ ವಿಧಿಃ ಪರಿಸಂಖ್ಯಾ. ಧ್ವನಿಕಾವ್ಯಲಕ್ಷಣವಾಕ್ಯದಿಂದ ಕಾವ್ಯಾರ್ಥಪ್ರತಿಪತ್ತಿಯಲ್ಲಿ ಶಬ್ದಧ್ವನನ ಅರ್ಥಧ್ವನನ ಎಂಬೀ ಎರಡು ಕ್ರಿಯೆಗಳು ಅವಿಶೇಷವಾಗಿ ಒಟ್ಟಿಗೆ ಪ್ರಾಪ್ತವಾದವು. ಇದಕ್ಕೆ 'ಧ್ವನಿಯಿಸುಗುಂ

ಶಬ್ದದಿಂದಂ" ಅಂದರೆ "ಅರ್ಥದಿಂದಲ್ಲ" ಎಂಬುದಾಗಿ ಮಾರ್ಗಕಾರನ ಪ್ರತಿಕ್ರಿಯೆ. ಶಬ್ದಅರ್ಥಗಳು ಪಾರ್ವತೀಪರಮೇಶ್ವರರಂತೆ ಒಂದಕ್ಕೊಂದು ಅಂಟಿಕೊಂಡೇ ಇರುವ ಪದಾರ್ಥಗಳು. "ಏಕಸಂಬಂಧಿಜ್ಞಾನಂ ಅಪರಸಂಬಂಧಿಸ್ಮಾರಕಂ" "ಧ್ವನಿಯಿಸುಗುಂ ಶಬ್ದದಿಂದ" ಎಂಬಲ್ಲಿ ಈ ಬಗೆಯ ಶಾಸ್ತ್ರಪರಿಭಾಷೆಯ ಪರಿಚಯವುಳ್ಳ ಓದುಗರಿಗೆ 'ಅರ್ಥ'ದ ನೆನಪು ಕಡ್ಡಾಯವಾಗಿ ಆಗಲೇಬೇಕು. ಪರಿಸಂಖ್ಯೆಗೆ ನಿಷೇಧವೇ ವಾಕ್ಯಾರ್ಥ. ಮುಂದಿನ ವಾಕ್ಯವು ಪರಿಸಂಖ್ಯೆಯ ಸಮರ್ಥಕ. ಇಲ್ಲಿ ಶಬ್ದಗಳ ಸನ್ನಿವೇಶವೇ ಅನ್ವಯಸಾಮಗ್ರಿಯನ್ನು ನೆನೆಪಿಸಿಕೊಡುತ್ತದೆ. ಸಾಹಚರ್ಯವು ಧ್ವನಿಕಾವ್ಯಲಕ್ಷಣವಾಕ್ಯವನ್ನು ನೆನೆಪಿಸಿಕೊಡುತ್ತದೆ. ಇದು ಭಾರತೀಯರ ವಾಕ್ಯಾರ್ಥವಿಶ್ಲೇಷಣೆಯ ಸರಣಿ.

ಕೆಲವೊಮ್ಮೆ ವಾಕ್ಯದಲ್ಲಿ ಕ್ರಿಯಾಪದವು ಪ್ರಯುಕ್ತವಾಗಿರದಿದ್ದರೆ ಪದ ಪದಾರ್ಥಗಳ ಆಕಾಂಕ್ಷೆಗನುಗುಣವಾಗಿ ಹಿಂದಿನ ವಾಕ್ಯದಲ್ಲಿರುವ ಕ್ರಿಯಾಪದವನ್ನು ಮುಂದಿನ ವಾಕ್ಯದಲ್ಲೂ ಅನ್ವಯಿಸಿಕೊಳ್ಳಬೇಕಾಗುತ್ತದೆ. ಆಕಾಂಕ್ಷಾ ಯೋಗ್ಯತಾ ಸನ್ನಿಧಿಯೆಂಬಿವುಗಳಿಗೆ ಅನ್ವಯಸಾಮಗ್ರಿ ಎಂದು ಹೆಸರು. ಧ್ವನಿಕಂದದ 'ಅರ್ಥದೆ ದೂಷ್ಯಂ' ಎಂಬಲ್ಲಿ ಕ್ರಿಯಾಪದವಿಲ್ಲ. ಅರ್ಥದೆ ಎಂಬೀ ತೃತೀಯಾಂತ ಪದಕ್ಕೆ ಕ್ರಿಯಾಪದದ ಆಕಾಂಕ್ಷೆಯಿದೆ. ಹಿಂದಿನ ವಾಕ್ಯದಲ್ಲಿ ಧ್ವನಿಯಿಸುಗುಂ ಕ್ರಿಯಾಪದವಿದೆ. ಅರ್ಥದೆಗೆ ಅದರಲ್ಲಿ ಅನ್ವಯಿಸುವ ಯೋಗ್ಯತೆ ಇದೆ. ಎರಡು ವಾಕ್ಯಗಳೂ ಒಂದೊಕ್ಕೊಂದು ತಾಗಿ ಇರುವುದರಿಂದ ಸನ್ನಿಧಿಯೂ ಸಿದ್ಧವಾಗಿದೆ. 'ಎನೆ' ಎಂಬ ಅಪೇಕ್ಷಿತಪದವೊಂದನ್ನು ಅಧ್ಯಾಹಾರಮಾಡಿಕೊಂಡು ಅರ್ಥದೆಯುಂ ಧ್ವನಿಯಿಸುಗಮೆನೆ ದೂಷ್ಯಂ ಎಂಬೀ ರೀತಿಯಲ್ಲಿ ವಾಕ್ಯದ ಆಕಾರ ಸಿದ್ಧವಾಯಿತು. ದೂಷ್ಯವೆಂದರೆ ಸರಿಯಲ್ಲ, ತಪ್ಪು ಎಂದರ್ಥ. ದುಷ–ವೈಚಿತ್ಯೇ. ವೈಚಿತ್ಯಂ ವಿಕ್ಲವಃ ಭ್ರಾಂತಿಃ ಇತ್ಯಾದಿ, ಅನ್ವಯಸಾಮಗ್ರಿಯನ್ನು ಅನ್ವಯಿಸಿಕೊಳ್ಳಬೇಕಾದ ವಾಕ್ಯದ ಸ್ಥಳದಲ್ಲಿ ಓದುಗನಿಗೆ ಆಯಾ ಸಾಮಗ್ರಿಯ ನೆನಪಾಗಬೇಕಾದುದು ಅವಶ್ಯಕ. ಮೇಲ್ನೋಟದ ಓದಿನಲ್ಲಿ ಅನ್ವಯ ಸಾಮಗ್ರಿಯ ನೆನಪಾಗದಿದ್ದರೆ ವಾಕ್ಯದ ಅರ್ಥವನ್ನು ನಾವು ಎಡವಟ್ಟಾಗಿ ಗ್ರಹಿಸಿಬಿಡುತ್ತೇವೆ.

ವಾಕ್ಯವೊಂದರ ಅರ್ಥವು ಸಂಧಿಗ್ಧವೆನಿಸಿದಾಗ ಪ್ರಕೃತಕ್ಕೆ ವಿವಕ್ಷಿತವಾದ ಅರ್ಥವನ್ನು ಇದಮಿತ್ಥಂ ಎಂದು ಕಂಡುಕೊಳ್ಳುವಲ್ಲಿ ಸುಳುಹು ನೀಡಬಲ್ಲ ಕೆಲವು ಕೈಮರಗಳನ್ನು ಕಾವ್ಯಮೀಮಾಂಸೆಯಲ್ಲಿ ಸಂಯೋಗೋ ವಿಪ್ರಯೋಗಶ್ಚ...! ಎಂಬುದಾಗಿ ತೋರಿಸಿದ್ದಾರೆ. ಅಂತಹ ಕೈಮರಗಳ ಪೈಕಿ ಒಂದಾದ ಸಾಹಚರ್ಯವೆಂಬುದು ಧ್ವನಿಕಂದದಲ್ಲಿದೆ. ಶಬ್ದಗಳ ಸನ್ನಿವೇಶವಿಶೇಷರೂಪದ ಈ ಸಾಹಚರ್ಯವು ಧ್ವನಿಕಂದದ ಅರ್ಥವನ್ನು ಕಂಡುಕೊಳ್ಳುವಲ್ಲಿ ವಿಶೇಷ ಸ್ಮೃತಿಹೇತುವಾಗಿ ಸರಿಯಾದ ಸಾಕ್ಷ್ಯಾಧಾರವನ್ನು ಒದಗಿಸಿಕೊಡುತ್ತದೆ.

ಶಬ್ದ ಅರ್ಥ ಧ್ವನಿ ಎಂಬೀ ಮೂರು ನುಡಿಗಳ ಹೆಣಿಗೆಯಿಂದ ಧ್ವನಿಕಂದವು ರೂಪುಗೊಂಡಿದೆ. ಈ ಕಂದವನ್ನು ಓದುವವನಿಗೆ ಧ್ವನಿಕಾವ್ಯಲಕ್ಷಣದ ಪರಿಚಯವಿದ್ದರೆ ಇದೇ ಮೂರು ಶಬ್ದಗಳ ಜೋಡಣೆಯುಳ್ಳ "ಯತ್ರಾರ್ಥಃ ಶಬ್ದೋ ವಾ..." ಎಂಬ ಸಂಸ್ಕೃತದ ವಾಕ್ಯವು ನೆನಪಾಗಲೇಬೇಕು. ನೆನಪಾದದ್ದಾದರೆ ಎರಡೂ ವಾಕ್ಯಗಳ ಅರ್ಥಗಳಿಗೆ ತಾಳೆ ಹಾಕಿ ನೋಡಿದರೆ ಈ ಎರಡೂ ವಾಕ್ಯಗಳಿಗೆ ಪರಸ್ಪರ ಮಹತ್ವದ ಸಂಬಂಧವಿದೆಯೆಂಬ ಅಂಶ ತಿಳಿದುಬರುತ್ತದೆ. ಧ್ವನಿಕಾವ್ಯಲಕ್ಷಣದಲ್ಲಿರುವ ಅರ್ಥಃ ತಮರ್ಥಂ ವ್ಯನಕ್ತಿ ಎಂಬೀ ಉಕ್ತಿಗೆ ಪ್ರತಿಯಾಗಿ ಮಾರ್ಗಕಾರನು ಧ್ವನಿಯಿಸುಗುಂ ಶಬ್ದದಿಂದಂ ಎಂಬುದಾಗಿ ತನ್ನ

ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆಂಬುದನ್ನು ಸಾಹಚರ್ಯನಿಯಮದ ಮೇರೆಗೆ ಕಂಡುಕೊಳ್ಳಬಹುದು.

ಶ್ರೀ ವಿಜಯನ ಕವಿರಾಜಮಾರ್ಗವು ಕ್ರಿಸ್ತ ಶಕ 850–877ರ ಅವಧಿಯಲ್ಲಿ ರಚಿತವಾಗಿದೆ. ಆನಂದವರ್ಧನನ ಧ್ವನ್ಯಾಲೋಕಗ್ರಂಥವೂ ಕೂಡ ಇದೇ ಅವಧಿಯಲ್ಲಿ ರಚಿತವಾಗಿರಬಹುದಾದರೂ ಕಾವ್ಯಮೀಮಾಂಸಕವಿದ್ವಾಂಸರಿಗೆ ಧ್ವನಿಯ ಪರಿಚಯವಾದುದು ಹತ್ತನೇ ಶತಮಾನದ ಆರಂಭದಲ್ಲಿ ಎಂದು ಸಂಶೋಧಕರು ಹೇಳುತ್ತಾರೆ. ಇದ್ದರೂ ಇರಬಹುದು. ಮಾರ್ಗಕಾರನಿಗೆ ಧ್ವನಿಪ್ರಸ್ಥಾನದ ಸಮಗ್ರಪರಿಚಯ ಆಗಿರಲಿಲ್ಲವೆಂಬುದನ್ನು ಒಪ್ಪಲೇಬೇಕು. ಜೊತೆಯಲ್ಲಿ ಅವನು 'ಯತ್ರಾರ್ಥ ಶಬ್ದೋ ವಾ...' ಎಂಬೀ ಧ್ವನಿ ಕಾವ್ಯಲಕ್ಷಣವನ್ನು ಕಂಡು–ಕೇಳಿ–ತಿಳಿದಿದ್ದ ಎಂಬುದನ್ನೂ ಒಪ್ಪಲೇಬೇಕಾಗಿದೆ. "ಧ್ವನಿಯೆಂಬುದು ಅಲಂಕಾರ" ಎಂದು ಹೇಳಿ ವ್ಯಂಜನಾವೃತ್ತಿಯನ್ನು ನಿರಾಕರಿಸುತ್ತಿರುವವನಿಗೆ ಧ್ವನಿಯ ಬಗೆಗೆ ಏನೂ ಗೊತ್ತಿರಲಿಲ್ಲ ಎಂದು ಹೇಳಲಾಗದು.

"ಅರ್ಥಂ ಬುದ್ಧ್ವಾ ಶಬ್ದರಚನಾ" "ನಿಷೇಧಸ್ಯ ಪ್ರಾಪ್ತಿ ಪೂರ್ವಕತ್ವನಿಯಮಃ" ಎಂಬೀ ಭಾರತೀಯ ಶಾಸ್ತ್ರಕಾರರ ಸಮ್ಮತಿಯ ಪ್ರಕಾರ ಹೇಳುವುದಾದರೆ ಮಾರ್ಗಕಾರಕನಿಗೆ ಧ್ವನಿಯ ಪರಿಚಯವು ಸ್ವಲ್ಪಮಟ್ಟಿಗಾದರೂ ಆಗಿರದಿದ್ದರೆ ಅವನು ಧ್ವನಿಕಂದವನ್ನು ರಚಿಸುವುದೇ ಅಸಂಭವ.

ಧ್ವನಿಕಂದವು ಶ್ರೀವಿಜಯನದೇ ಹೌದೆಂದಾದರೆ, ಭಾರತೀಯ ಕಾವ್ಯ–ಮೀಮಾಂಸೆಯ ಇತಿಹಾಸದಲ್ಲಿ ದಾಖಲಾಗುವ ಅರ್ಹತೆಯು ಅದಕ್ಕಿದೆ. ಸಾಹಚರ್ಯ ಪರಿಸಂಖ್ಯಾಪ್ರಯೋಗ, ಅನ್ವಯಸಾಮಗ್ರಿಯ ಅಳವಡಿಕೆ, ನೆನೆಧಾತು ಪ್ರಯೋಗ ಇವು ಧ್ವನಿಕಂದದ ಅರ್ಥಗ್ರಾಹಕಸಾಮಗ್ರಿಯೆನಿಸುತ್ತವೆ. ಧ್ವನಿಕಂದದಲ್ಲಿ ಮಾರ್ಗಕಾರನು ಅಣಿಗೊಳಿಸಿಟ್ಟಿರುವ ಶಾಸ್ತ್ರೀಯತೆಯ ಈ ವಾಕ್ಯ ವಾಕ್ಯಾರ್ಥ ವಿಶ್ಲೇಷಣಸಾಮಗ್ರಿಯನ್ನು ನಾಡು ಗಮನಿಸಲೇ ಇಲ್ಲ!

ಮುಕುಲಭಟ್ಟ ಜಯಂತಭಟ್ಟರಿಬ್ಬರೂ ಕೂಡ ವ್ಯಂಜನಾವೃತ್ತಿಯನ್ನು ನಿರಾಕರಿಸುವ ಸಂದರ್ಭದಲ್ಲಿ ಮಾರ್ಗಕಾರನ ಮಾತನ್ನೇ ಸಂಸ್ಕೃತದಲ್ಲಿ ಅನುವಾದಿಸಿ ಹೇಳಿದಂತಿದೆ. ಈ ಮೂವರ ಮೂರು ವಾಕ್ಯಗಳ ಆಶಯವನ್ನು ಹೊಸಗನ್ನಡದಲ್ಲಿ ಒಂದೇ ವಾಕ್ಯವನ್ನು ರೂಪಿಸಿ ಹೇಳುವುದಾದರೆ – "ಅರಿವನ್ನು ಮೂಡಿಸುವುದು ನುಡಿಯ ಕೆಲಸ, ಪುರುಳಿನದಲ್ಲ" ಎಂದು ಒಕ್ಕಣಿಸಬಹುದು.

**ಪರಿಸಂಖ್ಯೈ ಕೈವಾಲಂ ಧ್ವನಿಕಂದಾರ್ಥನಿರ್ಣಯೇ ।**

## ಗ್ರಂಥಋಣ


1. ಮೀಮಾಂಸಾ ನ್ಯಾಯ ಪ್ರಕಾಶ
2. ಮೀಮಾಂಸಾ ದರ್ಪಣ, ಶ್ರೀ ದೇವುಡು ನರಸಿಂಹ ಶಾಸ್ತ್ರಿಗಳು
3. ಧ್ವನ್ಯಾಲೋಕ
4. ಭಾರತೀಯ ಕಾವ್ಯಮೀಮಾಂಸೆ – ತೀ.ನಂ.ಶ್ರೀ
5. ತರ್ಕ ಸಂಗ್ರಹ
6. ಕವಿರಾಜಮಾರ್ಗ

# ಆಧುನಿಕ ಕನ್ನಡ ಕವಿತೆ

## ಪೇಜಾವರ ಸದಾಶಿವ ರಾವ್

1. ಇಪ್ಪತ್ತನೆಯ ಶತಮಾನದ ಕನ್ನಡ ಕಬ್ಬವೆಂದರೆ, "ಕೇಳು ಬನಮೇಜಯ ಧರಿತ್ರಿಪಾಲ" ಎಂದು ಮೊದಲಾಗಿ ಪ್ರಾರಂಭ ಮಾಡುವ ಕವಿತೆಯಲ್ಲ. ಆಧುನಿಕರ್ಣಾಟಕ ಸಾಹಿತ್ಯದಲ್ಲಿ ಒಮ್ಮೆಲೆ ಮಹತ್ತರವಾದ ಮಾರ್ಪಾಟುಗಳು ಸಂಭವಿಸಿರುವವು. ಸಾಹಿತ್ಯದ ಸಂಯುಕ್ತ ಪ್ರಭುತ್ವವು ಇದೀಗಲೇ ನಮ್ಮಲ್ಲಿ ಸ್ಥಾಪಿತವಾಗಿರದೆ, ಅಂತಾರಾಷ್ಟ್ರೀಯವಾಗಿರುವುದೆಂದು ಹೇಳಿದರೆ ಅದೊಂದು ಟೀಕಾಸ್ಪದವಾದ ಮಾತಾದಿತೇಂದು ನಂಬಲಾಗದು. ಆಂಗ್ಲೇಯರ ಪ್ರಭುತ್ವವು ದೇಶದಲ್ಲಿ ಕೇವಲ ಶಾಂತಿಯನ್ನು ನೆಲೆಗೊಳಿಸಿದುದಲ್ಲ. ಅದು ತನ್ನ ಪ್ರಭುತ್ವದೊಡನೆ ಐರೋಪ್ಯರ ಸಂಸ್ಕೃತಿ ಸಾಹಿತ್ಯವನ್ನು ತಂದು ನಮ್ಮ ಸಂಸ್ಕೃತಿ ಸಾಹಿತ್ಯದೊಡನೆ ಪರಸ್ಪರ ಸಂಘರ್ಷಣವಾಗುವಂತೆ ಮಾಡಿಟ್ಟಿತು. ಪೂರ್ವಪಶ್ಚಿಮ ದಿಕ್ಕುಗಳ ಭಾವನಾಮಥನದಲ್ಲಿ ನವನೀತವಾಗಿ ಪರಿಣಮಿಸಿದ ಇಂದಿನ ಕರ್ಣಾಟಕ ಕವಿತೆಯು ತನ್ನ ಪ್ರಥಮಾವಸ್ಥೆಯಲ್ಲಿರುವುದೆಂದು ಹೇಳಬೇಕಾಗಿದೆ. ಈ ಪ್ರಕಾರ ಹೊಸಭಾವವನ್ನು ತಳೆದ ಕರ್ಣಾಟಕ ಸಾಹಿತ್ಯವು ಹಳಗನ್ನಡದಿಂದ ತೀರ ಭಿನ್ನವಾಗಿರುವುದಿಲ್ಲ. ಈಯೆರಡು ಸಾಹಿತ್ಯಗಳಲ್ಲಿಯೂ ಒಂದರಿಂದ ಇನ್ನೊಂದಕ್ಕೆ ಹರಿಯುತ್ತಿರುವ ಏಕಪ್ರವಾಹದ ಸಂಸ್ಕೃತಿಯನ್ನು ಕಾಣಲು ಬಹಳ ಕಷ್ಟ ಸಾಧ್ಯವಾದರೂ, ಸ್ಥೂಲಭಾವದಲ್ಲಿ ಹಳಗನ್ನಡವನ್ನೂ ಹೊಸಗನ್ನಡವನ್ನೂ ಅಜಗಜಾಂತರವು ದೂರಗೊಳಿಸಿದರೂ, ವಾಸ್ತವಿಕವಾಗಿ ಚೆನ್ನಾಗಿ ಪರಿಶೀಲಿಸಿದರೆ, ಇವುಗಳೆರಡರ ಅನ್ಯೋನ್ಯಗ್ರಥನವು ಇನ್ನೊಂದರ ಪ್ರಯೋಜನಕ್ಕೆ ಸಾಧನವಾಗಿಯೇ ಆಗುವುದೆಂದು ಹೇಳಬಹುದು. ಅಂತೂ ಸಾಹಿತ್ಯವು ಪೂರ್ವದಲ್ಲಿ ಸಂಸ್ಕೃತದೊಡನೆ ಬೆರೆತು ತನ್ನ ಶಬ್ದಕೋಶವನ್ನು ಬೆಳೆಸಿದ್ದಾದರೆ, ಇಂದು ಅದೇ ಸಾಹಿತ್ಯವು ಇಂಗ್ಲಿಷಿನ ಮೇಳನದಿಂದ ಅಂತಾರಾಷ್ಟ್ರೀಯವಾಗಿ ಭಾವನಾದಿಗಳಲ್ಲಿ ಪುಷ್ಪವಾಗಿರುತ್ತದೆಯೆಂದು ಹೇಳಿದಂತಾಗುತ್ತಿದೆ. ಆಂಗ್ಲೇಯರ ಪ್ರಭುತ್ವವು ದೇಶಕ್ಕೆ ಹಿತಾವಹವಾಗಿರಲಿ ಇಲ್ಲದಿರಲಿ, ಅವರ ವಾಙ್ಮಯವು ನಮ್ಮ ನಡೆನುಡಿಗಳಲ್ಲಿ ಅವಸ್ಥಾಂತರವನ್ನು ಮಾಡಿಟ್ಟಿರುವುದೆಂದು ಒಪ್ಪಬೇಕಾಗಿದೆ. ಏವಂಚ ಜನತೆಯ ಚೇತನಾಕಾಶವು ಅಗಲವಾದಂತೆ ತದ್ಭಾವಸೂಚಕ ವಾದ ಸಾಹಿತ್ಯವೂ ತನ್ನಲ್ಲಿ ರೂಪಾಂತಾರವನ್ನು ಕೈಗೊಂಡಿರುವುದೆಂದು ಹೇಳಿದರೆ ಆಶ್ಚರ್ಯದ ಮಾತಲ್ಲ.

2. ಜೀವನಕ್ಕೂ ಸಾಹಿತ್ಯಕ್ಕೂ ಅನ್ಯೋನ್ಯ ಸಂಬಂಧವಿರುತ್ತದೆ. ಆಂಗ್ಲೇಯರ ಅಭಿಪ್ರಾಯದಲ್ಲಿ ಸಾಹಿತ್ಯವು "ವಿಪುಲಮಾನುಷ ಜೀವನದ ಯಥಾರ್ಥ ಸಮಾವಲೋಕನಂ" ಎಂದು ಅರ್ಥವಾಗುತ್ತಿದೆ. ಸಂಸ್ಕೃತಪಂಡಿತರ ಅಭಿಪ್ರಾಯದಲ್ಲಿ ಸಾಹಿತ್ಯವು ಸಂಸಾರಯಾತ್ರೆಯ ಬೆಳಕೆಂದೂ ತಿಳಿಯಲ್ಪಡುತ್ತಿದೆ. ಯಾರ ಅಭಿಪ್ರಾಯವನ್ನು ಪರಿಶೀಲಿಸಿದರೂ

ಸಾಹಿತ್ಯಕ್ಕೂ ಜೀವನಕ್ಕೂ ಇರುವ ನಿಕಟಸಂಬಂಧವನ್ನು ಸೂಚಿಸದೆ ಇಲ್ಲ. ಯಾವ ಸಾಹಿತ್ಯವು ಹೇಗೆ ಜೀವನ ಮಾಡುವುದು? ಜೀವನವೆಂದರೇನು? ಎಂಬ ಸಮಸ್ಯೆಯನ್ನು ಬಿಚ್ಚುವುದಿಲ್ಲವೋ – ಅದು ಸಾಹಿತ್ಯವಲ್ಲ. ಗದ್ಯವಾಗಲಿ ಪದ್ಯವಾಗಲಿ, ನಾಟಕವಾಗಲಿ ಚಂಪುವಾಗಲಿ, ಅವುಗಳೆಲ್ಲವೂ ಜೀವನದಲ್ಲಿ ಕೇಂದ್ರೀಕೃತವಾಗಿರುವವು. "ನಾಟ್ಯಂಭಿನ್ನರುಚೇರ್ಜನಸ್ಯ" ಎಂದು ಹಾಡುವಾಗ ಕಾಳಿದಾಸನು ಪದ್ಯವೂ ಗದ್ಯವೂ ವಿವಿಧತೃಷ್ಣೆಯವರಿಗೆ ಸಂತೃಪ್ತಿಯನ್ನು ಕೊಡಲಿಕ್ಕೆ ಅಶಕ್ತವಾಗುವುದೆಂದು ಹೇಳಿದಂತೆ ಕಂಡುಬರುವುದಿಲ್ಲ. ನಾಟ್ಯವು ಇಂದ್ರಿಯಾರ್ಥಪ್ರಧಾನವಾಗಿದ್ದು ಅದನ್ನು ತುತ್ತತುದಿಗೇರಿಸುವುದಾದರೆ, ರಸಪ್ರಧಾನವಾದ ಸಾಹಿತ್ಯವು ಬಹುಮತವಾದಂತೆ ತೋರಲಿಕ್ಕಿಲ್ಲ. ಇಂದ್ರಿಯಗಳ ಸಂತೃಪ್ತಿಯಿಂದ ಜೀವನ ಸಮಸ್ಯೆಯನ್ನು ಬಿಚ್ಚ ಬಹುದಾದರೆ, ಸಾಹಿತ್ಯವು ಅದೃತವಾಗುತ್ತಿದ್ದಿಲ್ಲ. ನವರಸಗಳು ಇಂದ್ರಿಯಗಳಿಗೆ ಸಂತೃಪ್ತಿಯನ್ನು ಕೊಡಲಾರವು. ನಾಟ್ಯವೂ ರಸಾತ್ಮಕವಾಗುವುದಾದರೆ, ಅದು ಇಂದ್ರಿಯಪ್ರಧಾನವಾಗಲಿಕ್ಕಿಲ್ಲ. ಏಕೆಂದರೆ, ಒಮ್ಮೆಗೆ ಎರಡು ರೂಪಗಳಲ್ಲಿ ಕಾಣುವುದು ಅಶಕ್ಯವಾದೀತು. ದುಃಖದಿಂದ ಬಾಡಿದ ಹೃದಯವನ್ನು ಸುಖದಿಂದ ಅರಳಿದ ಹೃದಯವನ್ನು ಪ್ರಫುಲ್ಲಗೊಳಿಸುವುದಕ್ಕೆ ನವರಸಗಳ ರಶ್ಮಿಗಳಿಂದ ಮಾತ್ರ ಸಾಧ್ಯ.

3. ಸಾಹಿತ್ಯವು ಮಾನುಷಿಕವಾದಂತೆ ರಾಷ್ಟ್ರೀಯವೂ ಆಗಿರುವದು. ರಾಷ್ಟ್ರವೂ ರಾಷ್ಟ್ರವೂ ದೇಶವೂ ದೇಶವೂ ನಡೆನುಡಿ, ಆಚಾರ ವಿಚಾರ, ಹಾವಭಾವ, ಮೊದಲಾದುವುಗಳಲ್ಲಿ ಭಿನ್ನವಾದಂತೆ – ಅವುಗಳ ಸಾಹಿತ್ಯವೂ ಆಯಾಕಾಲದ ಅಭಿಪ್ರಾಯ ಮೊದಲಾದವುಗಳ ದರ್ಪಣದಂತೆ ಪ್ರತಿಭಾವನ್ನೀಯುವುದು. ದೇಶದ ಸ್ಥಿತಿಗತಿಗಳು ಕವಿಯ ಹೃದಯಾಂತ ರಾಳವನ್ನು ಭೇದಿಸಿ, ಅವನ ಮಾತುಗಳಲ್ಲಿ ಮೂರ್ತಿಭವಿಸುವವು. ಪ್ರಸಿದ್ಧನಾದ ಕವಿಯ ಜನ್ಮಕ್ಕೆ ಅನುಕೂಲವಾದ ವಾತಾವರಣವೂ ತದ್ವಿವರಣಶಕ್ತಿಯೂ ಒಬ್ಬನಲ್ಲಿ ಯಥೇಷ್ಟವಾಗಿರಬೇಕು. ಒಮ್ಮೊಮ್ಮೆ ಅನುಕೂಲವಾದ ವಾತಾವರಣವು ಸಿದ್ಧವಾಗಿರು ವುದಿಲ್ಲವಾದರೂ ಕವಿಗಳು "ಶ್ರುತೇನ ಯತ್ನೇನ ಯದಿ ವಾಗುಪಾಸಿತಾ" ಎಂಬಂತೆ ಒಳ್ಳೆಯ ಕಾವ್ಯಗಳ ಪಠನದಿಂದಲೂ ವಿಮರ್ಶೆಯಿಂದಲೂ ಶ್ರೇಷ್ಠ ಕಾವ್ಯವನ್ನು ನಿರ್ಮಿಸುವುದರಲ್ಲಿ ಶಕ್ತರಾಗುವರು. ಅಂತೂ ನಿರ್ಮಾಣಶಕ್ತಿಯು ತತ್ಕಾಲಗತ ಪ್ರತಿಭೆಯಾದರೂ ದೇಶದ ಸಂಸ್ಕೃತಿಯು ಅವಂಧ್ಯವಾಗಿದ್ದು ಕವಿಗಳು ಯತ್ನಪೂರ್ವಕವಾಗಿ ಅಭ್ಯಾಸ ಮಾಡಿದರೆ ಕಾಲಪ್ರತಿಭೆಯ ಅಗತ್ಯವೂ ಇರುವುದಿಲ್ಲ.

4. ರಾಜಕೀಯ ಆಂದೋಲನದೊಡನೆ, ಸಾಹಿತ್ಯವೂ ತೂಗುತ್ತಲಿರುವುದು. ಪೂರ್ವಕಾಲದ ಸಾಹಿತ್ಯವು ಸಿರಿವಂತರ ಹಕ್ಕಾಗಿಯೂ ಅರಸರ ಪ್ರೋತ್ಸಾಹಕಲೆಯಾಗಿಯೂ ಇದ್ದಿತು. ಅಂದು ರಾಜತಂತ್ರವು ಮನ್ನಿಸಲ್ಪಡುತ್ತಿತ್ತು. ಹೊಲಗಳಲ್ಲಿ ಸೂರ್ಯನ ಬಿಸಿಲಿಗೆ ಮೈದಣಿದು ಜೀವಿಸುತ್ತಿದ್ದ ಒಕ್ಕಲಿಗರು ಪೂರ್ವದಲ್ಲಿ ಸಾಹಿತ್ಯಾವಲೋಕನ ಶಕ್ತಿಯಿಂದ ಬಾಹಿರರಾಗಿದ್ದರು. ಹಾಗಿದ್ದುದರಿಂದಲೇ ಕಾಳಿದಾಸನು "ಅಭಿರೂಪಭೂಯಿಷ್ಠಾ ಪರಿಷದಿಯಮ್" ಎಂದು ಉದ್ಗಾರ ತೆಗೆದಿರಬೇಕು. ಇಂದಿನ ಹೊತ್ತು ರಾಜತಂತ್ರವು ಮಣ್ಣುಗೂಡುತಲಿದೆ. ಪ್ರಜಾತಂತ್ರದ ಧ್ವಜವು ಮೆಲ್ಲಮೆಲ್ಲನೆ ಮೇಲೇರುತ್ತಿದೆ. ಪ್ರಜಾ ತಂತ್ರದ ಸಾಹಿತ್ಯವು ಸಿರಿಯ ಬಲೆಯನ್ನು ಕಡಿದು ಒಕ್ಕಲಿಗನ ವಿದ್ಯೆಗಾಗಿಯೂ

ಸಂಸ್ಕೃತಿಗಾಗಿಯೂ ಹೆಣಗಾಡಿ ಪ್ರಚಾರಕಾರ್ಯವನ್ನು ತನ್ನುದ್ದೇಶವನ್ನಾಗಿ ಮಾಡಿಕೊಂಡಿರುವುದು. ರಾಜ್ಯದ ಪ್ರಜಾತಂತ್ರದೊಡನೆ ಸಾಹಿತ್ಯವು ತದ್ರೂಪವಾಗುತ್ತಿದೆ. ಇನ್ನು ಕಾವ್ಯಗಳನ್ನು ಜನಮೇಜಯನೇ ಕೇಳಬೇಕೆಂದಿಲ್ಲ. ಕೇಳಲು ಜನಮೇಜಯನೂ ಇಲ್ಲ. ಹೇಳಲು ಕುಮಾರವ್ಯಾಸನೂ ಇಲ್ಲ. ಇಂದಿನ ಕವಿತೆಯೆಂದರೆ, ಪ್ರಾಚೀನರ ಆಚಾರವಿಚಾರ ನಡೆನುಡಿ ಮೊದಲಾದವುಗಳನ್ನೆಲ್ಲವನ್ನೂ ಭೇದಿಸಿ ಅವಿರ್ಭೂತವಾದ ಅದೊಂದು ಹೊಸ ಶಕ್ತಿಯಂತೆ ಕಂಡುಬರುವುದು. ಇಂದಿನ ಸಾಹಿತ್ಯವು ಹಲವು ಶತಮಾನಗಳಿಂದ ಸ್ವಪ್ನಶೀಲವಾದ ಹೃದಯವನ್ನು ಎಬ್ಬಿಸಿ ಹುರಿದುಂಬಿಸುವುದಾಗಿರುತ್ತದೆ. ವರ್ತಮಾನಕಾಲದ ಕವಿತೆಗಳಲ್ಲಿ ಇಂದ್ರಿಯಗಳನ್ನು ಸಂತೋಷಪಡಿಸುವ ಪ್ರಾಸಾನುಪ್ರಾಸಗಳೂ ಶಬ್ದಾಲಂಕಾರಾಡಂಬರಗಳೂ ತೋರಿಬರುವುದಿಲ್ಲ. ಜನತೆ ಇಂದು ಇಂದ್ರಿಯ ಸೇವನೆಗಿಂತ ಮುಂಚೆ ಹೊಟ್ಟೆಹೊರೆದುಕೊಳ್ಳಬೇಕಾಗಿದೆ. ಸಾಹಿತ್ಯದ ದುಂದು–ಅಥವಾ ದುಂದಿನ ಸಾಹಿತ್ಯವು – ಅವನ ಬುದ್ಧಿ ಸಾಮರ್ಥ್ಯಕ್ಕೆ ಮತ್ತು ಕುತೂಹಲಕ್ಕೆ ಎಟಕುವುದಿಲ್ಲ. ಬಡತನದ ಮತ್ತು ಅದರ ಫಲಸ್ವರೂಪಿ ಅಜ್ಞಾನದ ಅಂಧಕಾರದಿಂದ ಅವನು ಹೊರಬರಬೇಕಾಗಿದೆ. ಆಧುನಿಕ ಕವಿತೆಯು ಜನತೆಯನ್ನು ಚೇತರಿಸುತ್ತಿದೆ. ಆಯಾಸದಿಂದ ದಣಿದ, ಅಥವಾ ತಂಟಲುಮಾರಿಯಾದ ಮಗವನ್ನು ಮಲಗಿಸಲು ತಾಯಿ ನಿರರ್ಥಕ ಮತ್ತು ಪ್ರಾಸಯುಕ್ತ ಜೋಗುಳ ಹಾಡುತ್ತಾಳೆ. ಆದರೆ ಪ್ರಾತಃಕಾಲ ಏಳಿಸುವಾಗ ರಾಗವೂ ಇಲ್ಲ ಪ್ರಾಸವೂ ಇಲ್ಲ – "ಕಂದಾ, ಎದ್ದೇಳು" ಎನ್ನುವಳು. ಆಧುನಿಕ ಕವಿತೆಯು ಜನತೆಯನ್ನು ಚೇತರಿಸುತ್ತದೆ. ನಿದ್ದೆಯಲ್ಲಿದ್ದವನಿಗೆ ಪ್ರಾಸದ ಸೊಬಗು ಎಂತು ತಿಳಿದೀತು? ಜನತೆಯನ್ನು ಚೇತರಿಸಲು ಪ್ರಾಸವೇಕೆ? ಸರಿಯಳತೆಯ ಛಂದಸ್ಸೇಕೆ? ಛಂದಸ್ಸು ಭೇದಿಸಲ್ಪಟ್ಟಿತು; ಅಲಂಕಾರವು ತಿರಸ್ಕೃತವಾಯಿತು; ರಸಗಳು ಕಡೆಗಣಿಸಲ್ಪಟ್ಟವು. ಆಡುವ ಭಾಷೆಯಲ್ಲಿ, ಇದ್ದದ್ದನ್ನು ಇದ್ದಂತೆ, ತೋರಿದುದನ್ನು ತೋರಿದಂತೆ, 'ಅಕೋ ಅಲ್ಲಿ ನೋಡು' ಎಂದು ಬೆರಲಿಟ್ಟು ವಿವರಿಸುವುದೆ ಈಗಿನ ಕವಿತೆಯ ಜೀವಾಳ. ಇದರಿಂದ ನಮ್ಮ ಕರ್ಣಾಟಕವಿತೆಯಿಂದು ಕೆಲವೆಡೆ ಗದ್ಯದಂತೆಯೂ ಹಲವೆಡೆ ನಾಟ್ಯದಂತೆಯೂ ಒಂದು ಕಡೆ ಪ್ರಳಯಕಾಲದ ರುದ್ರನಂತೆಯೂ ಇನ್ನೊಂದುಕಡೆ ಶಾಂತಶೀಲನಾದ ಲಕ್ಷೋನಾರಾಯಣನಂತೆಯೂ ಇದ್ದು ಹೊಸಧೂಮಕೇತುವಿನಂತೆ ಕೃತ್ರಿಮಸಂಧ್ಯಾರಾಗದಂತೆ ಹಳಬರನ್ನು ಚಕಿತಚಕಿತರನ್ನಾಗಿಯೂ ಹೊಸಬರನ್ನು ಧಿಮಿಧಿಮಿ ನಲಿವವರನ್ನಾಗಿಯೂ ಮಾಡಿರುವುದು. ಅವರ ಅಭಿಪ್ರಾಯದಲ್ಲಿ ಕನ್ನಡವು ಅಧೋಗತಿಗೆ ಪಯಣ ಬೆಳೆಸುತಲಿದೆ, ನಮ್ಮ ಅಭಿಪ್ರಾಯದಲ್ಲಿ ಕನ್ನಡದ ಚೇತನಾಂಕುರದ ಪ್ರಾದುರ್ಭಾವ ತೋರಹತ್ತಿದೆ.

5. ಹಳಗನ್ನಡಗಬ್ಬಕ್ಕೂ ಹೊಸಗನ್ನಡಕಾವ್ಯಕ್ಕೂ ಅಂತರವೆಂದರೆ ಇಷ್ಟೆ. – ಪ್ರಾಚೀನದ ಕವಿತೆಗಳು ಬಾಹುಲ್ಯವಾಗಿ ಇಂದ್ರಿಯಗಳಿಗೆ ಸುಖವನ್ನುಂಟುಮಾಡುವವುಗಳು. ಕೇಳಿದರೆ ಜನ ಪಂಡಿತರು ತಲೆದೂಗಿ, ಅರಸರು ಪ್ರತ್ಯಕ್ಷರಕ್ಕೆ ಲಕ್ಷವರಹ ದಾನ ಮಾಡಬೇಕು. ಅರ್ಥಗಿರ್ಥವು ಯಾರಿಗೂ ತಿಳಿಯದೆ "ಗುಹ್ಯಾತ್ ಗುಹ್ಯತಂ" ವಾಗಿರಬೇಕು. ಹೇಳಿದ್ದು ಬ್ರಹ್ಮವಾಗಬೇಕು; ಕೇಳಿದ್ದು ಖುಷಿಯಾಗಬೇಕು. ಅಂತೂ

ಅಲ್ಪಮತಿಯಾದ ಮನುಷ್ಯನ ಅಲ್ಪಮತಿತ್ವವು ಸಿದ್ಧಾಂತವಾಗಬೇಕು. ದೇವರ ಮುಂದೆ, ಪಂಡಿತರ ಮುಂದೆ, "ಏನಪ್ಪಾ ನಾವೆಲ್ಲ ಹುಲ್ಲೆಸಳು" ಎಂದು ಜನರು ಘಂಟಾಘೋಷವಾಗಿ ಸಾರಬೇಕು. ಆಗ ಅದೊಂದು ಕಾವ್ಯ. ಆಗ ತಾನೆ ನರಜನ್ಮ ಸಾರ್ಥಕವಾಯ್ತು. ಆಧುನಿಕರ ಕವಿತೆ ಚೇತಸ್ಸಿಗೆ ಪ್ರಯುಕ್ತವಾದುದು. ಹೃದಯವಿಂದು ಕವಿತೆಯ ಉದ್ದಿಷ್ಟಪ್ರದೇಶವಾಗಿರುವಂತೆ ಕಂಡುಬರುವುದಿಲ್ಲ. ಅದು ಕ್ರಮೇಣ ಸಾನುಬಂಧವಾಗಿ ಬರಲಿರುವುದೆಂದೇ ನಮ್ಮ ನಿರೀಕ್ಷೆ. ಇಂದಿನ ಸಮಯವು ಅಭಿಪ್ರಾಯಗಳ ತುಲನೆಯನ್ನು ಕೇಳುವಂತಹುದಾಗಿರುತ್ತದೆ. ಇಂದಿನ ದಿವಸದ ಜನತೆಯ ಕ್ಲೈಬ್ಯವನ್ನು ಅವಿದ್ಯೆಯನ್ನೂ ಹೋಗಲಾಡಿಸಿ ಬೀರವನ್ನೂ ಜ್ಞಾನವನ್ನೂ ಪ್ರೇರಿಸಲು, ಶಾಂತಿಪುರಾಣದ ವಿರೋಧಾಭಾಸಾಲಂಕಾರಗಳು ಎಷ್ಟು ಮಾತ್ರಕ್ಕೂ ಪ್ರಯೋಜನಬೀಳಲಿಕ್ಕಿಲ್ಲ. ದ್ವಿತೀಯಾಕ್ಷರಪ್ರಾಸದ ಸೊಬಗೂ ರುಚಿಸದು.

ಎಲ್ಲರೂ ಅಟ್ಟುತಿಹ ಇವಳನ್ನು ನೋಡಿ
ಮರುಗಿದೆನು ಮನದಲ್ಲಿ ಶೋಕದಿಂದ
ಯಾರಿಗೂ ಬೇಕಿಲ್ಲದಿವಳ ಗಾನಕ್ಕೆ
ಎನ್ನ ಹೃದಯದೊಳಾಗ ಎಡೆಯನಿತ್ತೆ. – ತಳಿಯ

ಇಂತಹವಳ "ಉಡುಪ ನೋಡಿದರೆ ತುರುಕರವಳು." ಅದು ಕಾರಣವೆ, "ಬೇರೆ ಮತದವಳೆಂದು ಭಿಕ್ಷೆಯನ್ನು ಕೊಡರು." ಈ ಪದ್ಯದಲ್ಲಿ ಮತಭೇದವಿಚಾರವನ್ನು ಕವಿಯು ಸಮಾಲೋಚಿಸಿ ತನ್ನ ನಿಶ್ಚಿತಾಭಿಪ್ರಾಯವನ್ನು ಮುಂದಿಟ್ಟಿರುವನು. ಇದು ಭಾವಗೀತೆಯಲ್ಲ; ಇದೀಗ ಚೇತಃಪ್ರಯುಕ್ತಗೀತೆ.

ನಿಮಿಷಕೆ ನಿಮಿಷಕೆ ಮಾರ್ಪಡುತ
ಮನ ಬಂದೆಡೆಗಾಗಡಿಯಿಡುತ
ಬಿಳಿಮುಗಿಲೀಗಡೆ ಸಾರುವುದು
ಸ್ವತಂತ್ರವೆಂಬುದರರ್ಥವನು. – ತಳಿರು

ಇದು ಭಾವಗೀತೆಯಾಗಿದ್ದ ಪಕ್ಷಕ್ಕೆ ಸ್ವರೂಪವೆ ಬೇರೆಯಾಗುತ್ತಿದ್ದಿತು. ಈ ಪದ್ಯದಲ್ಲಿ ಧ್ವನಿಯಿಲ್ಲ. ಭಾವಗೀತೆಯು ಧ್ವನಿಸರ್ವಸ್ವವಾಗಿದೆ. ಇದೀಗ ಚೇತಸ್ಸಿಗೆ ಪ್ರಯುಕ್ತವಾದ ಗೀತೆ. ತಿರಿಗಿ,

ಅವುಗಳ ಪುಟ್ಟಿಪ ಬೊಮ್ಮನು ನೀನೆ !
ಅವುಗಳ ರಕ್ಷಿಪ ವಿಷ್ಣುವು ನೀನೆ !
ಅವುಗಳ ಶಿಕ್ಷಿಪ ರುದ್ರನು ನೀನೆ !
ಅವುಗಳ ಅಳಿವುಳಿವೆಲ್ಲವು ನೀನೆ ! – ತಳಿರು

ಎಂದು ಬಾಲಕನ ಚೇತನಾಕಾಶವನ್ನು ವಿಸ್ತರಿಸುವುದು. ಇದನ್ನು ಕೇಳುತಲೆ, ಬಾಲಕನು ತನ್ನ ಗೌರವವನ್ನು ಸಮಾಲೋಚಿಸುವನು. ಇದು ಚೇತಃಪ್ರಯುಕ್ತವಾದ

ಗೀತೆಯಾಗಿರುತ್ತದೆ. ಇದೇ ಪ್ರಕಾರದಲ್ಲಿ "ಹಕ್ಕಿ ಹಾರುತಿದೆ" ಮೊದಲಾದ ಗ್ರಂಥಗಳಿಂದಲೂ ಉದಾಹರಣೆಗಳನ್ನು ಮುಂದಿರಿಸಬಹುದು. ಇಂದಿನ ಕವಿತೆಯು ಚೇತಸ್ಸನ್ನು ಸ್ಪರ್ಶಿಸುವುದಾಗಿದೆ ಎಂದೆನ್ನುವಾಗ ಇದು ಕನಿಷ್ಠವೆಂದು ಹೇಳಿದಂತಾಗದು. ಕನಿಷ್ಠವಾಗಲಿ ಗರಿಷ್ಠವಾಗಲಿ, ಇಂದಿನ ಕವಿತೆಯು ಪ್ರಜಾತಂತ್ರದ ಅರುಣೋದಯದಲ್ಲಿ ಓಕುಳಿಯಾಡುತಿದೆಯೆಂದರೆ – ಅದೊಂದು ನಿರ್ವಿವಾದದ ಸಂಗತಿಯು.

6. ಕನ್ನಡದಲ್ಲಿ ಹಳತು ಮತ್ತು ಹೊಸತು ಎಂದು ಭೇದವಿರುವುದೇ ಎಂದು ಯಾರಾದರೂ ಪ್ರಶ್ನೆಯೆತ್ತುವುದಾದರೆ, ಇರುವುದೆನ್ನುವೆವು. ಈ ಭೇದವು ಎಲ್ಲಿ ಅಂಕುರಿಸಿರುವುದು, ಎಲ್ಲಿ ಬೆಳೆಯುವುದು, ಮತ್ತೆಲ್ಲಿ ಸ್ಥಾಯಿಯಾಗುವುದು ಎಂಬ ಐತಿಹಾಸಿಕ ವಿಚಾರಗಳನ್ನು ನಾವಿಲ್ಲಿ ವಿವರಿಸಬೇಕೆಂದಿಲ್ಲ. ಚರಿತ್ರೆಗೂ ಸಾಹಿತ್ಯಕ್ಕೂ ಸಂಬಂಧವಿರುವುದಾದರೆ, ಹೊಸಗನ್ನಡ ಮತ್ತು ಹಳಗನ್ನಡವೆಂಬೀ ಭೇದವು ದೇಶದಲ್ಲಿ ಇಪ್ಪತ್ತನೇ ಶತಮಾನದ ಆಂದೋಲನದ ನಿಯತಫಲವೆಂದೇ ಹೇಳಬೇಕಾಗಿದೆ. ಇಂಗ್ಲಿಷಿನ ಮಿಲನದ ಪೂರ್ವದಲ್ಲಿ ಕನ್ನಡದಲ್ಲಿ ಗದ್ಯಪ್ರಬಂಧಗಳೇ ಬಹಳ ಕಡಿಮೆಯಾಗಿದ್ದುವು. ಇದ್ದರೂ 'ಒಂದಾನೊಂದು ಊರಿನಲ್ಲಿ ಒಂದು ಮಾರ್ಜಾಲವು ಇರುವಂತಹುದಾಗಿತ್ತು.' ಎಂಬೀ ಶೈಲಿಯಲ್ಲಿ ವಿರಾಜಮಾನವಾಗುತ್ತಿತ್ತು. ಅದು ಕಾರಣ ಮಾನವನ ಯಾವ ವಿಚಾರಲೋಹವೇ ಇರಲಿ ಅದು ಕವಿತೆಯ ಒರೆಗಲ್ಲಿಗೆ ಹಚ್ಚಲ್ಪಡಬೇಕಾಗಿದ್ದಿತು. ಹಳಗನ್ನಡವು ಪದ್ಯಮಯವಾಗಿರುವುದು. ಹೊಸಗನ್ನಡವು ಗದ್ಯರೂಪವಾಗಿದೆ. ಆದ್ದರಿಂದ ಗದ್ಯದ ಬೆಳೆವಣಿಗೆಗಿಂತ ಪದ್ಯದ ಬೆಳೆವಣಿಗೆಯು ಇಂತಿಷ್ಟು ಕಡಿಮೆಯಾದಂತಾಗಿ ಕನ್ನಡದ ಇಡೀ ತುಲೆಯ ಪ್ರತಿಷ್ಠೆಯು ಸ್ವಲ್ಪ ಅಲುಗಾಡಿತೆನ್ನಬಹುದು. ಎಷ್ಟರವರೆಗೆ ಕನ್ನಡವು ಸಂಸ್ಕೃತದೊಡನೆ ಅಂತಃಪ್ರಾಂತಿಕ ಭಾವವನ್ನು ತಳೆಯುತ್ತಿದ್ದಿತೋ ಅಷ್ಟರವರೆಗೂ ಕನ್ನಡವು ಹಳಗನ್ನಡವು ಸಂಸ್ಕೃತದಲ್ಲಿ ಗದ್ಯಕಾವ್ಯಗಳಿಲ್ಲ; ಬಾಣಭಟ್ಟನ ಮತ್ತು ಇತರ ಕೆಲವರ ಒಂದೆರಡು ಗ್ರಂಥಗಳನ್ನು ಬಿಟ್ಟರೆ, ಎಲ್ಲವೂ ಪದ್ಯಮಯ. ನಾಟಕದಲ್ಲಿಯೂ ಪದ್ಯಗಳೇ ಆದರಣೀಯಗಳು. ಆದರೆ ಪ್ರಜಾತಂತ್ರದೊಡನೆ ಎಂದು ಗದ್ಯವು "ಪದ್ಯಂ ವಧ್ಯಂ; ಗದ್ಯಂ ಹೃದ್ಯಂ." ಎಂದು ಸನ್ಮಾನಿಸಲ್ಪಟ್ಟಿತೋ ಅಂದೇ ಹೊಸಗನ್ನಡ ಮತ್ತು ಹೊಸಗನ್ನಡವೆಂಬ ಭೇದವಾಯ್ತೆಂದು ಹೇಳಬಹುದು. ಮುದ್ದಣನು ತನ್ನ ಕಾವ್ಯಗಳನ್ನು ಹಳೆಗನ್ನಡದ ಸರಣಿಯಲ್ಲಿ ಬರೆದರೂ ಹೊಸಗನ್ನಡದ ಭೇರಿಯನ್ನು ಹೊಡೆದವನಾತನು! ಈ ಮೇಲೆ ವಿವರಿಸಿದ ಸಂಗತಿಯು ಸರಿಯಾದರೆ, ಆಧುನಿಕ ಕವಿತೆಯು ಗದ್ಯದಂತೆ ತೋರಿಬರುವುದು ಆಶ್ಚರ್ಯವೆಂದು ಕಂಡುಬರಲಿಕ್ಕಿಲ್ಲ. ಗದ್ಯಕಾಲದಲ್ಲಿ ಕವಿತೆಯು ಗದ್ಯವನ್ನೇ ಅನುಸರಿಸುವುದು ಅದೊಂದು ದೊಡ್ಡ ಮಾತಲ್ಲ.

7. ಹಳಗನ್ನಡ ಕಾವ್ಯವಾಗಲಿ ಹೊಸಗನ್ನಡ ಕವಿತೆಯಾಗಲಿ ಕವಿತೆಗೆ ಅನ್ವಯಿಸುವ ಗುಣಗಳಿಂದ ಯುಕ್ತವಾದರೆ ನಿಜವಾದ ಕವಿತೆಯೆಂದು ಎಣಿಸಲ್ಪಡುವದು. ಕೇವಲ ಪ್ರಾಸಗಳಿಂದೊಡಗೂಡಿ ಮಾತ್ರಾ ಗಣಗಳಲ್ಲಿಯಾಗಲಿ ಅಕ್ಷರಗಣಗಳಲ್ಲಿಯಾಗಲಿ ನಾಲ್ಕು ಪದಗಳ ಸಂತಾನವು ಹರಿಯಿತೆಂದಮಾತ್ರಕ್ಕೆ ಕವಿತೆಯೆನಿಸಿಕೊಳ್ಳದು. ಪೂರ್ವಿಕರು ಅಲಂಕಾರಚಮತ್ಕೃತಿ ಮೊದಲಾದುವು ಕವಿತೆಯ ಜೀವಾಳವೆಂದು ಅಭಿಪ್ರಾಯಪಟ್ಟರು.

ಈ ಲಕ್ಷಣವು ಸಮಸ್ತ ಸಾಹಿತ್ಯಕ್ಕೂ ಅನ್ವಯಿಸುವುದಲ್ಲ; ಅದೊಂದು ಕವಿತೆಯ ವಿಶಿಷ್ಟ ಲಕ್ಷಣವಲ್ಲ. ಚಮತ್ಕೃತಿಯಿಲ್ಲದ ಉಪನ್ಯಾಸವು ಆವುದೇ ಆಗಿರಲಿ ನೀರಸವಾಗುವುದು. ಪದ್ಯವು ಹೆಚ್ಚಾಗಿ ವಿಶಿಷ್ಟ ಧ್ಯೇಯವೊಂದರ ಪ್ರತಿಭಾನವೆಂದು ಹೇಳಬಹುದು. ಕವಿತೆಯ ವಸ್ತು ಸತ್ಯದಿಂದ ಅಭಿನ್ನವಾಗಿದ್ದು ಶೈಲಿಯು ಗಂಭೀರವಾಗಿರಬೇಕು. ಸೌಂದರ್ಯವು ಸತ್ಯವಿದ್ದಲ್ಲಿ ಬಂದೇ ಬರುವುದು. ಇದರಿಂದ ಗದ್ಯವು ಅಸತ್ಯಮಯವಾಗಿಯೂ ಅಶ್ಲಿಷ್ಟವಾಗಿಯೂ ಇರುವುದೆಂದು ಹೇಳಿದಂತಾಗುವುದಿಲ್ಲ. ಕವಿತಾ ನಿರ್ಮಾಣಕ್ಕೆ ಸೌಂದರ್ಯವೂ ವಿಶಿಷ್ಟಧ್ಯೇಯವೂ ಮೂಲಸ್ಥಿತಿಯಾದ ಕಾರಣ, ಕವಿಯು ಅನಿಷ್ಟವಾದುದನ್ನು ಬಿಟ್ಟುಕೊಟ್ಟು ಅನುಚಿತವಾದುದನ್ನು ಅನ್ಯಥಾ ಪರಿಕಲ್ಪಿಸಿ, ಕಾರ್ಯಕಾರಣಗಳನ್ನು ನಿಕಟ ಸಂಬಂಧದಲ್ಲಿಟ್ಟು, ತಿಳಿಯಲ್ಪಡಬೇಕಾದ ವಸ್ತು ಮಂದಟ್ಟಾಗುವಂತೆ ಮಾಡಿಕೊಡುವನು. ಗದ್ಯವಾದರೊ ನಿರಂಕುಶಪ್ರಭುತ್ವವಾಗಿ ಬರೆಹಗಾರನಿಗೆ ಈ ತೆರೆದ ಸ್ವಾತಂತ್ರ್ಯವನ್ನು ಇತ್ತರೂ, ವಸ್ತುವಿನ ಅನ್ಯಥಾಕಾರಣದಲ್ಲಿ ಕವಿಗಿದ್ದಷ್ಟು ಶೀಲವು ಲೇಖಕನಿಗಿರುವುದಿಲ್ಲ; ಕವಿ ಕಂಡದ್ದು ರವಿ ಕಂಡಿಲ್ಲವೆಂಬಂತೆ ಕವಿಯು ತನ್ನ ಲೇಖನಿಯನ್ನು ಹಿಡಿದನೆಂದರೆ, ಆತನ ದೃಷ್ಟಿಯು ದಶದಿಕ್ಕುಗಳನ್ನೂ ವ್ಯಾಪಿಸಿ ಸೂರ್ಯನ ಬೆಳಗಿನಂತೆ ಮೂಲೆ ಮೂಲೆಗೂ ಹೊಕ್ಕು ಅಸತ್ಯವನ್ನೂ ಸತ್ಯವನ್ನೂ ಹೊರಗೆಳೆದು ಸ್ವರ್ಗ ಮರ್ತ್ಯಪಾತಾಳಗಳನ್ನು ಶೋಧಿಸಿ, ಭೂತಭವ್ಯ ಭವಿಷ್ಯತ್ತುಗಳನ್ನು ಸೆರೆಹಿಡಿದು, ಸ್ತ್ರೀ ಪುರುಷರ ಹೃದಯಗುಹೆಗಳನ್ನು ಪ್ರಕಾಶಿಸಿ ವಿಚಿತ್ರ ರೀತಿಯಲ್ಲಿ ವರ್ಣಿಸಿ ಹೃದಯಂಗಮವಾಗುವಂತೆ ಸೌಂದರ್ಯದ ರೂಪವನ್ನು ತೋರಿಸುವನು. ಲೇಖಕನಾದರೊ, ಹಿಡಿದ ಲೇಖನಿಯನ್ನು ಕೆಳಗಿಡಬೇಕಾದರೆ, ಒಂದು ವಿಷಯವನ್ನು ನೂರಾರು ದೃಷ್ಟಿಗಳಿಂದ ಪರಿಶೀಲಿಸಿ, ವಿಮರ್ಶಿಸಿ, ಸರಿಪಡಿಸಿ, ಒಟ್ಟುಗೂಡಿಸಿ ಮುಂದುವರಿಯಬೇಕಾದ ಕಾರಣ ಆತನ ದೃಷ್ಟಿಯು ಸರ್ವತ್ರ ವ್ಯಾಪಿಸುವ ಬದಲು ಏಕತ್ರ ಸಮ್ಮಿಳಿತವಾಗುವುದು. ಕವಿಯು ಸವಿಯನ್ನೀಯುವು ದಾದರೆ, ಲೇಖಕನು ತನ್ನ ಅಭಿಪ್ರಾಯಗಳನ್ನು ಕೊಡುವನು. ಕವಿಗಳೆಂದೂ ತಮ್ಮ ಹೊಸ ವಿಚಾರಕೊಡುವಂತೆ ಕಂಡುಬರುವುದಿಲ್ಲ. ವಿಚಾರಗಳ ನಿರ್ಮಾಣವು ಧರ್ಮಾಚಾರ್ಯರ ಕೆಲಸವು. ಲೋಕದಲ್ಲಿ ಪ್ರಸಿದ್ಧವಾದ ವಿಚಾರಗಳನ್ನು ಸಮಾಲೋಚಿಸಿ ಹೊಸವೇಷದಲ್ಲಿ (ಅಗತ್ಯವಿದ್ದರೆ) ಹೃದಯಾಹ್ಲಾದಕರವಾಗುವಂತೆ ಮಧುಮಧುರವಾಗಿಯೂ ಕರ್ಣಾನಂದವಾಗಿಯೂ ಪುನಃ ಸೃಷ್ಟಿಸುವುದು ಕವಿಯ ಕಾರ್ಯವು. ಇದೀಗ ಗದ್ಯಕ್ಕೂ ಪದ್ಯಕ್ಕೂ ಇರುವ ಭೇದ.

8. ಸಾಹಿತ್ಯದ ವಿಷಯವಾಗಿ ಪೂರ್ವಿಕರ ಅಭಿಪ್ರಾಯವು ವಸ್ತುವಾದವಾಗಿರುತ್ತದೆ. ಶಬ್ದ ಜೋಡಣೆಯನ್ನು ಅವರು ದೇಹಕ್ಕೂ ಕಾವ್ಯದ ಚಮತ್ಕೃತಿಯನ್ನು ಒಡವೆಗಳಿಗೂ ಹೋಲಿಸುವರು. ಅದರಿಂದ ಅವರ ಕವಿತೆಯು ಹೆಚ್ಚಾಗಿ ಇಂದ್ರಿಯಾರ್ಥವಾಗಲು ಅನುವಾಯ್ತು. ದೇಹಸೌಂದರ್ಯವೇ ಸರ್ವಸ್ವವೆಂದು ಅವರು ತಿಳಿದಂತೆ ತೋರುತ್ತದೆ. ಎಂದಿನವರೆಗೆ ದೇಹಸರ್ವಸ್ವವಾದ ಹೃದಯವು ಗೌಣವಾಗಿದ್ದಿತೋ ಅಂದಿನವರೆಗೆ ಕವಿತೆಯು ಕವಿತೆಯೇ ಅಲ್ಲ. ಕವಿತೆಯ ಸೌಂದರ್ಯವು ಪ್ರಾಸದಲ್ಲಿಯೂ ಅಲಂಕಾರಗಳಲ್ಲಿಯೂ ಇರುವುದಿಲ್ಲ. ಹೃದಯವೆ ಸತ್ಯವು; ಉಳಿದುದು ಕೃತ್ರಿಮವು.

ಸಾಹಿತ್ಯವನ್ನು ದೇಹಕ್ಕೆ ಹೋಲಿಸಲಾಗದು. ಕವಿತೆಯ ವಿಷಯವಾಗಿ ಇಂದಿನ ಅಭಿಪ್ರಾಯವು ಛಾಯಾವಾದವಾಗಿರುತ್ತದೆ. ಮನುಷ್ಯನ ಹೃದಯದ ಛಾಯೆಯನ್ನು ಪ್ರತಿಬಿಂಬಿಸುವೇ ಕವಿತೆಯ ತತ್ತ್ವವಾಗಿರುತ್ತದೆ. ವಸ್ತುವಾದಕ್ಕೂ ಛಾಯಾವಾದಕ್ಕೂ ಇರುವ ಭೇದವು ಹಳಗನ್ನಡಕ್ಕೂ ಹೊಸಗನ್ನಡಕ್ಕೂ ಇರುವ ಅಂತರವು. ಪೂರ್ವಿಕರ ಕವಿತೆಯು ವಸ್ತುವಾದದ ವಿವರಣೆಯಾಗಿದ್ದು ಅದೆಲ್ಲವೂ ವರ್ಣನಾತ್ಮಕವಾಗಿದೆ. ವೃಕೋದರನು ಭದ್ರಾವತಿಗೆ ಯಜ್ಞಾಶ್ವವನ್ನು ತರಲು ಹೋಗುವಂದು ಮಾರ್ಗದಲ್ಲಿ ಆತನು ಹೊಲಗಳ ವರ್ಣನೆಯನ್ನು ಮಾಡಿ ಪಾಮರಿಗಳ ಸೌಂದರ್ಯವನ್ನು ಅಲಂಕಾರಿಕ ಭಾಷೆಯಿಂದ ಹೊಗಳದಿದ್ದರೆ ಕಾವ್ಯವು ಮಹಾಕಾವ್ಯವಾಗದು. ಈ ವರ್ಣನೆಗಳನ್ನು ಓದಿ ನಾವು ನಲವೇರುವುದಿಲ್ಲವೆಂದಲ್ಲ. ಅಂತೆಯೇ ನಗರಾರ್ಣವಶೈಲರ್ತು ಮೊದಲಾದವುಗಳ ವರ್ಣಣೆಯು ಛಾಯಾವಾದದ ಕವಿತೆಯಲ್ಲಿ ಇಲ್ಲವೆಂದಲ್ಲ.

ನೋಡದೋ ನೋಡಲ್ಲಿ ಭೂಮಿ ಆಕಾಶಗಳು ಕೂಡುವೆಡೆಯಲ್ಲಿ
ಬೈಗಿನಾ ಚಿಲುಮೆಯದು ಚಿಮ್ಮುತಿಹುದಲ್ಲಿ ॥ – ತಳಿರು

ಕವಿಯ ಭಾವನಾತರಂಗವನ್ನೂ ಮನಃಸಂತೋಷವನ್ನೂ ಒಮ್ಮೆಲೆ ತಿಳಿಯಬಹುದು. ಇದು ಛಾಯಾವಾದದ ಸಂಧ್ಯಾವರ್ಣನವು. ವಸ್ತುವಾದದ ಪಾತ್ರಃಕಾಲವರ್ಣನೆಯನ್ನು ಪರಿಶೀಲಿಸಿ –

ಮೂಡುದೆಸೆಯೊಳ್ ಕೆಂಪು ದೊರೆಯೆ, ತಾರೆಗೆ ಪರೆಯೆ
ಕೂಡೆ ತಂಗಾಳಿ ಮುಂಬರಿಯೆ, ಕಮಲಂ ಬಿರಿಯೆ,
ನೈದಿಲೆಯ ಸೊಂಪು ಮುರಿಯೆ ।
ಬೀಡುಗೊಂಡಿರ್ದ ಕತ್ತಲೆಯ ಪಾಳೆಯಮೆತ್ತ
ಲೋಡಿದುದೊ ನೋಡಿದಪೆನೆಂದು ಪೂರ್ವಾಚಲದ
ಕೋಡುಗಲ್ಲಂ ಪತ್ತುವಂತೆ ಮೆರೆದಂ ಪ್ರಭೆಯೊ
ಳಾನುತ್ಯನಾದಿತ್ಯನು ॥ – ಲಕ್ಷ್ಮೀಶ

ಛಾಯಾವಾದದ ವರ್ಣನೆಯಿನ್ನೊಂದನ್ನು ಅವಗಾಹಿಸಿ –

ಅನ್ನ ಬ್ರಹ್ಮದ ದೇಗುಲದಲ್ಲಿ
ಬೆಳಗೂ ಬೈಗೂ ಛಳಛಟ ಬೆಂಕಿ,
ಡೊಂಬರ ಪೂಜೆಯ ಕಾಗೆಯ ಮಂತ್ರ
ಅನ್ನಬ್ರಹ್ಮದ ದೇಗುಲದಲ್ಲಿ ॥ – ಹಕ್ಕಿಹಾರುತಿದೆ

ಈ ವರ್ಣನೆಯು ಎಷ್ಟು ಪ್ರತಿಭಾಸಂಪನ್ನವಾಗಿದೆ. ಅದರಲ್ಲೆಷ್ಟು ಅರ್ಥಗಾಂಭೀರ್ಯ ವಿರುವುದು. ಡೊಂಬರ ಪೂಜೆ! ನಿಜವಾಗಿಯೂ ಲೋಕದಲ್ಲಿ ಹೊಟ್ಟೆಗಾಗಿ ನಡೆಯುವುದು ಡೊಂಬರಾಟವೆ? ಇಂತಿಷ್ಟು ವರ್ಣನೆಯಲ್ಲಿ ಇರುವ ತತ್ತ್ವವೇನು? ಇರಲಿ.

9. ಹೊನ್ನ ಪಂಪ ಮೊದಲಾದವರು ಪ್ರಕೃತಿಯ ಸೊಬಗನ್ನು ವರ್ಣಿಸುವಾಗ ಕೇವಲ ನಯನಗಳನ್ನೂ ಕರ್ಣಗಳನ್ನೂ ಪ್ರಧಾನವಾಗಿಟ್ಟುಕೊಂಡರು. ಪ್ರಕೃತಿಯ ಸೊಬಗನ್ನು ಇಂದ್ರಿಯಾರ್ಥವಾಗಿ ವರ್ಣಿಸುವುದಾದರೆ – ಆ ವರ್ಣನೆಯು ಅನಗತ್ಯವು. ಪ್ರತ್ಯಕ್ಷ ಪ್ರಕೃತಿಯನ್ನು ಕಂಡು ಮಾನವನು ಬೆರಗಾಗುವುದಿಲ್ಲವೇ? ಹಾಗೆಂದ ಮೇಲೆ ಕವಿಯೇಕೆ ಕೇವಲ ವರ್ಣನೆ ಮಾಡುವುದು? ಪ್ರಕೃತಿಯ ಸೊಬಗಿನಲ್ಲಿ ತಲ್ಲೀನನಾಗುವ ಕವಿಯು ಬೇಕಾದರೆ ತನ್ನ ಆನಂದವನ್ನು ವಿವರಿಸಲಿ. ವರ್ಡ್ಸ್‌ವರ್ತ್ ಮಹಾಕವಿಯು ಪ್ರಕೃತಿಯ ಕವಿಯು. ಆತನ ಕವಿತೆಯೆಲ್ಲವೂ ಕೇವಲ ಪ್ರಕೃತಿಯನ್ನೇ ಅವಲಂಬಿಸಿರದೆ "ಮನುಷ್ಯನು, ಜೀವನವು ಮತ್ತು ನಿಸರ್ಗವು" –ಈ ಮೂರರ ಮೇಲೆ ಹೊಂದಿಯುಂಟು. ಆತನ ನಿಸರ್ಗವರ್ಣನೆಯು ತನ್ನ ಹೃದಯದ ಆನಂದರೂಪವಾಗಿರುವುದು. ಕಾಮನ ಬಿಲ್ಲಿನಿಂದ ಪ್ರೇರಿತವಾದ ಪದ್ಯದಲ್ಲಿ ಆತನ ಹೃದಯಾನಂದವು ಎಷ್ಟು ತೋರಿಬರುವುದು? ಅದಕ್ಕೀಗ ಭಾವಗೀತೆಯೆನ್ನುವುದು. ಕೇವಲ ಆಕಾಶದಲ್ಲಿ ವಿವಿಧ ಬಣ್ಣದ ಬಿಲ್ಲೊಂದು ತೋರಿಬಂದು ನೀಲಾಕಾಶದ ನೀಲಿಮೆಯ ಹೊಳವಿನಲ್ಲಿ ಅದರಂತೆ ಇದರಂತೆ ಹಾಗಿದ್ದರೂ ಹೀಗಿದ್ದರೂ ಮೇಲಿಂದ ಕೆಳತೋರಿ ಕೆಳಗಿಂದ ಮೇಲ್ತೋರಿ ಮಾಯವಾಯ್ತು ಎಂಬುವ ಪ್ರಕಾರ ಬರದೆ ಕವಿತೆಯು ನೀರಸವಾದುದು. ಆನಂದ ಕಾರಣವನ್ನು ಸೂಚಿಸುವ ಬದಲು ವರ್ಡ್ಸ್‌ವರ್ತನು ಆನಂದವನ್ನೇ ರೂಪಿಸುವನು. ಯಾವ ಪ್ರಕೃತಿಯ ಸೊಬಗೇ ಆಗಲಿ–ಅದನ್ನು ಸಾಹಿತ್ಯದಲ್ಲಿ ರೂಪಿಸಬೇಕಾದರೆ ಅದು ಮಾನವನ ಜೀವನಕ್ಕೆ ಅನುವರ್ತಿಸುವುದಾಗಿರಬೇಕು. ಕವಿಯು ಪ್ರಕೃತಿಯ ಸೊಬಗಿನಲ್ಲಿ ತಲ್ಲೀನನಾಗಲಿ, ಆದರೆ ಪ್ರಕೃತಿಯೆ ಸರ್ವಸ್ವವೆಂದು ಆತನು ತಿಳಿಯಬಾರದು. ಪ್ರಕೃತಿಯ ಮೇಲೆ ಮನುಷ್ಯನ, ಮನುಷ್ಯನ ಮೇಲೆ ಪ್ರಕೃತಿಯ, ವರ್ಚಸ್ಸನ್ನು ಎಷ್ಟು ಮಾತ್ರಕ್ಕೂ ಅವಗಾಹನೆಯಿಂದ ದೂರವಿರಿಸಲಾಗದು. ಹೇಗೂ ಇರಲಿ, ಸಾಹಿತ್ಯವು ಹೃದಯಾನುವರ್ತಿಯಾದರೆ ಅದು ತನ್ನಷ್ಟಕ್ಕೆ ತದ್ಗಮ್ಯವಾಗುವುದೆಂದೇ ಹೇಳಬಹುದು.

10. ಹಳಗನ್ನಡದ ಕವಿತೆಯ ವಸ್ತುವಿಗೂ ಹಳಗನ್ನಡ ಕಾವ್ಯದ ವಸ್ತುವಿಗೂ ತುಂಬಾ ಹೆಚ್ಚುಕಡಿಮೆಯುಂಟು. ಹಳಗನ್ನಡದ ಯಾವ ಕಾವ್ಯವೇ ಆಗಲಿ ಅದು ಕಥಾಶ್ರಿತವಾಗಿರುವುದು. – ಕಥಾರೂಪದಲ್ಲಿ ಆಧುನಿಕರು ಬರೆಯುವುದಿಲ್ಲವೆಂತಲ್ಲ. ಆದರೆ ಹಳಬರು ತಮ್ಮ ಯಾವ ಕವಿತೆಯೆ ಆಗಲಿ ಅದು ಕಥಾರೂಪವಾಗಿರುವಂತೆ ಬಾಹುಲ್ಯವಾಗಿ ಮಾಡುತ್ತಿದ್ದರು. ಇದು ಸಂಸ್ಕೃತಭಾಷೆಯ ಸಂಬಂಧದಿಂದಾಗಿರುತ್ತದೆ. ಇಂದಿನ ಕರ್ಣಾಟಕಕವಿತೆಯಲ್ಲಿ ವಸ್ತುವು ಕಥಾಶ್ರಯವೇ ಆಗಿಲ್ಲ. ಕವಿಗಳಿಂದು ಯಾವ ಆಶ್ರಯವೂ ಇಲ್ಲದೇ ಹಾಡಬಲ್ಲರು. ಸಮಯಕ್ಕೆ ಧನ್ಯವಾದವಿರಲಿ! ಪೂರ್ವಿಕರ ಕವಿತೆಯೆಂದರೆ ರಾಕ್ಷಸರೊಡನೆ ಯುದ್ಧ, ದೇವತೆಗಳ ಮಧ್ಯಸ್ಥಿಕೆ– ಮೊದಲಾದುವುಗಳಿಂದ ಕೂಡಿದ್ದು ಸಂಕೋಚಭಾವವನ್ನೂ ಬೇಸರವನ್ನೂ ಹುಟ್ಟಿಸುತ್ತದೆ. ಒಬ್ಬ ಅರಸನು ಪ್ರಾತಃಕಾಲದ ಚಂದ್ರನನ್ನು ಕಂಡೊಡನೆ ವಿರಕ್ತನಾಗಿ ರಾಜ್ಯವನ್ನು ತ್ಯಜಿಸಿ, ಅರಣ್ಯಗಳಿಗೆ ತೆರಳಿ, ಅನಶನವ್ರತದಿಂದ ಜೀವನ್ಮುಕ್ತನಾದನು. ಇಂತಹ ಪ್ರಸಂಗಗಳು ಒಂದೇ ಕಾವ್ಯದಲ್ಲಿ ಹಲವಿರುವುದುಂಟು. ಪೂರ್ವಕಾಲದ ಕವಿಗೆ ಈಗಿರುವಷ್ಟು

ಸ್ವಾತಂತ್ರ್ಯವಿದ್ದಿಲ್ಲ. ಕವಿಸಮಯವು ಆತನಿಗೆ ದೈವೀ ಧರ್ಮವಾಗಿತ್ತು. ಆತನು ಛಂದಸ್ಸಿನ ಸೇವಕನಾಗಿದ್ದನು. ಕಾಲದ ಹಾಗೂ ಸಾಹಿತ್ಯದ ಸ್ಥಿತಿಗಳನ್ನು ತಾನು ಬದಲಾಯಿಸುವ ಬದಲು, ಆ ಸ್ಥಿತಿಗತಿಗಳು ತನ್ನನ್ನು ಬದಲಾಯಿಸಲು ಒಪ್ಪಿಕೊಳ್ಳುತ್ತಿದ್ದನು.

11. ಇಷ್ಟೆಲ್ಲ ನ್ಯೂನತೆಗಳು ಹಳಗನ್ನಡದ ವರ್ಚಸ್ಸನ್ನು ಕಡಿಮೆ ಮಾಡುವುದಿಲ್ಲ. ಹಳಗನ್ನಡದ ಸಾಧುತ್ವವನ್ನೂ ಗಾಂಭೀರ್ಯವನ್ನೂ ಹೆಚ್ಚಳವನ್ನೂ ನಾವು ಬಲ್ಲೆವು. ಹೊಸಕವಿತೆಯೊಡನೆ ಹೋಲಿಸುವಾಗ ಹೊಸಕವಿಗಳ ಅನುಭವಕ್ಕಾಗಿ ಹಲಕೆಲವು ನ್ಯೂನತೆಗಳನ್ನು ತೋರಿಸಿಕೊಡಬೇಕಾಯ್ತು. ಹೀಗಿದ್ದರೂ ಹಳಗನ್ನಡದ ಅಭ್ಯಾಸದಿಂದ ಅತಿಪ್ರಯೋಜನವುಂಟೆಂದು ಹೇಳುವೆವು. ಹೊಸಗನ್ನಡವಿಂದು ತನ್ನ ಅಭಿಪ್ರಾಯನಿರೂಪಣೆಯಲ್ಲಿ ಶಬ್ದಗಳ ಅಪ್ರಾಪ್ಯತೆಯಿಂದ ಕ್ಲೇಶ ಪಡುತಿದೆಯಾದರೆ, ಅದರ ಕಾರಣವನ್ನು ಹಳಗನ್ನಡಕ್ಕೆ ನಾವು ತೋರಿಸುವ ಉಪೇಕ್ಷೆಯೆಡೆಗೆ ತೋರಿಸಬಹುದು. ಹೊಸಗನ್ನಡದಲ್ಲಿ ಶಬ್ದ ಪ್ರಾಚುರ್ಯವಿರುವುದಿಲ್ಲ. ಬರೆಹಗಾರನಿಗೆ ವಾಕ್ಯಗ್ರಥನದಲ್ಲಿ ಶಬ್ದಗಳು ಸಿಕ್ಕದೆ, ಆತನ ವಾಕ್ಯಗಳು ನೇಯಾರ್ಥದೋಷಕ್ಕೂ ಇನ್ನಿತರ ದೋಷಗಳಿಗೂ ಗುರಿಯಾಗುವವು. ಹಳಗನ್ನಡವನ್ನು ನಾವು ಯತ್ನದಿಂದ ಅಭ್ಯಾಸಮಾಡುವುದಾದರೆ, ನಮ್ಮೀ ದುರ್ಗತಿಯನ್ನು ಹೋಗಲಾಡಿಸಬಹುದು. ಶಬ್ದಸಹಾಯವನ್ನು ಹಳಗನ್ನಡದ ಕವಿಗಳಿಂದಲೇ ಪಡೆದುಕೊಳ್ಳಬೇಕಾಗಿದೆ.

12. ವಿಹಂಗಮ ದೃಷ್ಟಿಯಿಂದ ಕವಿತೆಯ ವಿಷಯವಾಗಿ ನಾಲ್ಕಾರು ವಿಷಯಗಳನ್ನು ಪ್ರಸ್ತಾಪಿಸುವಾಗ ಹೊಸಗನ್ನಡವನ್ನು ಹಳಗನ್ನಡದೊಡನೆ ಹೋಲಿಸಿರುವೆವು. ಈ ಪ್ರಕಾರದಲ್ಲಿ ಹಳಗನ್ನಡ ಕವಿತಾರೀತಿಯಿಂದ ಭಿನ್ನವಾದಂತಹ ಆಧುನಿಕರ ಶೈಲಿಯು ಸಮಯ ಗತಚರಿತ ಉಳ್ಳದ್ದಾದರೂ, ಇಂದಿನ ಕವಿತೆ ಶಾಶ್ವತವಾಗಿ ಉಳಿಯುವುದೇ?ನಶ್ವರವಾಗಿ ಅಳಿಯುವುದೇ? ಎಂಬ ಪ್ರಶ್ನೆಯು ಹುಟ್ಟುತ್ತದೆ. ಈ ವಿಷಯದಲ್ಲಿ ಹಲವರ ಅಭಿಪ್ರಾಯವು ಹಲವು ರೀತಿಯಲ್ಲಿರುತ್ತದೆ. ತೀರ ಆಧುನಿಕರೆಂದು ಹೇಳಿಸಿಕೊಳ್ಳುವವರೂ ಕೂಡ ಆಧುನಿಕ ಕವಿತೆಯಲ್ಲಿ ಸಂಶಯಗ್ರಸ್ತರಾಗಿರುವರು. ಆಧುನಿಕರಲ್ಲಿ ಪ್ರತಿಯೊಬ್ಬನ ಪ್ರತಿಯೊಂದು ಕವಿತೆಯೂ ಶಾಶ್ವತವಾಗಿರುವುದೆಂದು ನಾವು ಒಪ್ಪುವುದಿಲ್ಲವಾದರೂ, ಆಧುನಿಕ ಕವಿತೆಯೇ ನಿಸ್ಸಾರವಾಗಿದ್ದು ನಶ್ವರವೆಂದು ಹೇಳುವಂಥ ಧೃಷ್ಟತನವು ನಮ್ಮಲ್ಲಿರುವುದಿಲ್ಲ. ಆಧುನಿಕ ಕವಿತೆಯು ನಶ್ವರವಾಗಲಿ, ಶಾಶ್ವತವಾಗಲಿ, ಅದು ಇಂದಿನ ಜನತೆಯ ನಿರ್ದುಷ್ಟಹೃದಯಕ್ಕೆ ಸರಿಯಾಗಿ ಅನುವರ್ತಿಸಿ ಇರುವುದಾದರೆ, ಅದು ತನ್ನ ಜೀವಿತದ ಪ್ರಯೋಜನವನ್ನು ಪಟ್ಟಂತಾಗುವುದು. ಕವಿಯು ಪ್ರಲಯಾತೀತನೆಂದು ನಾವು ಹಿಗ್ಗುವಾಗ ಕವಿತೆಯು ಯುಗಾವರ್ತಿಯೆಂದು ನಾವು ಹೇಳಿದಂತಾಗುವುದಿಲ್ಲ. ಈಶ್ವರ ಕೃತವಾದ ಸೃಷ್ಟಿಯು ಪ್ರಲಯಕ್ಕೆ ಅಧೀನವಾಗಿರುವಾಗ ಮಾನವೀವಚನಗಳು ಮರವೆಯ ಬಾನಿನಲ್ಲಿ ಅಡಗವು ಎಂದು ಹೇಳಬರುವುದಿಲ್ಲ. ಒಬ್ಬಿಬ್ಬ ಕವಿಯು ನಾಲ್ಕೆರಡು ಕಾವ್ಯಗಳು ಆಚಂದ್ರಾರ್ಕವಾಗುವುದಾದರೆ, ಆ ಕಾವ್ಯಗಳ ಭಾಷೆ ಕೂಡ ಶಾಶ್ವತವಾಗಿಲ್ಲವೆಂದು ಹೇಳಿದರೆ, ಹೆಚ್ಚು ವಿವರಣೆಯ ಅಗತ್ಯವೇ ಇರುವುದಿಲ್ಲ.

13. ಆಧುನಿಕ ಕವಿತೆಯು ಆಧುನಿಕ ಕಾಲಕ್ಕೆ ಸಮೀಚೀನವಾಗಿದ್ದು ವಿರೋಧವಾಗಿಲ್ಲದಿದ್ದರೆ,

ಆಧುನಿಕ ಕಾಲದವರೆಗೆ ಅದು ಖಂಡಿತವಾಗಿ ಉಳಿಯುವುದು. ನಾವೀಗ ಉಳಿಯುವುದೇ ಎಂಬ ಪ್ರಶ್ನೆಯನ್ನು ಎತ್ತುವುದಾದರೆ,–ಇಲ್ಲವೆ ಕವಿಗಳು ದುಷ್ಟಹೃದಯಿಗಳಾಗಿರಬೇಕು, ಅಥವಾ ವಿಮರ್ಶಕರು ತಮ್ಮ ಕಾಲದ ನಿಜಪ್ರವೃತ್ತಿಯ ಜ್ಞಾನದಿಂದ ಶೂನ್ಯರಾಗಿರಬೇಕು. ಕಾಲವು ಭಿನ್ನವಾಗುವುದಾದರೆ, ಕಾಲವು ಗತಿಸುವುದಾದರೆ – ಅಲ್ಲ –ಕಾಲವು ಮುಂದರಿಯುವುದಾದರೆ, ಹೃದಯವು ಕಾಲದ ಸುಳಿಯಲ್ಲಿ ಆವಾಗಲೂ ಸಿಲುಕಿರುವುದಾದರೆ, ಆವರ್ತಿಸುವ ಕಾಲದೊಡನೆ ಕವಿತೆಯೂ ತಿರುಗಬೇಕು. ಏಕೆಂದರೆ, ಹೃದಯವೇ ಕವಿತೆಯ ಜೀವಾಳ. ಹೃದಯವು ಸದಾ ಕಾಲ ಆನಂದಮಯವಲ್ಲ. ದುಃಖದ ರೂಪವು ಆಗಾಗ ಬೇರೆಯಾಗುವುದುಂಟು. ಹೃದಯದ ಸ್ಥಿತಿಗತಿಗಳ ಪಂಚಾಂಗದ ಮೇಲೆ ಕವಿತೆಯ ಕಟ್ಟಡವು ಏರುವುದಲ್ಲವಾದರೆ, ಸಾಹಿತ್ಯದ ಮೇಲೆ ಚರಿತ್ರೆಯ ಸ್ವರೂಪವು ಸಂಕ್ರಮಿಸುವುದು ಎಂದೂ ನಿಜವಾಗಲಾರದು. ಗತಾನುಗತಿಕವಾದ ಲೋಕಧರ್ಮ ಹಾಗೂ ಮರ್ಮವು ಆವರ್ತನೆಗೆ ಬಲಿಯಿರುವಾಗ, ಧರ್ಮಮರ್ಮಗಳ ತಿದಿಯೊತ್ತುವಿಕೆಯಿಂದ ಪ್ರಜ್ವಲಿಸಲ್ಪಡುವ ಹೃದಯವು ಸ್ವತಂತ್ರವಾಗಿ ನಿಂತು ಬಿಡಲಾರದು. ಕಾಲವು ಗೌಣವೆಂದೂ ಹೃದಯವು ಪ್ರಧಾನವೆಂದೂ ಹೇಳಿ ಕೇವಲ ಹೃದಯಕ್ಕೆ ಸಂಬಂಧವಾದ ಕವಿತೆಯೆ ಕವಿತೆಯೆಂದೆನಿಸಿಕೊಳ್ಳುತಿದೆ ಎಂದು ಅಭಿಪ್ರಾಯಪಡುವಿರಾದರೆ, ಕವಿತೆಯೊಂದು ಕಲೆಯಾಗದು. ವಿಜ್ಞಾನ ಶಾಸ್ತ್ರಗಳು ಮಾತ್ರ ನಿರಾಧಾರವೂ ಕೇವಲವೂ ಅಭಿನ್ನವೂ ಅಲ್ಲದೆ, ಕಲೆ ಎಂದೂ ಹಾಗಲ್ಲ. ಕವಿತೆಯು ಕಲಾಭೂಯಿಷ್ಠವಾಗುವುದು. ಒಂದು ಕಾಲದ ಕಲೆಗೂ ಇನ್ನೊಂದು ಕಾಲದ ಕಲೆಗೂ ಭೇದವಿರುವುದಾದರೆ, ಕಲೆಯು ಕಾಲಗತ ಪ್ರತಿಭೆಯೆಂದು ಊಹಿಸಬಹುದು. ಕಾಲಗತವಾಗಲಿ ಕಾಲ ನಿರ್ಗತವಾಗಲಿ ಕಲೆಯು ಮನುಷ್ಯನ ಕೌಶಲವಾಗ ಕಾರಣ, ಸುತ್ತ ಮುತ್ತಲಿನ ವಾತಾವರಣದಿಂದ ಅದು ತನ್ನನ್ನು ಅಡಗಿಸಲಾರದು.

14. ಕವಿತೆಯು ಸತ್ಯಸ್ವರೂಪವಾಗಿ ಸೌಂದರ್ಯಯುಕ್ತವಾದರೆ, ಆನಂದಮಯವಾಗಿ ಚಿರಕಾಲ ಬಾಳುವುದು. ಸತ್ಯದ ಬಾಹ್ಯ ಸ್ವರೂಪವಾದ ಕಲೆಯು ಮಾನವನ ದೃಷ್ಟಿಯಲ್ಲಿ ಶಾಶ್ವತವಲ್ಲವಾದರೂ, ಸತ್ಯವನ್ನು ಒಮ್ಮೆ ಮೆರೆಯಿಸಿದ ಆ ಕಲೆಯು ಇನ್ನೊಮ್ಮೆಗೆ ನೀರಸವಾಗಲಾರದು. ಜಗತ್ತಿನಲ್ಲಿ ತತ್ತ್ವಗಳನ್ನು ಸರಿಯಾದ ಪರೀಕ್ಷೆ ಮಾಡಿ, ಕಾರ್ಯಕಾರಣಗಳ ಸಂಬಂಧಗಳನ್ನು ಸರಿಯಾಗಿ ವಿಂಗಡಿಸಿದ ಕಲಾತ್ಮಕವಾದ ಕವಿತೆಯು ಜನತೆಯ ರುಚಿಯು ಭಿನ್ನವಾದರೂ, ತನ್ನ ಸ್ಥಿತಿ ಸೌಂದರ್ಯದಲ್ಲಿ ತಾನು ಭಿನ್ನವಾಗಲಾರದು. ಆವರ್ತಿಸುವ ಕಾಲದೊಡನೆ ಕವಿತೆಯೂ ಉರುಳುವುದಾಗಿ, – ಕಾಲವು ಗತಪ್ರಾಯವಾದರೂ ತಾನು ಅಳಿಯುವುದಿಲ್ಲ – ಕಾರಣ, ಅದರಲ್ಲಿ ಕಾಲವೊಂದರ ಸ್ಥಿತಿಗತಿಗಳ ಸತ್ಯಸ್ವರೂಪವು ಉಲ್ಲೇಖಿತವಾಗಿರುವುದು. ಕಲೆಯು ಶಾಶ್ವತವಲ್ಲವೆಂದು ಅಭಿಪ್ರಾಯಪಡುವಾಗ, ಕಲೆಯು ನಿಶ್ಚಲವಲ್ಲವೆಂದು ನಮ್ಮ ಅರ್ಥ. ಕಲೆಯು ಪ್ರವರ್ಧಮಾನವಾಗಿ ಮುಂದುವರಿಯುತ್ತಲೇ ಇರುವುದು. ಇಂದಿನ ಕಲೆಯು ನಾಳೆಗೆ ಗ್ರಾಹ್ಯವಾಗುವುದಿಲ್ಲವಾದರೆ, ಮಾನವನಿಗೆ ಚರಿತ್ರೆಯಲ್ಲಿ ಅಭಿಮಾನವಿದ್ದಂತೆ ತೋರಲಾರದು. ಆದರೆ ಮಾನವನಿಗೆ ಚರಿತ್ರೆಯಲ್ಲಿ ನಿರತಿಶಯವೂ ಅಪ್ರಮೇಯವೂ ಆದ ಅಭಿಮಾನವಿದೆ. ಸಣ್ಣ ಸಣ್ಣ ಮಕ್ಕಳು ಕೂಡ ತಮ್ಮ ಅಜ್ಜಮುತ್ತಜ್ಜರ ಕತೆಗಳನ್ನು

ಕೇಳುವುದರಲ್ಲಿ ಬಹಳ ಕುತೂಹಲಿಗಳು. ಅಂತೂ, ಇಂದಿನ ಕವಿತೆಯು ಇಂದಿನ ಛಾಯೆಯಾದರೆ, ಅದರಲ್ಲಿ ಇಂದಿನ ಸೌಂದರ್ಯವಿದ್ದರೆ, ಅದು ಇಂದಿನ ಕಲಾತ್ಮಕ ದೃಷ್ಟಿಗೆ ಒಪ್ಪುವುದಾದರೆ, ಅದು ನಾಳೆಗೂ ನಾಳಿದಿಗೂ – ಮರವೆಯ ಮೋಡವು ಅಡ್ಡಬರುವುದಿಲ್ಲವಾದರೆ, ಜನತೆಯು ಕಲೆಯಲ್ಲಿ ಅಭಿರಕ್ತವಾಗಿ ಉಳಿಯುವುದಿದ್ದರೆ, ಇಂದಿನ ನಮ್ಮ ಧರ್ಮವೂ ಮರ್ಮವೂ ನಾಳೆಗೂ ಕೆಲವಂಶದಲ್ಲಿ ಮೂಲತತ್ತ್ವಗಳಲ್ಲಾದರೂ ಉಳಿಯುವುದಿದ್ದರೆ ದೇಶದ ಸಂಸ್ಕೃತಿಯೂ ನಾಳೆಗೂ ಅವಂಧ್ಯವಾಗಿ ನಿಂತು ಜನತಾ ಪತನವಾಗದಿದ್ದರೆ, ನಮ್ಮ ಈ 20ನೇ ಶತಮಾನದ ಕವಿತೆಯು ಚಿರಗಾಲ ಬಾಳುವುದೆಂದು ಹೇಳುವುದರಲ್ಲಿ ಎಳ್ಳಷ್ಟೂ ಸಂಶಯವಿರುವುದಿಲ್ಲ.

ನವವರ್ಷವೇ! ನೀನು ಜೀವನದ ರಂಗದೊಳು
ನವನೃತ್ಯವೆಸಗದಿರೆ ಹುರುಳದಿಹುದೇ !!

ತಿರುಗಿ,

ಬದಿಗೆ ಬಂದಿರುವ ತೆರೆಯೋಳಯಲಿ ಮುಳುಗದಿರೆ
ಕದಲದಲ್ಲಿಯೆ ನಮ್ಮ ಕಾದಿರುವುದೇ ॥ – ಅಳಿಲ ಸೇವೆ

ಎಂದು ನಾಡಿಗರಲ್ಲಿ ಬಿನ್ನವಿಸಿ,

ಸುದಿನಸೂರ್ಯನು ಸಂಜೆಮಂಜಿನೊಳು ಮರೆಯಪ್ಪ
ಮೊದಲೆ ನಮ್ಮಯ ಕೆಲಸಗಳ ಗೈವುದು ॥ – ಅಳಿಲ ಸೇವೆ

ಎಂದು ಸೂಚಿಸುವೆವು.

––––––

ಪ್ರಬುದ್ಧ ಕರ್ನಾಟಕ ಸಂ. 14 ಸಂಚಿಕೆ 3, 1931
(ಆಯ್ದು ಕೊಟ್ಟವರು : ಪ್ರೊ. ಎ.ವಿ.ನಾವಡ)

ಹೊಲದೊಳಗಿನ ಹುಲುಸು ಬೆಳೆ
ಹೊಯ್ದಾಡಿರೆ ಗಾಳಿಯಲಿ ಇಂಗಿದ
ಹನಿ ಬೆವರ ಲೆಕ್ಕ ಮಣ್ಣಿಗೂ ನೆನಪಿಲ್ಲ

# ವಿಜಯನಗರದ ಆಡಳಿತ ವ್ಯವಸ್ಥೆಯಲ್ಲಿ ನಾಯಂಕರ ಪದ್ಧತಿ

**ಎಸ್.ಕೆ. ವಾಸುದೇವ**

ಪುರಾತತ್ವ ಸಂರಕ್ಷಣಾ ಇಂಜಿನಿಯರ್, ಧಾರವಾಡ – 580001

ಪ್ರಾಚೀನ ಭಾರತದಲ್ಲಿ ರಾಜನ ಕರ್ತವ್ಯಗಳಲ್ಲಿ ಪ್ರಮುಖವಾದುದು ತನ್ನ ರಾಜ್ಯದ ಪ್ರಜೆಗಳ ಪರಿಪಾಲನೆ. ಅಂದರೆ, ರಾಜನು ತನ್ನ ರಾಜ್ಯದ ಎಲ್ಲೆಯ ಒಳಗಿರುವ ಎಲ್ಲಾ ಪ್ರಜೆಗಳ ಪ್ರಾಣ ಮತ್ತು ಆಸ್ತಿಯನ್ನು ರಕ್ಷಿಸಬೇಕಾಗಿತ್ತು. ಭಾರತದ ಅರಸು ಮನೆತನಗಳು ತಮ್ಮ ಸಾಮ್ರಾಜ್ಯದ ರಕ್ಷಣೆಗಾಗಿ ಸೈನ್ಯವನ್ನು ಹೊಂದಿರುತ್ತಿದ್ದರು. ಸೈನ್ಯದ ಖರ್ಚಿನ ನಿರ್ವಹಣೆಗಾಗಿ ಮತ್ತು ಇತರ ಖರ್ಚುಗಳನ್ನು ನಿರ್ವಹಿಸಲು ರಾಜನು ತನ್ನ ಪ್ರಜೆಗಳಿಂದ ವಸೂಲು ಮಾಡುತ್ತಿದ್ದ ಅಲ್ಪ ತೆರಿಗೆಯನ್ನು ಕಂದಾಯವೆಂದು ಕರೆಯುತ್ತಿದ್ದರು.

ಭಾರತೀಯ ಅರಸರುಗಳು ತಮ್ಮ ಆದಾಯವನ್ನು ನಾಲ್ಕು ಭಾಗವನ್ನಾಗಿ ವಿಭಾಗಿಸಿಕೊಂಡು ಒಂದು ಭಾಗವನ್ನು ಪ್ರಜೆಗಳ ಯೋಗಕ್ಷೇಮ, ಅಭಿವೃದ್ಧಿ ಹಾಗೂ ಮನೋರಂಜನೆಗೆ ವ್ಯಯಿಸಬಹುದು ಎರಡು ಭಾಗವನ್ನು ಸೈನ್ಯದ ಖರ್ಚಿಗಾಗಿ ವ್ಯಯಿಸಬೇಕು. ಒಂದು ಭಾಗವನ್ನು ರಾಜ್ಯದ ಕೋಶದಲ್ಲಿ ಸಂರಕ್ಷಿಸಿಡಬೇಕಾಗಿತ್ತು. ಇದೇ ನೀತಿಯನ್ನು ಕೃಷ್ಣದೇವರಾಯನ ಅಮುಕ್ತಮೌಲ್ಯದ ಕೃತಿಯು ಸಹ ಅನುಮೋದಿಸುತ್ತದೆ. ಇದರಿಂದ ತೆರಿಗೆಯ ಸಂಗ್ರಹಣೆ, ಸೈನ್ಯ, ಸಂಘಟನೆ ಅದರ ಪರಿಪಾಲನೆ ರಾಜನ ಆದ್ಯ ಕರ್ತವ್ಯವಾಗಿತ್ತೆಂದು ತಿಳಿದುಬರುತ್ತದೆ. ಇದು ಪರಂಪರಾನುಗತವಾದ ರಾಜನ ಕರ್ತವ್ಯಗಳಲ್ಲಿ ಸಹ ಒಂದಾಗಿತ್ತು.

ಗುಪ್ತಯುಗ ಆಡಳಿತ ಮಾದರಿಯ ತಳಹದಿಯ ಮೇಲೆ ವಿಜಯನಗರ ಸಾಮ್ರಾಜ್ಯದ ಆಡಳಿತ ವ್ಯವಸ್ಥೆ ರೂಪುಗೊಂಡಿತ್ತೆಂದು ತಿಳಿದುಬರುತ್ತದೆ. ಅಂದರೆ ಧರ್ಮ, ಧರ್ಮಶಾಸ್ತ್ರ ಮತ್ತು ಪರಂಪರೆಯನ್ನು ಆಧರಿಸಿ ರಾಜ್ಯಾಡಳಿತ ನೆರವೇರುತ್ತಿತ್ತು. ರಾಜ್ಯದಲ್ಲಿ ಸಾಮಾನ್ಯವಾಗಿ ಒಂದು ಬಗೆಯ ಗಣರಾಜ್ಯ ವ್ಯವಸ್ಥೆಯ ಅಧಿಕಾರ ಚಲಾವಣೆಯಲ್ಲಿತ್ತು. ಇಲ್ಲಿ ನಾಯಂಕರರ ಪಾತ್ರವನ್ನು ಅಧ್ಯಯನಕ್ಕೆ ಒಳಗುಮಾಡುವ ಮುನ್ನ ರಾಜ್ಯದ ಆಡಳಿತ ಕ್ರಮವನ್ನು ಸೂಕ್ಷ್ಮವಾಗಿ ಅರಿಯಬೇಕಾಗುತ್ತದೆ. ವಿಜಯನಗರ ಸಾಮ್ರಾಜ್ಯದ ಅರಸರು ಚಕ್ರವರ್ತಿ ಎನಿಸಿಕೊಂಡು ಬಹು ವಿಸ್ತಾರವಾದ ಸಾಮ್ರಾಜ್ಯವನ್ನು ತನ್ನ ಅಧಿಪತ್ಯದಲ್ಲಿ ಹೊಂದಿದ್ದರೂ ಬುಕ್ಕ ಹರಿಹರ ಇತ್ಯಾದಿ ಅರಸರು ತಮ್ಮನ್ನು ಮಹಾಮಂಡಲೇಶ್ವರರೆಂದು ಕರೆದು ಕೊಂಡರೂ ಅವರು ಅತಿವಿಸ್ತಾರವಾದ ಭೂಪ್ರದೇಶದ ಮೇಲೆ ತಮ್ಮ ಪ್ರಭುತ್ವ ಹೊಂದಿದ್ದರು. ಆದರೂ ಅವರುಗಳು ತಮ್ಮ ಸಾಮ್ರಾಜ್ಯದ ಇತರ ಭಾಗಗಳನ್ನು ಆಳ್ವಿಕೆ ಮಾಡಲು ತಮ್ಮ ಸಹೋದರರನ್ನು ಅಥವಾ ರಾಜಮನೆತನದವರನ್ನು ರಾಜ್ಯಗಳ ಅಥವಾ ವಿಶಾಲವಾದ ಪ್ರಾಂತ್ಯಗಳ ಪ್ರಾಂತ್ಯಾಧಿಪತಿಗಳಾಗಿ ನೇಮಿಸುತ್ತಿದ್ದರು. ಅವರುಗಳು "ಒಡೆಯ" ಬಿರುದಿನೊಂದಿಗೆ ತಮ್ಮ ರಾಜ್ಯದ ಪರಿಪಾಲನೆಯನ್ನು ಮಾಡುತ್ತಿದ್ದರು. ಇವರುಗಳಿಗೆ ತಮ್ಮ ರಾಜ್ಯದ ಆಂತರಿಕ ವ್ಯವಹಾರದಲ್ಲಿ

ಸಂಪೂರ್ಣ ಸ್ವಾತಂತ್ರವಿತ್ತಲ್ಲದೆ ಅವರುಗಳು ಸ್ವತಂತ್ರವಾಗಿ ದಾನಕೊಡುವ ಅಧಿಕಾರವನ್ನು ರಾಜತ್ವದ ಲಾಂಛನಗಳನ್ನು ಹೊಂದುವ ಅಧಿಕಾರ ಉಳ್ಳವರಾಗಿದ್ದರು. ಅಂದಮೇಲೆ ವಿಜಯನಗರದ ಚಕ್ರವರ್ತಿಗಳು ಹಲವಾರು ಮಂಡಲಾಧಿಪತಿಗಳ ಒಡೆಯರಾಗಿದ್ದರು. ಮಂಡಲಾಧಿಪತಿಗಳು ಮಹಾರಾಜ ರಾಜರ, ಪಾಳೆಯಗಾರ ಎಂದು ಕರೆಸಿಕೊಳ್ಳುವ ಇತರ ಕೆಳವರ್ಗದ ಆಡಳಿತಗಾರರ ಮೇಲೆ ಪ್ರಭುತ್ವ ಹೊಂದಿದ್ದರು. ಪ್ರಾಂತ್ಯಾದಿಕಾರಿಗಳ ಕೆಳಗೆ ಕಾರ್ಯನಿರ್ವಹಿಸುತ್ತಿದ್ದವರು. ಪ್ರಾಂತ್ಯಾಧಿಕಾರಿಗಳಿಗೆ ನಿಷ್ಠರಾಗಿರುತ್ತಿದ್ದರೆ ವಿನಃ ಚಕ್ರವರ್ತಿಗಳಿಗಲ್ಲ. ಈ ಬಗೆಯ ರಾಜಕೀಯ ನೀತಿಯನ್ನು ಉಮ್ಮತ್ತೂರಿನ ದಂಗೆ, ಮುಂತಾದ ಸ್ಥಾನಿಕ ಅರಸರು ವಿಜಯನಗರ ಸಾಮ್ರಾಜ್ಯದ ವಿವಿಧ ಕಾಲಘಟ್ಟಗಳಲ್ಲಿ ಕೇಂದ್ರಸರ್ಕಾರದ ವಿರುದ್ಧ ಕೈಗೊಂಡ ವಿಪ್ಲವಗಳಲ್ಲಿ ಕಾಣಬಹುದಾಗಿದೆ.

ಪ್ರಾಂತ್ಯಾಧಿಕಾರಿ, ಅಥವಾ ರಾಜಪ್ರತಿನಿಧಿಯು ಸೈನಿಕ ಅಧಿಕಾರ ಮತ್ತು ನಾಗರೀಕ ಅಧಿಕಾರವನ್ನು ಹೊಂದಿದ್ದನು. ಅವನು ನಿಷ್ಠನಾಗಿರುವಷ್ಟು ದಿನಗಳು ಅವನು ಸಾಮ್ರಾಜ್ಯದ ಅಧಿಕಾರಿಯಾಗಿರುತ್ತಿದ್ದನು. ಇಲ್ಲವೆ ಚಕ್ರವರ್ತಿಗೆ ಪ್ರತಿಸ್ಪರ್ಧಿಯಾಗುತ್ತಿದ್ದನು. ಈ ಹಂತದಲ್ಲಿ ವಿಜಯನಗರ ಸಾಮ್ರಾಜ್ಯದ ಕೆಳವರ್ಗದ ಸೈನಿಕ ಮತ್ತು ನಾಗರೀಕ ಅಧಿಕಾರಿಗಳೊಂದಿಗೆ ಪ್ರಾಂತ್ಯಾಧಿಪತಿಗಳು ಅಪಾರವಾದ ಸ್ನೇಹ ಅಥವಾ ಸಲುಗೆ ಹೊಂದದಿರಲೆಂದು ಅವರುಗಳನ್ನು ಸ್ಥಳದಿಂದ ಸ್ಥಳಕ್ಕೆ ವರ್ಗಾವಣೆ ಮಾಡುವ ಪದ್ಧತಿ ಚಾಲ್ತಿಯಲ್ಲಿತ್ತು. ಆದರೆ ಈ ಪದ್ಧತಿ ಕೃಷ್ಣದೇವರಾಯನ ಮರಣದ ತರುವಾಯ ಕ್ಷಯಿಸಿ ವಂಶಪಾರಂಪರ್ಯವಾಗಿ ಮುಂದುವರಿಯಲಾರಂಭಿಸಿತು. ಈ ಕಾಲದ ಮತ್ತೊಂದು ವಿಶೇಷತೆ ಎಂದರೆ ದಂಡನಾಯಕರುಗಳು ಬಹಳಷ್ಟು ಪ್ರದೇಶಗಳ ಮೇಲೆ ಪ್ರಭುತ್ವವನ್ನು ಹೊಂದಿದ್ದರು. ಉದಾಹರಣೆಯಾಗಿ, ಮಹಾಪ್ರಧಾನ ಸಿಂಗಣ ದಂಡನಾಯಕನು ಬಾರಿಕೂರು ರಾಜ್ಯದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದುದನ್ನು ಕ್ರಿ.ಶ. 1475 ರ ಉಡುಪಿ ತಾಲ್ಲೂಕಿನ ಶಾಸನ ಖಚಿತಪಡಿಸುತ್ತವೆ.[1] ಹಾಗಾಗಿ, ರಾಜಪ್ರತಿನಿಧಿಗಳು ಬಹಳವಾಗಿ ದಂಡನಾಯಕರಾಗಿ ಸಹ ಕಾರ್ಯನಿರ್ವಹಿಸುತ್ತಿದ್ದರು. ಶ್ರೀರಂಗಪಟ್ಟಣ 1565ರ ರಕ್ಕಸದಂಗಡಿ ಯುದ್ಧದ ನಂತರ ರಾಜ್ಯವಾಗಿ ಪರಿವರ್ತಿತವಾದ ಮೇಲೆ ಎರಡನೆ ವೆಂಕಟನು ಚಕ್ರವರ್ತಿಯಾದನು. ಅವನ ತಮ್ಮ ತಿರುಮಲನು ಶ್ರೀರಂಗಪಟ್ಟಣದ ರಾಜಪ್ರತಿನಿಧಿಯಾಗಿದ್ದರೂ ಚಕ್ರವರ್ತಿಯ ಆಜ್ಞೆಗಳನ್ನು ಸಾಮ್ರಾಜ್ಯದ ಹಿತದೃಷ್ಟಿಗೆ ಪೂರಕವಾಗಿ ಪಾಲಿಸದೆ ಬಂಡಾಯವೆದ್ದುದನ್ನು ಕಾಣಬಹುದು. ರಾಜಪ್ರತಿನಿಧಿ ತಿರುಮಲ ಮತ್ತು ಚಕ್ರವರ್ತಿ ವೆಂಕಟಪತಿಯ ಮನಸ್ತಾಪ ಮೈಸೂರು ಸಂಸ್ಥಾನದ ಉದಯಕ್ಕೆ ಕಾರಣವಾಯಿತು. ಅದೇನೇ ಇದ್ದರೂ ನಾಯಂಕರ ಪದ್ಧತಿಯು, ವಿಜಯನಗರ ಸಾಮ್ರಾಜ್ಯದ ಆರಂಭದಿಂದಲೂ ಇದ್ದಿತಾದರೂ ಅದು ಅತ್ಯಂತ ವ್ಯವಸ್ಥಿತ ಹಂತ ತಲುಪಿದುದು ಕೃಷ್ಣದೇವರಾಯನ ಆಡಳಿತಾವಧಿಯಲ್ಲಿ.

ಮಹಾದಂಡನಾಯಕ ಅಥವಾ ದಂಡನಾಯಕರುಗಳ ಅಧೀನದಲ್ಲಿ ಕಂಡುಬರುವ ಅಧಿಕಾರ ವರ್ಗವೇ ನಾಯಕರು, ಅಮರನಾಯಕರು ಮತ್ತು ಪಟ್ಟಿಯ ನಾಯಕರು. ವಿಜಯ ನಗರ ಸಾಮ್ರಾಜ್ಯದ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಯ ಬಗೆಗೆ ಅಧ್ಯಯನ ಮಾಡಿದರು. ಡಾ.ಬಿ.ಎ. ಸಾಲೆತೊರೆ[2]ಯವರು ಮಹಾದಂಡನಾಯಕರ ಅಡಿಯಲ್ಲಿ ಕಾರ್ಯ ನಿರ್ವಹಿಸುವ ನಾಯಕರು, ಅಮರನಾಯಕರು ಮತ್ತು ಪಟ್ಟಿಯ ನಾಯಕರ ನಿರ್ದಿಷ್ಟವಾದ

ಕಾರ್ಯವ್ಯಾಪ್ತಿಯನ್ನು ನಿರ್ಧರಿಸಲು ಸಾಧ್ಯವಿಲ್ಲವೆಂದು ಅಭಿಪ್ರಾಯ ಪಡುತ್ತಾರೆ. ಮುಂದುವರಿದು ನಾಯಕರು ಅಮರ ನಾಯಕರು ರಾಜ್ಯದ ರಾಜ್ಯಪಾಲ ಹುದ್ದೆಯಿಂದ ಆಡಳಿತ ವರ್ಗದ ಸಾಮಾನ್ಯ ಅಧಿಕಾರಿಯವರೆಗೆ ವಿವಿಧ ಸ್ತರದ ಅಧಿಕಾರಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆಂದು ಅಭಿಪ್ರಾಯ ಪಡುತ್ತಾರೆ. ಮುಂದುವರಿದು ಅಮರನಾಯಕರುಗಳು ಮಿಲಿಟರಿ ಆಡಳಿತದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರೆಂದು ಅಭಿಪ್ರಾಯಪಡುತ್ತಾರೆ.[3]

ಫ್ಲೀಟರು ಅಮರನಾಯಕತನದ ಬಗ್ಗೆ ಹೀಗೆ ಅಭಿಪ್ರಾಯ ಪಡುತ್ತಾರೆ. “ಅಮರನಾಯಕತನ ಅಥವಾ ಅಮರನಾಯಕ ಪದ್ಧತಿಯ ಬಗ್ಗೆ ನಿಖರವಾಗಿ ಏನನ್ನೂ ಹೇಳಲಾಗುವುದಿಲ್ಲ ಅಮರನಾಯಕ ಎಂಬುದು ಇಂದ್ರನ ಬಿರುದುಗಳಲ್ಲಿ ಒಂದು. ಅಂದರೆ ಅಳಿವಿಲ್ಲದವರ ನಾಯಕ ಎಂಬ ಅರ್ಥ ಬರುತ್ತದೆ.”[4] ಇದಕ್ಕೆ ಸಾಕ್ಷಿಯಾಗಿ ಸದಾಶಿವರಾಯರು ಮಹಾಮಂಡಲೇಶ್ವರ ರಾಮರಾಜು ತಿರುಮಲದೇವ ಮಹಾರಾಜಯ್ಯನ ಮಗ ರಾಮ ರಾಜು ಗಾರುವಿಗೆ ಪೆನುಗೊಂಡೆ ಸೀಮೆಯ ರಾಜಪ್ರತಿನಿಧಿಯ ಅಧಿಕಾರವನ್ನು ಅಂದರೆ ಅಮರನಾಯಕತನವನ್ನು ನೀಡಿದ್ದನ್ನು ನೋಡಬಹುದು.[5] ಪ್ರಾಂತ್ಯದ ಪ್ರಾಂತ್ಯಾಧಿಪತಿಗಳನ್ನು ಅಥವಾ ರಾಜಪ್ರತಿನಿಧಿಗಳನ್ನು ದಂಡನಾಯಕರೆಂದು ಕರೆಯುವ ಪದ್ಧತಿ ಸಹ ಚಾಲ್ತಿಯಲ್ಲಿತ್ತು. ಸಾಳುವ ಗೋವಿಂದರಾಜನಿಗೆ ಕೃಷ್ಣದೇವರಾಯನು 1522ರಲ್ಲಿ ಕುಡುಗುನಾಡಿನ ತೆಂಕಣಾಂಬಿ ಸ್ಥಳದ ಕೋಡಿಹಳ್ಳಿ ಮತ್ತು ಅದರ ಉಪಗ್ರಾಮಗಳನ್ನು ಅಮರನಾಯಕತನಕ್ಕೆ ನೀಡಿರುವುದನ್ನು ಸಹ ಇಲ್ಲಿ ದಾಖಲಿಸಬಹುದು.[6]

ಕ್ರಿ.ಶ. 1495 ರಿಂದ ಪ್ರಾರಂಭಮಾಡಿ, 1565 ರವರೆಗೆ ಅಮರನಾಯಕತನಕ್ಕೆ ನೀಡಿದ ಹಲವಾರು ದಾನಗಳನ್ನು ಹೆಸರಿಸಬಹುದು. ಆದರೆ ಇವುಗಳಲ್ಲಿ ಅಮರನಾಯಕತನದ ನಿರ್ದಿಷ್ಟವಾದ ವೃತ್ತಿಯಾಗಲೀ, ಕರ್ತವ್ಯಗಳಾಗಲಿ ಆಡಳಿತದಲ್ಲಿ ಅವರು ನಿರ್ವಹಿಸುತ್ತಿದ್ದ ಜವಾಬ್ದಾರಿಗಳಾಗಲಿ ಖಚಿತವಾಗುವುದಿಲ್ಲ.

ಟಿ.ವಿ.ಮಹಾಲಿಂಗಂ ಅವರನ್ನು ಆಧರಿಸಿ ಅಭಿಪ್ರಾಯ ಪಡುವುದಾದರೆ[7] “ಅಮರ ನಾಯಕರುಗಳು ತಮ್ಮ ಆಂತರಿಕ ಆಡಳಿತದಲ್ಲಿ ಬಹಳಷ್ಟು ಸ್ವಾತಂತ್ರ್ಯವನ್ನು ಹೊಂದಿರುತ್ತಿದ್ದರು. ಅಮರನಾಯಕರ ಆಂತರಿಕ ಆಡಳಿತದಲ್ಲಿ ಚಕ್ರವರ್ತಿ ಮಧ್ಯೆ ಪ್ರವೇಶಿಸುತ್ತಿರಲಿಲ್ಲ. ಚಕ್ರಾಧಿಕಪತ್ಯಕ್ಕೆ ಸಲ್ಲಬೇಕಾದ ಅವರ ಜವಾಬ್ದಾರಿಗಳನ್ನು ಅವರು ಸರಿಯಾಗಿ ನಿರ್ವಹಿಸುತ್ತಿರುವವರೆಗೆ ಅವರು ತಮ್ಮ ಕ್ಷೇತ್ರದಲ್ಲಿ ಪ್ರಶ್ನಾತೀತರಾಗಿರುತ್ತಿದ್ದರು. ಅವರುಗಳು ತಮ್ಮದೇ ಆದ ಆಸ್ಥಾನ, ಆಸ್ಥಾನಿಕರು, ಮಂತ್ರಿಮಂಡಲ, ತಮ್ಮ ಆಡಳಿತ ಪ್ರದೇಶದ ಆಡಳಿತ ಮತ್ತು ರಕ್ಷಣೆಗೆ ಸೇನೆಯನ್ನು ಮತ್ತು ಇತರ ಅಧಿಕಾರಗಳನ್ನು ನೇಮಿಸಿಕೊಳ್ಳಲು ಸಂಪೂರ್ಣ ಸ್ವಾತಂತ್ರರಾಗಿದ್ದರು. ಈ ಎಲ್ಲಾ ಸ್ವಾತಂತ್ರ್ಯ ಮತ್ತು ಅಧಿಕಾರಿಗಳು ಪ್ರತಿ ರಾಜ್ಯಪಾಲನ ಅಥವಾ ದಂಡನಾಯಕನ ಸ್ಥಾನ, ಆತನ ಸಾಮರ್ಥ್ಯಶಕ್ತಿ, ಯುಕ್ತಿ ರಾಜನು ಆತನ ಮೇಲೆ ಹೊಂದಿರುವ ವಿಶ್ವಾಸ ಮತ್ತು ಆತನು ರಾಜನಿಗೆ ತೋರಿಸುವ ನಿಷ್ಠೆಯನ್ನು ಅನುಸರಿಸಿದ್ದಿತು. ಕೆಲವೊಂದು ದಂಡನಾಯಕರುಗಳು ನಾಣ್ಯಗಳನ್ನು ಹೊರಡಿಸುವಷ್ಟು ಸ್ವತಂತ್ರರಾಗಿದ್ದರೂ ಅಮರನಾಯಕರಾಗಿದ್ದವರು, ರಾಜನ ಅನುಮತಿ ಇಲ್ಲದೆ ನಾಣ್ಯಗಳನ್ನು ಹೊರಡಿಸಿದರೆ ಅಂಥಹವರನ್ನು ಚಕ್ರವರ್ತಿಗಳು ಶಿಕ್ಷಿಸುತ್ತಿದ್ದುದು ಸಹ ಸಾಮ್ರಾಜ್ಯದಲ್ಲಿ ಚಲಾವಣೆಯಲ್ಲಿತ್ತು. ಯಲಹಂಕನಾದ ಪ್ರಭುಗಳ ಮನೆತನದ ಮೊದಲನೆ ಕೆಂಪೇಗೌಡನು ಸಾಮ್ರಾಟನ ಅನುಮತಿ

ಇಲ್ಲದೆ ಭೈರವ ನಾಣ್ಯಗಳನ್ನು ಟಂಕಿಸಿದ್ದರಿಂದ ರಾಮರಾಯನು ಆತನನ್ನು ರಾಜಧಾನಿಗೆ ಕರೆಸಿಕೊಂಡು ಆತನನ್ನು ಬಂಧನದಲ್ಲಿರಿಸಿದ್ದನೆಂದೂ, ಆತನ ಬಂಧುಮಿತ್ರರೂ ಹಾಗೂ ಹಿತೈಷಿಗಳು ದಂಡತೆತ್ತು ಒಂದನೇ ಕೆಂಪೇಗೌಡನನ್ನು ಬಂಧನದಿಂದ ಬಿಡುಗಡೆ ಗೊಳಿಸಿದ್ದು ಇತಿಹಾಸ ಪುಟಗಳಲ್ಲಿ ದಾಖಲಾಗಿದೆ.[8]

ಅಮರನಾಯಕರುಗಳಾಗಿದ್ದ ರಾಜಪಾಲರುಗಳು ತಮ್ಮ ರಾಜ್ಯದ ಮೇಲಾಗುವ ಧಾಳಿಗಳನ್ನು ಎದುರಿಸಿ ರಾಜ್ಯವನ್ನು ರಕ್ಷಿಸುವ ಮತ್ತು ರಾಜ್ಯವನ್ನು ಸಂರಕ್ಷಿಸುವ ಕಾರ್ಯವನ್ನು ನೆರವೇರಿಸಬೇಕಾಗಿದ್ದಿತು. ಆತನೆ ರಾಜ್ಯದ ಕಂದಾಯ ನಿರ್ವಹಿಸುವ ಅಧಿಕಾರ ಹೊಂದಿದ್ದನಲ್ಲದೆ, ಆ ಪ್ರಾಂತ್ಯದ ಪ್ರಮುಖ ನ್ಯಾಯಾಧೀಶನಾಗಿಯೂ ಕರ್ತವ್ಯ ನಿರ್ವಹಿಸುತ್ತಿದ್ದನು.[9] ನ್ಯೂಜಿಜ್‌ನು ತನ್ನ ವಿವರಣೆಯಲ್ಲಿ ಸಾಮ್ರಾಜ್ಯದ ರಾಜ್ಯಪಾಲರುಗಳು ಮತ್ತು ಅವರುಗಳು ಹೊಂದಿದ್ದ ಸೇನೆ, ಅವರ ವರಮಾನ ಮತ್ತು ಅವರು ರಾಜ್ಯಕ್ಕೆ ಸಲ್ಲಿಸಬೇಕಾಗಿದ್ದ ರಾಜಸ್ವನಿಧಿಯ ಪ್ರಮಾಣವನ್ನು ವಿವರವಾಗಿ ದಾಖಲಿಸಿದ್ದಾನೆ. ಈ ವಿವರಗಳನ್ನು ಡಾ.ಎ.ವಿ. ವೆಂಕಟರತ್ನಂ ರವರ ಕೃತಿಯಲ್ಲಿ ಮತ್ತು ಕರ್ನಾಟಕ ಚರಿತ್ರೆ ಮಾಲಿಕೆಯ ಮೂರನೆ ಸಂಪುಟದಲ್ಲಿ ವಿವರವಾಗಿ ದಾಖಲಿಸಿದ್ದಾರೆ.[10] ಈ ಅಮರನಾಯಕರುಗಳು ಹೊಂದಿದ್ದ ಆದಾಯವನ್ನು ಗಮನಿಸಿದಾಗ ಅತಿ ಕಡಿಮೆ ಎಂದರೆ 15000 ಪರ್ಡಾವೋಗಳ ಆದಾಯವನ್ನು ಹೊಂದಿದ್ದ ಅಮರನಾಯಕರು ಇದ್ದರು. ಅಲ್ಲದೆ ಅತಿ ಹೆಚ್ಚು ಆದಾಯ ಹೊಂದಿದ್ದ ಅಂದರೆ ವಾರ್ಷಿಕವಾಗಿ ಹನ್ನೆರಡು ಲಕ್ಷ ಚಿನ್ನದ ಪರ್ಡಾವೋಗಳ ವರಮಾನ ಹೊಂದಿದ ಅಮರನಾಯಕನಿದ್ದನು. ಈ ಅಮರ ನಾಯಕರು ಹೊಂದಿರಬೇಕಾಗಿದ್ದ ಸೈನ್ಯದ ಸಂಖ್ಯೆ ಹಾಗೂ ಅವರು ಹೊಂದಿರುತ್ತಿದ್ದ ಕಂದಾಯದ ವರಮಾನದಲ್ಲಿ ಏಕರೂಪತೆಯಿರಲಿಲ್ಲ.

| ರಾಜ | ವರಮಾನ | ಸೈನ್ಯ | ರಾಜಸ್ವ |
|---|---|---|---|
| 1. ಮುದಗಲ್ಲಿನ ರಾಜ ಬಾಜಪ್ಪ ನಾಯಕ | 4,00,100 ಪರ್ಡಾವೋ | 10,000ಪದಾತಿ 8,00 ಕುದುರೆ 50 ಆನೆ | 1,50,000 ಪರ್ಡಾವೋ |
| 2. ಬಂದಗರಾದ ರಾಜನರವರ | 4,00,000 ಪರ್ಡಾವೋ | 12,000 ಪದಾತಿ 600 ಕುದುರೆ 20 ಆನೆ | 2,00,000 ಪರ್ಡಾವೋ |
| 3. ಗುತ್ತಿಯ ಆದಪ್ಪನಾಯಕ | 3,00,000 ಪರ್ಡಾವೋ | 8,000 ಪದಾತಿ 800 ಕುದುರೆ 30 ಆನೆ | 40,000 ಪರ್ಡಾವೋ |
| 4. ಅರಸಬಾಜಪನಾಯಕ ಬೂದಿಹಾಳ | 3,00,000 ಪರ್ಡಾವೋ | 10,000 ಪದಾತಿ 800 ಕುದುರೆ 15 ಆನೆ | 10,000 ಪರ್ಡಾವೋ |
| 5. ಬೆನಪ್ಪನಾಯಕ ಕಳಲೆ | 3,00,000 | 10,000 ಪದಾತಿ | 1,00,000 |

ಪರ್ಡಾವೋ 800 ಕುದುರೆ ಪರ್ಡಾವೋ

(ವಿವರಗಳಿಗೆ ಬಿ.ಷೇಕ್‌ಅಲಿ (ಪ್ರ.ಸಂ.) ಕೆ.ಎಸ್.ಶಿವಣ್ಣ ಸಂಪುಟ ಸಂಪಾದಕರು 1997, ಕರ್ನಾಟಕ ಚರಿತ್ರೆ, ಸಂಪುಟ ಮೂರು, ಪುಟ 66–67, ಸಮೀಕ್ಷಿಸಿ)

ಈ ಮೇಲಿನ ಪಟ್ಟಿಯನ್ನು ಗಮನಿಸಿದಾಗ ಅದರಲ್ಲಿ ಎರಡು ಬಗೆಯ ಅಮರನಾಯಕರುಗಳನ್ನು ಪಟ್ಟಿ ಮಾಡಲಾಗಿದೆ. ಅವರುಗಳಲ್ಲಿ ಇರುವ ಏಕೈಕ ಸಮಾನತೆ ಅಂದರೆ ಅವರುಗಳ ಪ್ರದೇಶದಿಂದ ಬರುತ್ತಿದ್ದ ಕಂದಾಯ. ಪಟ್ಟಿಯ ಮೊದಲ ಎರಡು ಅಮರನಾಯಕರು ಹೊಂದಿದ್ದ ಕಂದಾಯ ನಾಲ್ಕು ಲಕ್ಷ ಪರ್ಡಾವೋಗಳಾಗಿದ್ದರೂ ಅವರು ಹೊಂದಿರಬೇಕಿದ್ದ ಸೈನ್ಯದ ಸಂಖ್ಯೆಯಲ್ಲಿ ರಾಜ್ಯಕ್ಕೆ ಸಲ್ಲಿಸಬೇಕಾಗಿದ್ದ ರಾಜಸ್ವ ಮೊತ್ತದಲ್ಲಿ ವ್ಯತ್ಯಾಸವನ್ನು ಕಾಣಬಹುದು. ಅದೇ ರೀತಿ ಕ್ರಮಸಂಖ್ಯೆ, ಮೂರರಿಂದ ಐದನೇ ಅಮರನಾಯಕರ ಕಂದಾಯ ಮೂರು ಲಕ್ಷ ಪರ್ಡಾವೋಗಳಿದ್ದರೂ ಅವರುಗಳು ಹೊಂದಿದ್ದ ಸೈನ್ಯದ ಸಂಖ್ಯೆಯಲ್ಲಿ ಸಲ್ಲಿಸಬೇಕಾಗಿದ್ದ ರಾಜಸ್ವ ಮೊತ್ತದಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಈ ಬಗೆಯ ವ್ಯತ್ಯಾಸಗಳನ್ನು ಈವರೆಗೆ ಪ್ರಕಟವಾಗಿರುವ ಮಾಹಿತಿಗಳನ್ನು ಆಧರಿಸಿ ಅವುಗಳಿಗೆ ಕಾರಣಗಳನ್ನು ಕಂಡುಹಿಡಿಯಲಾಗುವುದಿಲ್ಲ.

ಕರ್ನಾಟಕ ಚರಿತ್ರೆ ಸಂಪುಟ ಮೂರರಲ್ಲಿ ಅಮರನಾಯಕರ ಬಗೆಗೆ ಬರೆಯುತ್ತಾ ಕೆ.ಎಸ್.ಶಿವಣ್ಣರವರು ಅಮರನಾಯಕರನ್ನು ಎರಡು ವಿಭಾಗವಾಗಿ ವರ್ಗೀಕರಿಸುತ್ತಾರೆ.[11] ಪ್ರಥಮ ಶ್ರೇಣಿ ಅಮರನಾಯಕರುಗಳು ರಾಜನ ಅನುಮತಿಯಿಲ್ಲದೆ ಭೂಮಿಯನ್ನು ಅಥವಾ ಹಳ್ಳಿಗಳನ್ನು ಪರಭಾರೆ ಮಾಡುವ ಅಧಿಕಾರ ಹೊಂದಿದ್ದರು. ಇವರು ತಮ್ಮ ಕೈಕೆಳಗೆ ನಾಯಕರುಗಳನ್ನು ಹೊಂದಬಹುದಾಗಿತ್ತು. ಕೋಟೆ ಕಟ್ಟಲು ಸ್ವಂತ ಸೈನ್ಯ ಹೊಂದಲು ಅವಕಾಶ ಹೊಂದಿದ್ದರೆಂದು ತಿಳಿಸುತ್ತಾರಾದರೂ ಈ ವರ್ಗೀಕರಣಕ್ಕೆ ಯಾವ ಆಧಾರವನ್ನು ನೀಡಲಾಗಿಲ್ಲ.

ಆದರೆ ಈ ಅಮರನಾಯಕತ್ತ್ವ ಒಂದು ಬಗೆಯಲ್ಲಿ ರಾಜನು ತನಗೆ ನಿಷ್ಠರಾದ ವರ್ಗವನ್ನು ಸೃಷ್ಟಿಸಿಕೊಳ್ಳಲು ಅನುವು ಮಾಡಿತಲ್ಲದೆ ಆತನು ತನ್ನ ನಿಷ್ಠೆಯನ್ನು ಶ್ರದ್ಧೆಯನ್ನು ರಾಜನಿಗೇ ಹೊಂದಿದ್ದನೇ ಹೊರತು ಅದು ಎಂದೂ ಆಳಲ್ಪಡುವವರ ಪರವಾಗಿ ಇರಬೇಕಾಗಿರಲಿಲ್ಲವೆಂದು ಖಚಿತವಾಗುತ್ತದೆ. ಆದರೆ ಇವರೂ ಆಳರಸರೇ ಆಗಿದ್ದುದರಿಂದ ತಮ್ಮ ಕಾರ್ಯಕ್ಷೇತ್ರದಲ್ಲಿ ಪ್ರಜಾಪರಿಪಾಲನೆಯನ್ನು ಧರ್ಮ, ಶಾಸ್ತ್ರ, ಮತ್ತು ಪೂರ್ವಮರ್ಯಾದೆಗೆ ಅನುಸಾರವಾಗಿ ಅವರೂ ನಿರ್ವಹಿಸಬೇಕಾಗಿದ್ದರಿಂದ ತಮ್ಮ ಜ್ಞಾನ ಮತ್ತು ಪರಿಮಿತಿಯಲ್ಲಿ ತಮಗೆ ಸಾಧ್ಯವಾದ ಮಟ್ಟಿಗೆ ಜನಹಿತ ಕಾರ್ಯಗಳಲ್ಲಿ ತೊಡಗಿಕೊಂಡಿದ್ದರು. ವಿಜಯನಗರ ಸಾಮ್ರಾಜ್ಯದ ಕಾಲಘಟ್ಟದಲ್ಲಿ ತೆರಬೇಕಾದ ಅಧಿಕ ಕರಭಾರವನ್ನು ಹೊಸದಾಗಿ ಸಾಗುವಳಿಗೆ ಭೂಮಿಯನ್ನು ಈಡು ಮಾಡುವ ಮೂಲಕ ಸಾಧಿಸಿದ್ದನ್ನು ಆ ಕಾಲದಲ್ಲಿ ನಿರ್ಮಾಣಗೊಂಡ ಕೆರೆಗಳು ಕೆರೆಗಳ ನಿರ್ವಹಣೆಗೆ ಅವರು ತೋರಿದ ಅಪಾರ ಆಸಕ್ತಿ ಇತ್ಯಾದಿ ಜನಹಿತ ಕಾರ್ಯಗಳು ಸಾಕ್ಷಿಯಾಗುತ್ತವೆ. ಹಾಗಾಗಿ ನಾಯಂಕರ ಪದ್ಧತಿಯನ್ನು ಅನುಸರಿಸಿ ವಿಜಯನಗರ ರಾಜ್ಯವು ಒರ್ಟನ್ ಸ್ಟೀನ್ ಉದ್ಗರಿಸುವಂತೆ ಯೂರೋಪಿನ ಮಧ್ಯಯುಗದ ಊಳಿಗಮಾನ್ಯ ಪದ್ಧತಿಯ ಅನುಕರಣೆಯಾಗಿತ್ತೆಂಬ ವಾದವನ್ನು ಹೇಗೆ ಅಲ್ಲಗಳೆಯಲಾಗಿದೆ ಎಂದು ಡಾ.ರಾಜರಾಮ

ಹೆಗ್ಡೆಯವರು[12] ತಮ್ಮ ಇತ್ತೀಚಿನ ಲೇಖನದಲ್ಲಿ ತಿಳಿಸಿದ್ದಾರೆ.

ಇದು ಯೋರೋಪಿನ ಊಳಿಗಮಾನ ಪದ್ದತಿಯ ಕೆಲವು ಲಕ್ಷಣಗಳನ್ನು ಹೊಂದಿದೆಯಾದರೂ ಅದು ಸಂಪೂರ್ಣವಾಗಿ ಅದರಂತೆ ಕಾರ್ಯ ನಿರ್ವಹಿಸಲಿಲ್ಲ. ಕಾರಣ ಕ್ರಿ.ಶ. 1600ರ ನಂತರದಲ್ಲಿ ಊಳಿಗಮಾನ್ಯ ಪದ್ದತಿಯಲ್ಲಿ ಬೆಳೆದ ಕೆಲವು ಮನೆತನಗಳು ಸ್ವತಂತ್ರ ರಾಜ್ಯಗಳಾಗಿ ಬೆಳೆದುಬಂದವು. ಇಕ್ಕೇರಿಯ ಸಂಸ್ಥಾನ, ಮೈಸೂರು ಸಂಸ್ಥಾನ, ಮಧುರೆಯ ನಾಯಕರು ಇತರ ಹಲವಾರು ದಕ್ಷಿಣ ಭಾರತದ ವಿಜಯನಗರ ಸಾಮ್ರಾಜ್ಯಾನಂತರದ  ಹಲವು ರಾಜ, ರಾಜಮನೆತನಗಳು ಸ್ವತಂತ್ರವಾಗಿ ಬೆಳೆದು ವಿಜಯನಗರ ಬಿರುದುಗಳು, ಅದರ ಲಾಂಛನ ಇತ್ಯಾದಿಗಳನ್ನು ತಮ್ಮ ಪರಂಪರೆಯಲ್ಲಿ ಉಳಿಸಿಕೊಂಡು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಮುಂದುವರಿದವು. ಅಂದರೆ ಇದು ಯೂರೋಪಿನ ಊಳಿಗಮಾನ್ಯ ಪದ್ದತಿಯಲ್ಲಿ ಸಾಧ್ಯವಾಗದ ಒಂದು ಪದ್ಧತಿ. ರಾಜನಾದವನು ಎಂದಿಗೂ ರಾಜನೆ. ಸೇವಕನಾದವನು ಎಷ್ಟೇ ಸಮರ್ಥನು ಶಕ್ತಿಶಾಲಿಯಾಗಿದ್ದರೂ ಅವನು ರಾಜತ್ವವನ್ನು ಸಾಧಿಸುವ ಅಥವಾ ಗಳಿಸುವ ಪರಿಸ್ಥಿತಿ ಎದುರಾಗುತ್ತಿರಲಿಲ್ಲ.

ವಿಜಯನಗರ ಸಾಮ್ರಾಜ್ಯದ ಪ್ರಾರಂಭದ ದಿನಗಳಲ್ಲಿ ರಾಜಮನೆತನದ ಅರಸು ಕುಮಾರರೆ ರಾಜ ಪ್ರತಿನಿಧಿಗಳಾಗಿ ದಂಡನಾಯಕರಾಗಿ, ರಾಜ್ಯಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದರು. ಸಾಳುವ ಮತ್ತು ತುಳುವ ರಾಜಮನೆತನದಲ್ಲಿ ಈ ಪರಿಸ್ಥಿತಿ ಇಲ್ಲವಾದ್ದರಿಂದ ನಾಯಂಕರ ಪದ್ಧತಿಯನ್ನು ಸಾಮ್ರಾಜ್ಯ ರಕ್ಷಣೆಗೆ ಮತ್ತು ಹಿತರಕ್ಷಣೆಗೆ ನಿಯೋಜಿಸಿದ್ದನ್ನು ಕಾಣಬಹುದಾಗಿದೆ. ಅಲ್ಲದೆ ವಿಜಯನಗರದ ಸೈನಿಕ ವ್ಯವಸ್ಥೆಯನ್ನು ಗಮನಿಸಿದಾಗ ರಾಜನು ಎರಡು ಬಗೆಯ ಸೈನಿಕ ವ್ಯವಸ್ಥೆಯನ್ನು ಹೊಂದಿದ್ದನು. ಒಂದು ಸೈನ್ಯವನ್ನು ಆತನು ತನ್ನ ಅಧೀನ ನಾಯಕರಿಂದ ಸಂಗ್ರಹಿಸಿದರೆ ಮತ್ತೊಂದು ಸೇನೆ ಆತನ ನೇರ ನಿಗಾದಲ್ಲಿ ನೇಮಕಗೊಂಡು ಆತನ ಅಂಕೆಯಲ್ಲಿರುತ್ತಿತ್ತು. ತಾನು ಕೈಗೊಳ್ಳಬೇಕಾದ ಸೈನಿಕ ಕಾರ್ಯಾಚರಣೆಯ ಮಾರ್ಗದಲ್ಲಿ ಬರುವ ನಾಯಕರು ಅರಸನಿಗೆ ತಮ್ಮ ನಿಗದಿತ ಸೈನ್ಯವನ್ನು ನೀಡಿ ಸೇನೆಯ ಬಲವನ್ನು ವೃದ್ಧಿ ಪಡಿಸಬೇಕಾಗಿದ್ದಿತು. ಇದು ಸೈನ್ಯವು ಅತಿ ವೇಗವಾಗಿ ಪ್ರಯಾಣದ ಸಾವು ನೋವುಗಳಿಲ್ಲದೆ ತೊಂದರೆಗಳನ್ನು ಶೀಘ್ರವಾಗಿ ನೆರವೇರಿಸಿಕೊಳ್ಳಲು ಸಹಾಯಕವಾಗುತ್ತಿತ್ತು. ವಿವರಗಳಿಗೆ ಕೃಷ್ಣದೇವರಾಯನ ಉಮ್ಮತ್ತು ಧಾಳಿಯ ವಿವರಗಳನ್ನು ನೋಡುವುದು.

ಈ ಎಲ್ಲಾ ವ್ಯವಸ್ಥೆಯ ಆಧಾರದ ಮೇಲೆ ನಾಯಂಕರ ಪದ್ದತಿಯು ವಿಜಯನಗರ ಸಾಮ್ರಾಜ್ಯದಲ್ಲಿ ಕಂದಾಯ, ಸೈನ್ಯ ಮತ್ತು ನಾಗರೀಕ ಆಡಳಿತದಲ್ಲಿ ಅತ್ಯುತ್ತಮ ವ್ಯವಸ್ಥೆಯಾಗಿ ಪ್ರಾರಂಭವಾಯಿತೆಂದು ತಿಳಿಯಬಹುದು.

ಪರಾಮರ್ಶನಗಳು :


1. SII, VII, No. 194
2. ಸಾಲೆತೊರೆ, 1933, Social and Political life in Vijayanagara Empire p. 146 and 267ff

3. ಅದೇ
4. I A IV. P. 329
5. MAR 1925, P. 76
6. ಸಾಲೆತೊರೆ, 1933 ಪೂರ್ವೋಕ್ತ, ಪುಟ 265.
7. T.V.Mahalingam 1967, South Indian Polits, Madras, P. 317
8. ಡಾ. ಕೆ. ಜಿ. ಗೋಪಾಲಕೃಷ್ಣರಾವ್, 2010 ಯಲಹಂಕ ನಾಡಿನ ದಂಗೆಗಳು ಕೆಲವು ಹೊಸ ವಿಚಾರಗಳು, ನಾಡಪ್ರಭು ಕೆಂಪೇಗೌಡರ ಜೀವನ ಮತ್ತು ಸಾಧನೆಗಳು, ಆರ್. ಗೋಪಾಲ್(ಸಂ): ಮೈಸೂರು ಪು.131–134.
9. ಎ.ವಿ.ವೆಂಕಟರತ್ನಂ, 1972, Local Government in the Vijayanagara Empire, Mysore P. 11ff
10. ಬಿ.ಷೇಕ್‌ಅಲಿ (ಪ್ರ.ಸಂ.) ಕೆ.ಎಸ್.ಶಿವಣ್ಣ ಸಂಪುಟ ಸಂಪಾದಕರು 1997, ಕರ್ನಾಟಕ ಚರಿತ್ರೆ, ಸಂಪುಟ ಮೂರು, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಪುಟ 66 ರ ನಂತರ
11. ಅದೇ
12. ರಾಜರಾಮ ಹೆಗ್ಡೆ Burton Steins' Vijayanagara: The New Cambridge History of India I.2, Cambridge: Cambridge University Press, 1994, ಪುಸ್ತಕದ ವಿಮರ್ಶೆ 2005, Journal of Karnataka Studies, November 2004- April-2005 p. 1-5.

## Form IV

### Statement about ownership and other particulars about CHINTHANA BAYALU (Quarterly)

| | | | |
|---|---|---|---|
| 1. | Place of Publication | : | Bantwal, Dakshina Kannada |
| 2. | Periodicity of its publication | : | Quarterly |
| 3. | Printers Name | : | Reshma G. Bhat |
| | Nationality | : | Indian |
| | Address | : | No. 15-109, Modankapu<br>Bantwal Taluk, D.K. - 574 219 |
| 4. | Publishers Name | : | Reshma G. Bhat |
| | Nationality | : | Indian |
| | Address | : | No. 15-109, Modankapu<br>Bantwal Taluk, D.K. - 574 219 |
| 5. | Editors Name | : | Reshma G. Bhat |
| | Nationality | : | Indian |
| | Address | : | No. 15-109, Modankapu<br>Bantwal Taluk, D.K. - 574 219 |
| 6. | Names and address of individuals who own the newspaper and partners or sharesholders holding more than one percent of the total capital | } | Reshma G. Bhat<br>No. 15-109, Modankapu,<br>Bantwala Taluk<br>D.K. - 574 219 |

I, Reshma G. Bhat, hereby declare that the particulars given above are true to the best of my knowledge and belief.

Date: 31 March 2015

**Reshma G. Bhat**
(Publisher)

# ನವನಿಧಿ

1. **ಕನಕನ ಕಿಂಡಿ**
ಸಂ. ಪ್ರೊ.ಎ.ವಿ.ನಾವಡ
ಕನಕದಾಸ ಅಧ್ಯಯನ ಸಂಶೋಧನ ಪೀಠ, ಉಡುಪಿ
ಬೆಲೆ ರೂ. 240/–

2. **ವಿಶ್ವಾಮಿತ್ರ ಮತ್ತು ಮಧ್ಯಮನ ಭಾಗ್ಯ**
(ಎರಡು ನಾಟಕಗಳು)
ಪ್ರೊ.ಎಚ್.ಆರ್. ಅಮರನಾಥ
ನಿಧಿ ಪ್ರಕಾಶನ, ಸಾಗರ
ಬೆಲೆ ರೂ. 100/–

3. **ತ್ಯಕ್ತ**
ಉದಯ ಕುಮಾರ ಹಬ್ಬು
ಅನಂತ ಪ್ರತಿಭಾ ಪ್ರಕಾಶನ, ಕಿನ್ನಿಗೋಳಿ
ಬೆಲೆ ರೂ. 120/–

4. **ಗಮ್ಯ – 1**
ಟಿ. ದೇವಿದಾಸ್
ಜನನಿ ಪ್ರಕಾಶನ, ಸಂಗಮೇಶ್ವರ ಪೇಟೆ
ಬೆಲೆ ರೂ. 200/–

5. **ಗೋಕರ್ಣದ ಆ ದಿನಗಳು**
ಶ್ರೀಮತಿ ಶಾಂತಾ ನಾರಾಯಣ ಉಪಾಧ್ಯಾಯ
ಅವನಿ ರಸಿಕರ ರಂಗ ಪ್ರಕಾಶನ, ಧಾರವಾಡ
ಬೆಲೆ ರೂ. 150/–

6. **ನಾವು ಮತ್ತು ಪ್ರಜ್ಞೆ**
ಆಗುಂಬೆ ಎಸ್.ನಟರಾಜ್
ಹಂಸ ಪ್ರಕಾಶನ, ಬೆಂಗಳೂರು
ಬೆಲೆ ರೂ. 200/–

7. **ಆಮ್‌ಸ್ಟರ್ ಡ್ಯಾಮ್‌ನಿಂದ ಅವಿಗ್ನಾನ್‌ಕ್ಕೆ**
ಆಗುಂಬೆ ಎಸ್. ನಟರಾಜ್
ಹಂಸ ಪ್ರಕಾಶನ, ಬೆಂಗಳೂರು
ಬೆಲೆ ರೂ. 250/–

8. **ಡಾ. ವಿಕ್ರಮ ವಿಸಾಜಿ ಬದುಕು–ಬರಹ**
ಸಂ : ಆದರ್ಶ ವಿಸಾಜಿ
ಬಸವಧರ್ಮ ಪ್ರಸಾರ ಸಂಸ್ಥೆ, ಭಾಲ್ಕಿ
ಬೆಲೆ ರೂ. 50/–

9. **ಇಂತಿ, ನಿಮ್ಮೆಲ್ಲರ ಹಾಸ್ಯ**
ಶ್ರೀನಿವಾಸ ಕುಂಡಂತಾಯ
ಪದ್ಮಾಲಯ, ಪ್ರಕಾಶನ, ಬೆಂಗಳೂರು
ಬೆಲೆ ರೂ. 100/–

10. **ಅಥೆನ್ಸ್‌ನಿಂದ ಇಸ್ತಾಂಬುಲ್‌ಗೆ**
ಆಗುಂಬೆ ಎಸ್. ನಟರಾಜ್
ಹಂಸ ಪ್ರಕಾಶನ, ಬೆಂಗಳೂರು
ಬೆಲೆ ರೂ. 100/–

11. **ನೀಲಿದಾರಿ**
ಡಾ. ಕರುಣಾಕರ ನಿಡಿಂಜಿ
ಶ್ರೀ ದುರ್ಗಾ ಪ್ರಕಾಶನ, ಪುತ್ತೂರು
ಬೆಲೆ ರೂ. 90/–

12. **ಸಿರಿ ಸಂಪದ**
ಸಂ : ಡಾ. ಪಿ. ಅನಂತಕೃಷ್ಣ ಭಟ್ ಮತ್ತು ಪ್ರೊ. ತುಕರಾಮ ಪೂಜಾರಿ
ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರ (ರಿ.) ಬಿ.ಸಿ.ರೋಡು
ಬೆಲೆ ರೂ. 350/–

13. **ಮನಸ್ಸಿದ್ದರೆ ಮಾರ್ಗ**
ಕಂಟ್ರಾಕ್ಟರ್ ಬಿ. ದೇವದಾಸ್
ಆಕೃತಿ ಆಶಯ ಪಬ್ಲಿಕೇಶನ್,
ಮಂಗಳೂರು
ಬೆಲೆ ರೂ. 80/–

14. **ಪೌರಾಣಿಕ ಯಕ್ಷಗಾನದಲ್ಲಿ ಏಕಪಾತ್ರಾಭಿನಯಗಳು,**
ಮಹಾಭಾರತದ ವಂಶಾವಳಿಗಳು
ಮತ್ತು ಮುಖ್ಯಾಂಶಗಳು
ಲೇಖಕರು ಮತ್ತು ಪ್ರಕಾಶಕರು
ಡಾ. ಎಂ. ಶಂಕರ ಭಟ್
ಬೆಲೆ ರೂ. 90/–

15. **ಕನಸಿನ ಕವನಾಮೃತ**
ಪುತ್ತೂರು ಉಮೇಶ್ ನಾಯಕ್
ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್,
ಮಂಗಳೂರು
ಬೆಲೆ ರೂ. 60/–

16. **ಅರಗಿಣಿ**
ಮಲ್ಲಿಕಾ ಜೆ ರೈ
ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್,
ಮಂಗಳೂರು
ಬೆಲೆ ರೂ. 49/–

17. **ಪಾದುಕಾ ಪ್ರದಾನ**
ಅನಂತ ವೈದ್ಯ
ಪವನಜ ಪ್ರಕಾಶನ, ಬೆಂಗಳೂರು
ಬೆಲೆ ರೂ. 200/–

18. **ಸುರಕ್ಷಾ**
(ದಂತ ಆರೋಗ್ಯ ಮಾರ್ಗದರ್ಶಿ)
ಡಾ. ಮುರಲೀ ಮೋಹನ್ ಚೂಂತಾರು
ಚೂಂತಾರು ಸರೋಜಿನಿ ಭಟ್
ಪ್ರತಿಷ್ಠಾನ, ಮಂಗಳೂರು
ಬೆಲೆ ರೂ. 150/–

19. **ರಕ್ತದಾನ ಜೀವದಾನ**
ಡಾ. ಮುರಲೀ ಮೋಹನ್ ಚೂಂತಾರು
ಚೂಂತಾರು ಸರೋಜಿನಿ ಪ್ರತಿಷ್ಠಾನ,
ಮಂಗಳೂರು
(ಉಚಿತ ವಿತರಣೆಗಾಗಿ)

20. **A True Treasure of Reading Pleasure**
Heroor Padmanabha Shetty
True Treasure Publications,
Mangaluru
(Not a Priced Publication)

21. **ಅತಿಶಯ**
ಬೋಲ ಚಿತ್ತರಂಜನದಾಸ ಶೆಟ್ಟಿ
ನಾಗಶಕ್ತಿ ಪ್ರಕಾಶನ, ಮಂಗಳೂರು
ಬೆಲೆ ರೂ. 280/–

★ ಚಿಂತನ ಬಯಲು ತ್ರೈಮಾಸಿಕ ಪತ್ರಿಕೆಯನ್ನು ವೃತ್ತಿಪರವಾಗಿ ನಡೆಸಿಕೊಂಡು ಹೋಗಬೇಕೆಂಬುದು ನಮ್ಮ ಅಪೇಕ್ಷೆ.

★ ಈ ಪತ್ರಿಕೆ ISSN ಮಾನ್ಯತೆ ಪಡೆದಿರುತ್ತದೆ. ISSN 2278-2192

★ ಗಂಭೀರ ಚಿಂತನೆಯನ್ನೊಳಗೊಂಡ ಲೇಖನಗಳು, ವಿಮರ್ಶಾ ಲೇಖನಗಳು ಹಾಗೂ ಸಂಶೋಧನಾತ್ಮಕ ಲೇಖನಗಳನ್ನು ಪ್ರಕಟಣೆಗಾಗಿ ಆಹ್ವಾನಿಸುತ್ತಿದ್ದೇವೆ.

★ ಇಲ್ಲಿ ಪ್ರಕಟವಾಗುವ ಲೇಖನಗಳ ಗುಣಮಟ್ಟವನ್ನು ಉಳಿಸಿ ಬೆಳೆಸುವುದಕ್ಕಾಗಿ, ಲೇಖನಗಳನ್ನು ಆಯಾ ಕ್ಷೇತ್ರಗಳಲ್ಲಿ ಪರಿಣತರಾದವರಿಂದ ಸಮೀಕ್ಷೆ ಮಾಡಿಸಿ, ಅಂದರೆ, ಅನಾಮಿಕ ಸಂಪಾದಕರಿಂದ ಅಭಿಪ್ರಾಯ ಪಡೆದು ಪ್ರಕಟಿಸಲಾಗುವುದು. ತಜ್ಞರ ಸೂಚನೆಗಳನ್ನು ಅನುಸರಿಸಿ, ಅವಶ್ಯವೆನಿಸಿದರೆ, ಸೂಕ್ತ ಪರಿಷ್ಕರಣೆಗಳನ್ನು ಮಾಡುವಂತೆ ಲೇಖಕರನ್ನು ಕೋರಲಾಗುವುದು.

★ ಎಲ್ಲಾ ಪ್ರಕಟಿತ ಲೇಖನಗಳಿಗೆ ಸಂಭಾವನೆ ನೀಡಲಾಗುವುದು.

★ ಲೇಖನಗಳಿಗೆ ಬಹಳ ಕಟ್ಟುನಿಟ್ಟಾದ ಪದಗಳ ಮಿತಿ ಇಲ್ಲ.

★ ಯಾವುದೇ ಆಧಾರಗಳಿಲ್ಲದೆ, ಕೇವಲ ಹೇಳಿಕೆ, ಅಭಿಪ್ರಾಯ ರೂಪದ ಬರಹಗಳನ್ನು ದಯವಿಟ್ಟು ಕಳುಹಿಸುವುದು ಬೇಡ. ಅಗತ್ಯವಿರುವ ಕಡೆಗಳಲ್ಲಿ ಟಿಪ್ಪಣಿ, ಪರಾಮರ್ಶನ ಗ್ರಂಥಗಳು ಇತ್ಯಾದಿ ಮಾಹಿತಿಗಳನ್ನು ಲೇಖನಗಳು ಹೊಂದಿರಲಿ.

★ ಲೇಖನಗಳು ಬೇರೆ ಕಡೆ ಪ್ರಕಟವಾಗಿರಬಾರದು. ಜಾಲಲೇಖ (ಬ್ಲಾಗ್)ಗಳಲ್ಲಿ ಪ್ರಕಟವಾಗಿದ್ದರೆ ವಿವರಗಳನ್ನು ನೀಡಬೇಕು. ಅನುವಾದಿತ ಲೇಖನಗಳಾದರೆ ಮೂಲದ ಬಗ್ಗೆ ಪೂರ್ಣ ವಿವರ ಹಾಗೂ ಮೂಲಲೇಖಕರ ಅನುಮತಿ ಇತ್ಯಾದಿ ತಾಂತ್ರಿಕ ಆವಶ್ಯಕತೆಗಳನ್ನು ಪೂರೈಸಿರಬೇಕು. ಲೇಖನಗಳನ್ನು ಕೈಬರಹ ಅಥವಾ ಬೆರಳಚ್ಚು ಮಾಡಿ ಕಳುಹಿಸುವುದಾದರೆ ಒಂದೇ ಮಗ್ಗುಲಲ್ಲಿ ಇರಲಿ. ಮಿಂಚಂಚೆಯ ಮೂಲಕ ಕಳುಹಿಸಿದರೆ ಉತ್ತಮ. ಟಿಪ್ಪಣಿಗಳು ಲೇಖನದ ಕೊನೆಗೇ ಇರಬೇಕು.

★ ಲೇಖಕರು ತಮ್ಮ ಲೇಖನಗಳ ಪ್ರತಿಗಳನ್ನು ಇಟ್ಟುಕೊಳ್ಳಬೇಕಾಗಿ ಕೋರಿಕೆ.

★ ಲೇಖಕರು ತಮ್ಮ ಪೂರ್ಣ ಅಂಚೆ ವಿಳಾಸ, ಮಿಂಚಂಚೆ ವಿಳಾಸ ಹಾಗೂ ದೂರವಾಣಿ ಸಂಖ್ಯೆಗಳನ್ನು ಕಡ್ಡಾಯವಾಗಿ ನಮೂದಿಸಿರಬೇಕು.

★ ಪುಸ್ತಕ ವಿಮರ್ಶೆ, ಸಮೀಕ್ಷೆಗಾಗಿ ಕೆಲವು ಪುಟಗಳನ್ನು ಮೀಸಲಿಡಲಾಗುವುದು. ಲೇಖಕರು, ಪ್ರಕಾಶಕರು ತಮ್ಮ ಪ್ರಕಟಿತ ಪುಸ್ತಕಗಳ ಎರಡು ಪ್ರತಿಗಳನ್ನು ವಿಮರ್ಶೆ ಸಮೀಕ್ಷೆಗಾಗಿ ಕಳುಹಿಸಿಕೊಡಬಹುದು.

★ ಓದುಗರ ಪ್ರತಿಕ್ರಿಯೆಗಳನ್ನು ಸ್ವಾಗತಿಸುತ್ತೇವೆ.

★ ಚಂದಾದಾರರಿಗೆ ವಂಚನೆಯಾಗುವಂತೆ ಪತ್ರಿಕೆಯನ್ನು ಅರ್ಧದಲ್ಲಿ ನಿಲ್ಲಿಸುವುದಿಲ್ಲ.

★ ಸಂಪರ್ಕ ವಿಳಾಸ: ಸಂಪಾದಕರು, ಚಿಂತನ ಬಯಲು, ನಂ. 15-109

ಮೊಡಂಕಾಪು ಅಂಚೆ, ಬಂಟ್ವಾಳ ತಾಲೂಕು, ದಕ್ಷಿಣಕನ್ನಡ - 574 219.

ಮಿಂಚಂಚೆ: chinthanabayalu@gmail.com

ದೂರವಾಣಿ: 9449772651

RNI Reg No. : KARKAN /2012/49251

**CHINTHANA BALAYU** A Peer Reviewed Journal ISSN 2278-2192
**Kannada Quarterly, Volume 3, Issue 3, January-March 2015**

Edited, Published, Printed & Owned by
**Reshma G. Bhat**
Door No. 15-109, Modankapu Post,
Bantwal Taluk, Dakshina Kannada 574 219.
Printed at
**Aakrithi Prints**
Light House Hill Road, Mangalore - 575 001

**Pages : 64**

ವಾರ್ಷಿಕ ಚಂದಾ : ರೂಪಾಯಿ ಇನ್ನೂರು
(ಅಂಚೆ ವೆಚ್ಚ ಸೇರಿ)
ಮೂರು ವರ್ಷಗಳಿಗೆ : ರೂಪಾಯಿ ಆರುನೂರು
ಐದು ವರ್ಷಗಳಿಗೆ : ರೂಪಾಯಿ ಒಂದು ಸಾವಿರ
ಆಜೀವ (ಪೋಷಕ) ಚಂದಾ : ರೂಪಾಯಿ ಐದು ಸಾವಿರ
ಮಹಾಪೋಷಕ ಚಂದಾ : ರೂಪಾಯಿ ಹತ್ತು ಸಾವಿರ
ಬಿಡಿ ಪ್ರತಿ : ರೂಪಾಯಿ ಐವತ್ತು

ದಯವಿಟ್ಟು ಡಿ.ಡಿ./ಎಂ.ಓ.ಗಳನ್ನು 'ಚಿಂತನ ಬಯಲು' ಹೆಸರಿನಲ್ಲಿ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಚೆಕ್/ಡಿ.ಡಿ. ಮಂಗಳೂರಿನಲ್ಲಿ ಸಂದಾಯವಾಗುವಂತಿರಲಿ. ದಯವಿಟ್ಟು ಹೊರ ಊರಿನ ಚೆಕ್ ಕಳುಹಿಸಬೇಡಿ. ಎಲ್ಲಕ್ಕಿಂತ ಸುಲಭವಾಗಿ ಈ ಕೆಳಗಿನ ಖಾತೆಗೆ ನೇರವಾಗಿ ಸಂದಾಯ ಮಾಡಿ ಪೂರ್ಣವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಸಂದಾಯದ ವಿವರಗಳನ್ನು ಬರೆಯಬಹುದು ಅಥವಾ ಮಿಂಚಂಚೆ ಮೂಲಕ ತಿಳಿಸಬಹುದು. ಬ್ಯಾಂಕ್ ಚಾರ್ಜನ್ನು ಚಂದಾದಾರರೇ ದಯವಿಟ್ಟು ಭರಿಸಬೇಕು.

**ಕರ್ನಾಟಕ ಬ್ಯಾಂಕ್**
ಬಂಟ್ವಾಳ ಮೂಡ ಶಾಖೆಯಲ್ಲಿ
**ಚಿಂತನ ಬಯಲು** ಹೆಸರಿನಲ್ಲಿರುವ

**ಕರೆಂಟ್ ಅಕೌಂಟ್ ಸಂಖ್ಯೆ : 0712000100041401**

**IFSC: KARB 0000071**

**ಸುಲಭ ಬ್ಯಾಂಕಿಂಗ್ ಸೇವೆಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ ಅಥವಾ 1800 425 1444ಗೆ ಕರೆ ಮಾಡಿರಿ**

**ಕರ್ನಾಟಕ ಬ್ಯಾಂಕ್ ಲಿ.**
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 ಇಮೇಲ್: info@ktkbank.com ವೆಬ್‌ಸೈಟ್: www.karnatakabank.com